REGISTERED No. M. 2206 ॥ ಶ್ರೀಜಗದ್ಗುರು ಪಂಚಾಚಾರ್ಯಾ: ಪ್ರಸೀದಂತು ॥ REGISTERED No. M. 2206

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾತಪಸಂಕಲಾಪಭಪತಿ: ಪಂಚಾಸ್ಯಪೀಠಾಧಿಪರ್ । ಪಂಚಶ್ಲೋಕವಿಚಾರಕರ್ ಪರಶರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರಪಿಯೂಷಾಮಕರ: ಪೀಲಿಸಪ್ತಪಂಚಾಕ್ಷರೀಮಂತ್ರಧರ: । ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ ೪ ಆಣೆ — ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ. ೪ ಆಣೆ

ಸಂಪುಟ ೧೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೭ನೇ ಜನವರಿ ೧೯೪೬ [ಸಂಚಿಕೆ ೩೪

ಪಂಡಿತಜನಗಳ ಮುಖ್ಯ ಕರ್ತವ್ಯ

ಲೇ—ಶ್ರೀ ॥ ಜ॥ ಪ್ರ॥ ಸಿದ್ಧಲಿಂಗಶಿವಾಚಾರ್ಯರು
ಹೊಗುಂದಿ

ಜಗತ್ತಿನಲ್ಲಿ ವೀರಶೈವ ಪಂಡಿತರೂ, ಶಾಸ್ತ್ರಿಗಳೂ, ಇಷ್ಟೆ ಜನಬರಗಳನ್ನು ಬರೆಯುವ ಮೇಧಾವಿಗಳೂ ಅಸಂಖ್ಯಾತರಿದ್ದಾರೆ ಆದರೆ ಇವರು ಕೇವಲ ಜಾತ್ಯ ನಾಚಾರಿಯಾಗಿರುವುದನ್ನು ಮತ್ತೆ ಅವಲೋಕಿಸಿ ಅವುಗಳ ಲ್ಲಿರುವ ತೃಣಾದಾದಿ ರಸಗಳನ್ನು ಸುರಿಮಳೆಯಂತೆ ಸುರಿಸಿ ಸಂಸಾರಸಾಗರದಲ್ಲಿ ಬಿದ್ದು ಒದ್ದಾಡುತ್ತಿರುವ ಜನಜಂಗುಳಿಯನ್ನು ಮತ್ತೆಪ್ಪು ಮುಳುಗುವಂತೆ ಹುರಿ ಮುಂಬಿಸುತ್ತಿರುವರು ಈಗ ಬರೆದಿರುವ ನವೀನ ಕಥೆ ಕಾದಂಬರಿಗಳನ್ನ ವಲೋಕಿಸಿದರೆ ಅವು ಮಾನವ ಜನ್ಮದ ಧ್ಯೇಯವೇನೆಂಬುದನ್ನು ಮರೆಸಿ ಕಣ್ಮುಚ್ಚುತ್ತಲಿರುವವು ಪಂಡಿತರಾದವರು ಸನಾತನ ಮತಗ್ರಂಥಗಳಿಗೆ ತಿಲಾಂಜಲಿ ಯನ್ನಿತ್ತಿರುವುದರಿಂದ ಧರ್ಮಾಚರಣೆಗಳು ದಿನೇ ದಿನೇ ಕೃಷ್ಣಪಕ್ಷದ ಚಂದ್ರನಂತೆ ಕ್ಷೀಣಸ್ಥಿತಿಯನ್ನು ಹೊಂದುತ್ತಲಿರುವವು ಈಗಿನ ಕೆಲ ಉದ್ಯಾಮಿ ಪಂಡಿತರು ಧನಪ್ರತಿಷ್ಠೆಯ ಬೆನ್ನು ಹತ್ತಿ ನೇದಾಗಮೋಕ್ತ ಹತ್ತುಗಳತ್ತ ವಲೋಕಿಸದೆ ಅವುಗಳಿಗೆ ವಿರುದ್ಧವಾದ ತತ್ವ ಗಳನ್ನು ಸ್ವಕಪೋಲಕಲ್ಪನೆಯಿಂದ ಹುಟ್ಟಿಸಿ ಪಂಚಸೂರ ಗಳಿಗಿಂತಲೂ ಪಟ್ಟಪೀಠಗಳು, ಪಟ್ಟಪೀಠಗಳಿಗಿಂತಲೂ ಸಪ್ತಪೀಠಗಳು, ನವಗ್ರಹಗಳಿಗಿಂತಲೂ ದಶಗ್ರಹಗಳು, ಪಂಚತತ್ವಗಳಿಗಿಂತಲೂ ಷಟ್‌ತತ್ವಗಳು ಇವೆಯೆಂದು ಹೇಳಿ ಎನೂ ತಿಳಿಯದ ನಿಷ್ಕಲ್ಪಷ ಹೃದಯರನ್ನು ಅತ್ತಿಂದಿತ್ತ ಇತ್ತಿಂದತ್ತ, ತಿರುಗಾಡಿಸುತ್ತ (ಉಸೋ ಉಸೋ ಶಿವ ಶಿವ) ಎಳ್ಳು ಮಂತೆ ಮಾಡುತ್ತಿರುವರು ಇದು ಪಂಡಿತರ ಕರ್ತವ್ಯವೇ? ಶ್ರೀ ರಾಮಕೃಷ್ಣಪರಮಹಂಸರ ಪರಮೆ ಶಿಷ್ಯರಾದ ಸ್ವಾಮಿ ವಿವೇಕಾನಂದರು ಪರದೇಶ ಗಳಲ್ಲಿ ಸಂಚರಿಸಿ ಸನಾತನವಾದ ಹಿಂದೂ ಧರ್ಮವನ್ನು ಪ್ರಚಾರಪಡಿಸಿ ಇಂದಿಗೂ ಕೀರ್ತಿಕಾಯರಾಗಿರುವರು. ಪಂಚಪೀಠಗಳ ಪರಮ ಶಿಷ್ಯಂದಿರಾದ ಲೋಕಮಾನ್ಯ ಪಂಡಿತ ಶ್ರೀಜಾತೀನಾಥಶಾಸ್ತ್ರಿಗಳವರು ಸನಾತನ ವೀರ ಶೈವ ಮತದ ಧರ್ಮಧ್ವಜವನ್ನು ಅಚ್ಚಳಿಯದಂತೆ ಸ್ಥಿರಪಡಿಸಿರುವರು. ಇಂದಿಗೂ ಸ್ಥಿರಪಡಿಸುತ್ತಲಿರುವರು "ಶ್ರೇಯಾಂಸಿ ಬಹುವಿಘ್ನಾನಿ" ಎಂಬಂತೆ ಈ ಪಂಡಿ ತೋತ್ತಮರ ಕಾರ್ಯಗಳಿಗೆ ಎಷ್ಟೋ ವಿಘ್ನಾದಿಗಳು ಬಂದರೂ ಅವೆಲ್ಲಾ ವೀರಾಚಾರ್ಯರ ಪಾದ ಕೃಪೆಯಿಂದ ಧ್ವಂಸಮಾಡಿ ತಮ್ಮ ಶರೀರವನ್ನೇ ಧಾರೆಯನ್ನೆರೆ ದಿರುವರು. ಅಂಜನೇಯನು ಭಕ್ತಿವಿಶೇಷದಿಂದ ತನ್ನ ಎದೆಯನ್ನು ಸೀಳಿ ಜಗತ್ತಿಗೆ ಹೇಗೆ ತೋರಿಸಿದನೋ ಆದರಂತೆಯೇ ಈ ವಿದ್ವನ್ಮಣಿಗಳು ಪಂಚಪೀಠಾಚಾರ್ಯ ರಲ್ಲಿರುವ ತಮ್ಮ ನಿಜಭಕ್ತಿಯನ್ನು ಜಗತ್ತಿಗೆ ತೋರಿಸಿದು ವರು. ಪಂಡಿತರ ಪ್ರತಿಯೊಂದು ರೋಮ ರೋಮದ ಲ್ಲಿಯೂ ಪಂಚಾಚಾರ್ಯ ಭಕ್ತಿರಸವು ಹೊರಸೂಸುತ್ತಿರು ವುದು ಇಷ್ಟಲ್ಲವೇ ಪಂಡಿತರ ಕರ್ತವ್ಯ? ಇವರಂತೆ ಪ್ರತಿ ಯೊಬ್ಬ ಪಂಡಿತರೂ ಉಪಾಚಾರ್ಯರೂ ಮೇಧಾವಿಗಳೂ ಸಮಾಜಕಾರ್ಯಗಳಲ್ಲಿಯೇ ಅಗಲಿ ಧರ್ಮಸಂಬಂಧ ಕಾರ್ಯ ಗಳಲ್ಲಿಯೇ ಅಗಲಿ ವಿಶೇಷವಾಗಿ ಪಾಡುವರೆಂದರೆ ನಮ್ಮ ಮತದ ಪ್ರಕಾಶವು ಇನ್ನೂ ಮುಂದುವರೆಯುವದೆ ರಲ್ಲಿ ಯಾವ ಸಂಶಯವಿಲ್ಲೆಂದು ಹೇಳಬಹುದು. ಇನ್ನು ಮುಂದಾದರೂ ಪಂಡಿತರಾದವರು ಧನಾಕಿಯ ಬಲೆಗೆ ಬೀಳದೆ ಶ್ರೀಜಾತೀನಾಥ ಪಂಡಿತರು ಹಾಕಿತೊಟ್ಟಿರುವ ಸನಾತನ ವೈದಿಕಮಾರ್ಗವನ್ನು ಹಿಡಿದು ಧನ್ಯರಾಗ ಬೇಕೆಂದು ಕೋರುತ್ತೇನೆ

ವಿವಾಹಮಹೋತ್ಸವ

ಶಿವನೊಗ್ಗಾ ಡಿ। ನ್ಯಾಮತಿ ಮ॥ ರಾ। ಜೀರಿಗೆ ವೀರಭದ್ರಪ್ಪನವರ ಸ್ವಗೃಹದಲ್ಲಿ (ತಾ) 14 12 43) ಶುಕ್ರವಾರ ಮ॥ ರಾ॥ ವೀರಭದ್ರಪ್ಪನವರ ಪುತ್ರ ಚಿ॥ ನಿದ್ದವೀರಪ್ಪ ಎಂಬ ಚಿರಂಜೀವಿಗೂ ಚಿನ್ನಗಿರಿ ತಾಲ್ಲೂಕಿನ ಕರೇಕಟ್ಟೆ ಕೋರೆಶೆಟ್ಟರ ಮ ರಾ॥ ಒಸಲಿಂಗಪ್ಪನವರ ಪುತ್ರಿ ಚಿ। ಸೌ॥ ಸುಲೋಚನಮ್ಮ ಎಂಬ ವಧುವಿಗೂ ಮ॥ ರಾ। ಒಸಲಿಂಗಪ್ಪನವರ ಜ್ಯೇಷ್ಠ ಪುತ್ರ ಚಿ। ಒಸಪ್ಪ ಎಂಬ ವರನಿಗೂ ತುಮ್ಮಿನಕಟ್ಟೆ ಮ॥ ರಾ॥ ಪಂಪಾಳ ಅಜ್ಜಪ್ಪನವರ ಪುತ್ರಿ ಚಿ। ಸೌ॥ ಒಸವನ್ನು ಎಂಬ ವಧುವಿಗೂ ವಿವಾಹಮಹೋತ್ಸವವು ವಿಶೇಷ ವೈಭವದಿಂದ ನೆರವೇರಿತು ಈ ಶುಭಸುಮುಹೂರ್ತ ಸಮಯದಲ್ಲಿ ಶ್ರೀ ರಂಭಾಪುರೀ ಜಗದ್ಗುರುಮಹಾಸ್ವಾಮಿಗಳ ನೂತನ ವಧೂವರರ ಶ್ರೇಯೋಭಿವೃದ್ಧಿಗಾಗಿ ೨೫ ರೂ ಕಾಣಿಕೆಯನ್ನೂ ಪಂಚಾಚಾರ್ಯ ಪ್ರಭಾ ಶ್ಲೋಷಣಾರ್ಥ ವಾಗಿ ೨ ರೂ ಗಳನ್ನೂ ಕಾರ್ಯಕರ್ತರಿಗಳಾದ ಮ॥ ರಾ॥ ವೀರಭದ್ರಪ್ಪನವರು ಸಮರ್ಪಿಸಿದರು ಬಳಿಕ ನ್ಯಾಮತಿ ಮ॥ ರಾ॥ ಶೆಟ್ಟರ ಚಿನ್ನಪ್ಪನವರ ಕೋರಿಕೆಯಂತೆ ನೇ। ಗುಬ್ಬಿ ಶಿವರುದ್ರಶಾಸ್ತ್ರಿಗಳವರು ಗೃಹಸ್ಥಾಶ್ರಮ ಎಂಬ ವಿಷಯಕವಾಗಿ ಸರಸ ಭಾಷಣ ಮಾಡಿದರು ಇವೇ ದಿವಸ ಸಾಯಂಕಾಲ ಕೀರ್ತನಕೇಸರಿ ವೆ॥ ಗುಬ್ಬಿ ಶಿವರುದ್ರಶಾಸ್ತ್ರಿಗಳವರು ಗಿರಿಜಾಕಲ್ಯಾಣ ಎಂಬ ಶಿವಕಥೆಯನ್ನು ರಸಭರಿತವಾಗಿ ಆಖ್ಯಾನ ಮಾಡಿದರು ಈ ಮಂಗಲಕಾರ್ಯಕ್ಕೆ ಅನೇಕ ಲೌಕಿಕ ವೈದಿಕ ಮಹೋದಯರೂ ಬಂಧುಮಿತ್ರರೂ ಆಗಮಿಸಿದ್ದರು

ಪ್ರತ್ಯಕ್ಷದರ್ಶಿ

೧೫೦ ವರ್ಷ ಜೀವಿಸಲು ಸಂಜೀವಿನಿ

೧೫೦ ವರ್ಷಕಾಲ ಸ್ತ್ರೀಪುರುಷರು ಜೀವಿಸಬಲ್ಲ ಸಂಜೀವಿನಿಯೊಂದನ್ನು ಬ್ರಿಟನ್ನಿನಲ್ಲಿ ಕಂಡುಹಿಡಿಯ ಲಾಗಿದೆ. ಕೇವ ಇನ್ಸ್ಟಿಟ್ಯೂಟಿನ ಆಲೆಕ್ಸಾಂಡರ್ ಮೊಗೊಲೆಟ್ಸ್ ಎಂಬವರು ೧೫೦ ವರ್ಷಕಾಲ ಜೀವಿಸಲು ಶಕ್ತಿಕೊಡುವ ಒಂದು ಸೀರಂ ಕಂಡುಹಿಡಿದಿ ದ್ದಾರಂತೆ! ಇದನ್ನು ಕುದುರೆಯ ವೀರ್ಯದಿಂದ ತಯಾರಿಸಲಾಗಿದೆಯಂತೆ!

ಶ್ರೀಮನ್ಮಹಾರಾಜರವರಿಗೆ ನೂತನ ಬಿರುದು

ನಮ್ಮನ್ನಾಳುತ್ತಿರುವ ಶ್ರೀಮನ್ಮಹಾರಾಜರವರಿಗೆ, ಬ್ರಿಟಿಸ್ ಸಾರ್ವಭೌಮ ಸರಕಾರದಿಂದ 'ಜಿ. ಸಿ. ಜಿ. ಎಂಬ ಹೊಸ್ತ ಬಿರುದು ದೊರಕಿದೆ. ಮತ್ತು ಶ್ರೀಮನ್ಮಹಾ ರಾಜರವರ ಆಪ್ತ ಕಾರ್ಯದರ್ಶಿಗಳಾದ, ಅಮಾತ್ಯ ರಿರೋಮಣಿ ಟಿ ತಂಬೂಚೆಟ್ಟಿಯವರಿಗೆ 'ಸರ್' ಎಂಬ ಬಿರುದು ದೊರಕಿದೆ.

ಸ್ವೀಕಾರ

ಹುಬ್ಬಳ್ಳಿ ಟವನ್ನಿನಲ್ಲಿರುವ ಮ॥ ರಾ॥ ಗಂಗಪ್ಪಾ ಹುರಕಡ್ಲಿ ಇವರ ತಮ್ಮ ಚಿ। ಕುಮಾರಪ್ಪನ ವಿವಾಹ ಸಮಯೆದಲ್ಲಿ ಪ್ರಭಾಪೋಷಣಕ್ಕೆಸ್ಕರ ಸಮರ್ಪಿಸಿದ 2 ರೂಪಾಯಿಗಳು ಆವರ ವಂಶಗುರುಗಳಾದ ಶ್ರೀ॥ಸ॥ಪ್ರ॥ ಸಪ್ತ ಗೇರಿ ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ.

ಶಿವಮೊಗ್ಗಾ ಡಿ॥ ನ್ಯಾಮತಿ ಗ್ರಾಮದಲ್ಲಿರುವ ಮ॥ರಾ॥ ಜೀರಿಗೆ ವೀರಭದ್ರಪ್ಪನವರ ಗೃಹದಲ್ಲಿ ನೆರವೇರಿದ ವಿವಾಹ ಸಮಯದಲ್ಲಿ ಸದರಿ ವೀರಭದ್ರಪ್ಪನವರು ಪ್ರಭಾಪೋಷಣ ಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ವೇ॥ ಗುಬ್ಬಿ ಶಿವಕಥಾಪಂಡಿತ ಶಿವರುಪ್ರಕಾಶ್ಶಾಸ್ತ್ರಿಗಳವರ ದ್ವಾರಾ ತಲ್ಪಿರು ತ್ತವೆ

ಹುಬ್ಬಳ್ಳಿ ಟವನ್ನಿನಲ್ಲಿರುವ ಮ॥ ರಾ॥ ಲಿಂಗಪ್ಪಾ ಭದ್ರಾಪುರ ಇವರ ಪುತ್ರಿ ಚಿ॥ ಸೌ॥ ಪಾರ್ವತಮ್ಮನವ್ವನ್ನು ಮ॥ರಾ॥ ಗಂದಾಳ ಉಳುವಪ್ಪನವರ ಪುತ್ರ ಚಿ॥ ಶಂಕರಪ್ಪ ನಿಗೆ ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ಪ್ರಭಾ ಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ವೇ॥ ಜಿ ವಿ ನಂದಿಕೇಶ್ವರಮಠ ಇವರ ದ್ವಾರಾ ತಲ್ಪಿರು ತ್ತವೆ

ಸೊಲ್ಲಾಪುರ ಟವನ್ನಿನಲ್ಲಿರುವ ಚಿ॥ ಶಿವಶಂಕರಪ್ಪಾ ವಜ್ರದಕರ ಇವರಿಗೆ ಮ॥ ರಾ॥ ಜಗನ್ಮಾಥರಾವ್ ಮೇಣ ಕುದಳೆ ಫಂಡರಿಜೂರ್‌ಕರ್ ಇವರ ಪುತ್ರಿ ಚಿ॥ ಸೌ॥ ಸುಧದ್ರಾಬಾಯಿಯನ್ನು ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಶ್ರೀ ನಂದೀಮಠದ ಸ್ವಾಮಿಗಳವರು ಮತ್ತು ಶ್ರೀ ಜೈನಾಪುರಸ್ವಾಮಿಗಳವರು ೨ ರೂಪಾಯಿಯನ್ನು ತೆಗೆಸಿ ಕಳುಹಿಸಿರುತ್ತಾರೆ.

ಹುಬ್ಬಳ್ಳಿ ಟವನ್ನಿನಲ್ಲಿರುವ ಸಾವಂತ್ರವ್ಯಾ ವಸ್ತ್ರದ ಇವರು ತಿವಾಧಿನರಾದ ಸಮಯದಲ್ಲಿ ಹುಮಣಾಬಾದಿ ಮಾಸ್ತರರು ಪ್ರಭಾಪೋಷಣಕ್ಕಾಗಿ ತೆಗೆಯಿಸಿದ ೨ ರೂಪಾ ಯಿಯು ವೇ॥ ಜಿ. ವಿ. ನಂದಿಕೇಶ್ವರಮಠ ಇವರ ದ್ವಾರಾ ತಲ್ಪಿರುತ್ತದೆ

ಈ ಮೇಲ್ಕಂಡ ಮಹಾತಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇನೆ.

ಸಂಚಾಚಾರ್ಯಪ್ರಬಾ

೧೯೪೬ನೆಯ ಜನವರಿ ತಾ|| ೭ ಸೋಮವಾರ

ಶ್ರೀಜಗದ್ಗುರು ಎತ್ತಿವರಾಪ್ಪಿಠೀವರ ವಿಜಯ

ಭೂಕೈಲಾಸ ಶ್ರೀಪ್ರ ಪ್ರದೇಶ ವಿರಜಿಸುವ ಶ್ರೀಜಗದ್ಗುರು ವಿಶ್ವಾರಾ ಸಂಸ್ಥಾನ ಮಠದಿಂದ ಒಡಗಿದ್ದ ತೊಂದರೆಯು ಕಳಂಕ ರಹಿತ ರೀತಿಯಲ್ಲಿ ಸರ್ವರ ಆಡಳಿತದ ನಿವಾರಣೆಯಾಗಿ ಬಹಿರಂಗ ಸನ್ಮಾನೋತ್ಸವವು ವಿಜೃಂಭಣೆಯಿಂದ ನೆರವೇರುವಂಥ ವಿಷಯವನ್ನು ಓದುಗರು ತಿಳಿದಿರುವರಷ್ಟೆ. ಶ್ರೀಮಠದ ಬ್ಯಾಂಕಿನ ಸುಮಾರು ಘನಾದ ಲಕ್ಷ ರೂಪಾಯಿ ವಿಶಿಷ್ಟಾಧ್ಯ ಬ್ಯಾಂಕಿನ ಎಲ್ಲಾ ಠೇವಣಿದಾರರಿಗೂ ಬ್ಯಾಂಕು ನಷ್ಟವಾದ ಹಣ ನೀಡಲು ಕೊಂಚ ಹಿಡಿಸಿತ್ತು. ಈ ಸಂಗತಿಯನ್ನು ಶ್ರೀಜಗದ್ಗುರು ವಿರಕ್ತ ಮಿಷಯ ಬಂದಾಗಲೆಲ್ಲ ಪ್ರಸ್ತಾಪಿಸುತ್ತಿದ್ದರು. ಶ್ರೀಮಠದ ಆ ಬ್ಯಾಂಕು ಬಂದ್ ಆಗುವುದಕ್ಕೆ ಮುಂಚೆ ಶ್ರೀಮಠದ ಸಂಸ್ಥಾನಾಧಿಪತಿಗಳಾಗಿದ್ದ ಶ್ರೀಮದ್ ಜಗದ್ಗುರು ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳವರು ತಮ್ಮ ಜೀವಿತಾವಧಿಯಲ್ಲಿ ಆ ಬ್ಯಾಂಕಿನಲ್ಲಿ ಸಾಕಷ್ಟು ಹಣವನ್ನು ಠೇವಣಿ ಇಟ್ಟಿದ್ದರು. ಆ ಹಣವನ್ನು ಹಿಂತೆಗೆದುಕೊಳ್ಳಲು ಅವರು ಕಾಲವನ್ನು ಪಡೆಯುತ್ತಿದ್ದರು. ಆದರೆ ಅವರು ಕಾಲವನ್ನು ಪಡೆಯುತ್ತಿದ್ದಂತೆಯೇ ಬ್ಯಾಂಕು ಬಂದ್ ಆಗಿ ಹೋಯಿತು. ಆ ಹಣವನ್ನು ಠೇವಣಿದಾರರಿಗೆ ಕೊಡಲು ಶ್ರೀಜಗದ್ಗುರುಗಳವರು ಸಂಕಲ್ಪಿಸಿದ್ದರು. ಆ ಸಂಕಲ್ಪವನ್ನು ಈಡೇರಿಸಲು ಶ್ರೀಜಗದ್ಗುರುಗಳ

ಕ್ಯಾ। ಪಾನವಾಜ್, ಕ್ಯಾ। ಸೇಗಾಲ್ ಮತ್ತು ಲೆ। ಧಿಲ್ಲಾರನ್ನರುಗಳಿಗೆ ಕೋರ್ಟ್‌ಮಷಲರು ಜಾಮಾಫಿ ತಿಕ್ಷೆಯನ್ನು ವಿಧಿಸಿದ್ದರು ಆ ತಿಕ್ಷೆಯನ್ನು ಭಾರತದ ಶ್ರೇಷ್ಠ ಸೈನ್ಯಾಧಿಕಾರಿಗಳು ಮನ್ನಿಸಿ, ಆಪಾದಿತರುಗಳನ್ನು ಬಿಡುಗಡೆ ಮಾಡಿದ್ದಾರೆ ಆಪಾದಿತರುಗಳನ್ನು ಭಾರತ ಸೈನ್ಯದಿಂದ ತೆಗೆದುಹಾಕಿ, ಅವರಿಗೆ ಸಲ್ಲಬೇಕಾಗಿದ್ದ ಹಿಂದಿನ ಸೌಲಭ್ಯಗಳನ್ನು ಸರ್ಕಾರಕ್ಕೆ ವಕಪಡಿಸಿಕೊಳ್ಳಬೇಕೆಂಬ ತೀರ್ಪನ್ನು ಕಮ್ಯಾಂಡರ್ ಇ ಚೀಫ್‌ರವರು ಕಾಯಂ ಮಾಡಿದ್ದಾರೆ

ಕ್ಯಾ। ಸೇಗಾಲ್ ಮತ್ತು ಲೆ। ಧಿಲ್ಲಾರವರುಗಳ ಮೇಲೆ ಹೊರಿಸಿದ್ದ ಕೊಲೆ ಮತ್ತು ಕೊಲೆಗೆ ಸಹಾಯ ನೂಡಿದರೆಂಬ ಆಪಾದನೆಯಲ್ಲಿ ಆರುಗುಗಳನ್ನು ಬಿಡುಗಡೆ ನೂಡಲಾಗಿದೆ ಮತ್ತು ಇವರ ಕ್ರೂರ ಕೃತ ನೆಯ ಆಪಾದನೆಯು ರುಜುವಾತಾಗಿಲ್ಲವೆಂದೂ ತಿಳಿಸಲಾಗಿದೆ ಕ್ಯಾ। ಪಾನವಾಜ್‌ರವರು ಕೊಲೆಗೆ ಸಹಾಯ ನೂಡಿದರೆಂಬ ಆಪಾದನೆ ರುಜುವಾತಾಗಿದ್ದರೂ, ಪ್ರಕೃತ ಸರಿಸ್ಥಿತಿಯನ್ನು ಕಮ್ಯಾಂಡರ್ ಇ ಚೀಫ್‌ರವರು ಯೋಚಿಸಿ ವಿಡುಗಡೆ ಮಾಡಿದ್ದಾರೆ

ಈ ಸಂದರ್ಭದಲ್ಲಿ ಆಪಾದಿತರ ಪರವಾಗಿ ಕೋರ್ಟ್ ನೂರ್ಷಲ್ಲಿನಲ್ಲಿ ಸಾಮಾಯಕರಾದ ಸುಪ್ರಸಿದ್ಧ ವಕೀಲ ಸುಂಡಲಿಗೂ, ಅದರಲ್ಲಿಯೂ ಒಬ್ಬ ದಕ್ಷ ತೆಯಿಂದ ವಾದ ಮಾಡಿ ಶಾಸನಪ್ರತಿಣಾಠನ್ನೆಲ್ಲಾ ಬೆರಗುಗೊಳಿಸುವ ಜಂತರ ರಾಷ್ಟ್ರೀಯ ಕಾನೂನಿನ ತಕ್ಕವನ್ನು ಹೊರಪಡಿಸಿ ನ್ಯಾಯವಾದಿ ಶ್ರೀ ಭೂಲಾಭಾಯಿ ದೇಸಾಯಿಯವರಿಗೂ ಎರತ ದೇಶದೆಲ್ಲೆ ಸಂತೋಷೌಗೂಡಿ ಕವಾದ ಕೃತಜ್ಞತೆಯನ್ನು ಸಮರ್ಪಿಸಿದೆ

ಪಾನವಾಜ್ ಖಾನರ ಭಾಷಣ

ಭಾರತದಲ್ಲಿ ಜಪಾನಿ ಸಾಮ್ರಾಜ್ಯ ಶಾಹಿಯನ್ನು ಸ್ಥಾಪಿಸಬೇಕೆಂದು ಶ್ರೀ ಸುಭಾಷ್‌ಚಂದ್ರಬೋಸರು ಇಚ್ಛಪಟ್ಟಿದ್ದರೆಂಬುದು ಶುದ್ಧ ಸುಳ್ಳು ಜೆ ಜೆ ಸಾಡಿ ಸಲ್ಲಿನಲ್ಲಿ ನಾವು ಮಿತ್ರ ಯೋಧರಕ್ಷೆ ದುರಿಸಿ ಕಾಳಗ ಮಾಡುತ್ತಿದ್ದಾಗ, ನಮ್ಮಲ್ಲಿದ್ದ ಆಹಾರವೆಲ್ಲಾ ಮುಗಿದುಹೋಗಿ ಬ್ಬದರಿಂದ, ಕಾಡು ಹುಲ್ಲನ್ನು ತಿಂದು ಹೋರಾಟವನ್ನು ಮುಂದುವರಿಸುತ್ತಿದ್ದೆವು ಬ್ರಿಟಿಷರು ನಮಗೆ ಆಗ ಒಂದು ಪತ್ರ ಕಳಿಸಿ "ನಮ್ಮ ಕಡೆ ಸೇರಿಕೊಳ್ಳಿ, ನಿಮಗೆ ಬೇಕಾದಷ್ಟು ಒಳ್ಳೆ ಆಹಾರ ಬಟ್ಟೆಬರೆ ಮತ್ತು ಇತರ ಸೌಲಭ್ಯಗಳನ್ನು ಒದಗಿಸುತ್ತೇವೆ" ಎಂದು ತಿಳಿಸಿದರು ಆದರೆ ನಾವು "ಖಾಡನ್ನಲ್ಲಿಯೇ ಇದ್ದು ಸ್ವಾತಂತ್ರ್ಯದ ಹುಲ್ಲನ್ನೇ ತಿಂದು ಜೀವಿಸಲು ಸಿದ್ಧರಾಗಿದ್ದೇವೆ ಗುಲಾಮತನದ ರೊಟ್ಟಿ ಮತ್ತು ಬಿಸ್ಕತ್ತ ನಮಗೆ ಬೇಕಾಗಿಲ್ಲ' ಎಂದು ತಿಳಿಸಿದೆವು ಹೀಗೆಂದು ಕ್ಯಾ। ಪಾನವಾಜ್‌ಖಾನರವರು ಸಭೆಯಲ್ಲಿ ಸೇರಿದ್ದ ಸಭೆಯಲ್ಲಿ ತಿಳಿಸಿದರು

ಮದ್ರಾಸಿನಲ್ಲಿ ಕನ್ನಡಸಮ್ಮೇಳನ

ಈ ತಿಂಗಳು 26, 27, 28ನೆಯ ತಾರೀಖುಗಳಲ್ಲಿ ನ್ನಡದ ಸುಗ್ಗಿಯ ಹಬ್ಬ ನಡೆಯಿತು ಈ ಸಾರಿಯ ಸಮ್ಮೇಲನದ ಅಧ್ಯಕ್ಷರು ಶ್ರೀ ಕೈಲಾಸಂ ಅವರು

ಸಮ್ಮೇಲನದ ಕೂಟ ಪುರುಸವಾಕಂ ಭಾಗದಲ್ಲಿ ಮುತ್ತುಯ್ಯಚೆಟ್ಟಿಯಾರ್ ಹೈಸ್ಕೂಲಿನಲ್ಲಿ ಸೇರಿತು 26ನೆಯ ಬೆಳಗ್ಗೆ 8 ಗಂಟೆಯ ಸಮಯಕ್ಕೆ ಶ್ರೀಯುತ ಕೈಲಾಸಂ ಅವರನ್ನು ಹೊಲಗದ ಮೆರವಣಿಗೆಯಲ್ಲಿ ಕರೆದುಕೊಂಡು ಬಂದರು

ಭವನದ ಅಂಗಳದಲ್ಲಿ ಕನ್ನಡ ಬಾವುಟವನ್ನು ತಿಳ್ಳಕ್ಕರು ಏರಿಸಿದರು ಸುತ್ತ ನೆರೆದಿದ್ದ ಕನ್ನಡ ಮಕ್ಕಳ "ವಿಜಯ ಭವ" ಎಂಬ ಹರ್ಷಧ್ವನಿ ಎಲ್ಲೆ ---

ತುಂಬಿತು

ಸಭೆಗೆ ಮದರಾಸಿನ ನಾನಾ ಕನಡಿಗರೂ, ಬೇರೆ ಬೇರೆ ಸ್ವಾಂತರ್ಗತಿಂದ ಸಮ್ಮೇಲನವನ್ನು ಪ್ರತಿನಿಧಿಗಳೂ, ಪತ್ರಿಕೋದ್ಯೋಗಿಗಳೂ ಬಂದಿದ್ದರು

ನೇದಿಕೆಯ ಮೇಲೆ ಅಧ್ಯಕ್ಷ ಪೀಠದಲ್ಲಿ ಗುಲಾಬಿಯ ಹಾರದಿಂದ ಅಲಂಕೃತರಾದ ಶ್ರೀ ಕೈಲಾಸಂ, ಅವರ ಕೆಲದಲ್ಲಿ ಶ್ರೀರಾಜಾಜಿಯವರು (ಚಕ್ರವರ್ತಿ ರಾಜಗೋಪಾಲಾಚಾರ್ಯರವರು ಮದರಾಸಿನಮಾಜಿ ಮಂತ್ರಿಗಳು) ಶ್ರೀ ಪೆಂಡ್ರೆಯವರು, ಡಾಕ್ಟರ್ ಯು ರಾಮರಾಯರು, (ಇವರು ಮದರಾಸಿನವರು ನ್ಯಾಯವಿಧಾಯಕ ಸಭಾಧ್ಯಕ್ಷರು, ಪ್ರಕೃತ ಸ್ವಾಗತಸಮಿತಿಯ ಅಧ್ಯಕ್ಷರು) ಮಾನ್ಯ ನೆಂಕಟೇಶಣಯ್ಯಂಗಾರ್, ಶ್ರೀ ಜೆ ಬಿ ಮಲ್ಲಾರಾಧ್ಯರು (ಇವರು ಮೈಸೂರು ಸರಕಾರದ ಉನ್ನತ ಅಧಿಕಾರಿಗಳು) ಈ ಮೊದಲಾದ ಹಿಸರು ಪಡೆದ ಮಾನ್ಯರು ಮಂಡಿಸಿದ್ದರು

ಅನಂತರ ಕುಮಾರಿ ರೇಣತಿದೇವಿಯವರು "ಸ್ವಾಗತವು ಸ್ವಾಗತವು" ಎಂಬ ಗೀತೆಯನ್ನು ಆತ್ಯಂತ ಮನೋಹರವಾಗಿ ಹಾಡಿದರು

ಶ್ರೀಮಾನ್ ಯು ರಾಮರಾಯರು ಸ್ವಾಗತ ಭಾಷಣಮಾಡಿದರು

ಇಂದು ಮೂನತ್ತು ಸಾವಿರಕ್ಕೂ ಹೆಚ್ಚಾದ ಕನ್ನಡಿಗರು ಇಲ್ಲ ವಾಸಿಸುತ್ತಿರುವರು ಈ ಮದರಾಸು, ಕನ್ನಡಜಿಲ್ಲೆಗಳಾದ ದಕ್ಷಿಣಕನ್ನಡ, ಬಳ್ಳಾರಿಗಳಿಗೂ, ಹಲಕೆಲವು ಮಂವಿ ಕನ್ನಡಿಗರುಳ್ಳ ಕೊಯಮುತ್ತೂರು, ಸೇಲಂ, ನೀಲಗಿರಿ, ಅನಂತಪುರ ಜಿಲ್ಲೆಗಳಿಗೂ ಮುಖ್ಯ ಪಟ್ಟಣವಾಗಿರುವುದು ಈ ಮದರಾಸು ನೃಪತುಂಗನ ಕಾಲದಲ್ಲಿ ಕನ್ನಡ ನಾಡಿಗೆ ಸೇರಿರುವುದು ಇತ್ತು ವಿಜಯನಗರದ ಅರಸರ ಆಡಳಿತಾಯಕರ ಮನತನಕ್ಕ ಸೇರಿದ ಚೆನ್ನಪ್ಪ ನಾಯಕನಿಂದಲೇ ಈ ಊರ ಹೆಸರು ಚೆನ್ನಪಟ್ಟಣ ಎಂದಾಯಿತು

ಇಂತಹ ನಗರದಲ್ಲಿ ನ್ನಡಿಗರಿಗೆ ತಮ್ಮ ಭಾಷೆಗೆ ಸಂಬಂಧಪಟ್ಟು ರಾನ ವಿಶಯವನ್ನು ತಿಳಿಸಲು ಅವಕಾಶವಿಲ್ಲ ಈ ಸಮ್ಮೇಳನ ಇಲ್ಲಿ ನಡೆಸ ಪುದರ ಉದ್ದೇಶಗಳೇನು ? ಎಂದರೆ–ಮದರಾಸಿನಲ್ಲಿರುವ ಕನ್ನಡಿಗರು ಪರಸ್ಪರ ಪರಿಚಯ ಮಾಗುವುದೊಂದು, ಕನ್ನಡೇತರ ಇತರ ಬಾಗಗಳ ಕನ್ನಡಿಗರ ಪರಿಚಯ ಇನ್ನೊಂದು, ಕನ್ನಡಿಗರ ಸಂಸ್ಕೃತಿ, ಭಾಷೆಯ ಅಭಿವೃದ್ಧಿಗನ್ನು ಪ್ರಯತ್ನಿಸುವುದು ಮತ್ತೊಂದು, ತೆಲುಗು, ತಮಿಳು, ಮಲೆಯಾಳ ಮೊದಲಾದ ಇತರ ದ್ರಾವಿಡಭಾಷೆಯ ಅಭಿಮಾನಿಗಳ ಗಮನವನ್ನು ಕನ್ನಡದ ಕಡೆ ಸೆಳೆಯುವುದು ಹಿಂದು, ಹೀಗೆ ಧ್ಯೇಯಗಳು ಬಯಮುಖವಾಗಿವೆ

ಇಷ್ಟು ಕನ್ನಡಿಗರು ಇರುವ ಈ ಮಹಾನಗರದಲ್ಲಿ ಹಿಂದಾದರೂ ಕನ್ನಡ ನ ಕೈಳಕಾಲೆಯಿಲ್ಲ ನಂದರೆ ಶೋಚನೀಯವೇ ಸರಿ ಈ ಕೊರತೆ ನಿವಾರಿಸಲು ಪರಿಶ್ರಮಿನ ಬೆಂಬಲಬೇಕು

ಕನ್ನಡ ನಾಟಕ ನರ್ತನಾನ ಇವುಗಳಿಗೆ ಇಲ್ಲಿಯ ಆಕಾಶವಾಣಿ ರೇಡಿಯೋದಲ್ಲಿ ದೊರೆತಿರುವ ಸ್ಥಾನ ನಿನ್ನೂ ಸಾಲದು

ಕನ್ನಡ ಜಿಲ್ಲೆಗಳಿಗೆ ಅದರ ಗಂದವೂ ಇಲ್ಲದ ಅಧಿಕಾರಿಗಳ ನೇಮಕ ವಾಗುತ್ತಿದೆ ಇದು ಕನ್ನಡದ ಏಳಿಗೆಗೆ ಹಿಂದು ಗಂಡಾಂತರವೆನ್ನಬಹುದು.

ಇಂದಿನ ನಮ್ಮ ಂರಹಗ ರಿಗೆ ಸರಿಯಾದ ಪ್ರೋತ್ಸಾಹನಿಲ್ಲ ಕನ್ನಡಕ್ಕಾಗಿಯೇ ತಮ್ಮ ಜೀವನವನ್ನು ಧಾರೆ ಎರೆಯುತ್ತಿರುವ ಪಂಡಿತ ವರ್ಗಕ್ಕೆ ಅಶ್ರಯವಿಲ್ಲ.

ಕನ್ನಡದ ಬಗೆಗೆ ನಾವು ಎಷ್ಟು ಮಿಡಿದರೂ ಅದು ಸಾಕೆನಿಸುವುದಿಲ್ಲ "

ಆರಂಭಭಾಷಣ

ಇದನ್ನು ಚಕ್ರವರ್ತಿ ರಾಜಗೋಪಾಲಾಚಾರ್ಯರು ಮಾಡಿದರು

ಶ್ರೀ ರಾಜಗೋಪಾಲಾಚಾರ್ಯರು ಮದರಾಸಿನ ಮಾಜಿ ಕಾಂಗ್ರೆಸ್ ಮಂತ್ರಿಗಳು ಅವರು ಬೆಂಗಳೂರಿನಲ್ಲಿ ಓದುತ್ತಿದ್ದಾಗ ಕನ್ನಡಿಗರನ್ನು ಚೆನ್ನಾಗಿ ತಿಳಿದವರು, ಕನ್ನಡಿಗರೆಂದರೆ ಅವರಿಗೆ ಆದರ. ಮಾತ್ರ ಅವರು ಕನ್ನಡಭಾಷೆಯನ್ನು ಚೆನ್ನಾಗಿ ಕಲಿಯಲು ಅವಕಾಶವಾಗಿಲ್ಲ ಆದರೂ ಸಹ ಕನ್ನಡ ಸಮ್ಮೇಲನದಲ್ಲಿ ಕನ್ನಡ ಆಡುವುದೇ ಉಚಿತವೆಂದು ಅವರುತಮಗೆ ಬಂದ ಕನ್ನಡದಲ್ಲೇ ಭಾಷಣಮಾಡಿದರು

"ಮದರಾಸು ಪ್ರಾಂತದಲ್ಲಿ ತಮಿಳು, ತೆಲುಗು, ಮಲೆಯಾಳ ಕನ್ನಡಗಳೆಂಬ ನಾಲ್ಕು ಭಾಷೆಗಳಿವೆ. ಈ ಸೋದರೀ ಭಾಷೆಗಳನ್ನು ಆಡುವವರಲ್ಲಿ ಪರಸ್ಪರ ಪರಿಚಯ, ಗೌರವ ಬೆಳೆದು, ನಾವೆಲ್ಲರೂ ಈ ದೇಶದ ಕಲ್ಯಾಣ ಸಾಧಿಸಬೇಕು

ನಮ್ಮ ಜೀವನ, ಸಂಸ್ಕಾರ ನುತ್ತು ಭಾಷೆಗಳು ಸಾವಿರಾರು ವರುಷಗಳಿಂದ ಒಂದಾಗಿ, ಒಂದು ಹಣ್ಣಿನ ತೊಳೆಯಂತೆ ಸನಿಯಾಗಿ ಅಣಿಯಾಗಿ ಬೆಳೆದಿವೆ ಇಲ್ಲಿನ ನಾಲ್ಕು ಭಾಷೆಗಳನ್ನು ಕಲಿಯುವವ ಯಾವನಾದರೂ ತಾನು ಮೇಲ್ತರಗತಿಯ ಶಿಕ್ಷಿತನೆಂದು ಹೇಳಿಕೊಳ್ಳುವುದು ಸರಿಯಲ್ಲ. '

ಅಧ್ಯಕ್ಷಭಾಷಣ

ಅಧ್ಯಕ್ಷರು ಅಮೋಘವಾದ ಭಾಷಣ ಮಾಡಿದರು ಅವರ ಭಾಷಣ ಅವರ ಹೃದಯದಿಂದ ನೇರವಾಗಿ ಬಂದುದು, ವಿದ್ವತ್ತಿನ ತೋರಿಕೆಯದ್ದಲ್ಲ; ನಿಜವಾಗಿ ಮೂಡಿದ ಭಾವವನ್ನ ಅವರು ನೃದು ಹಾಸ್ಯರೀತಿಯಲ್ಲಿ ವೇಷ ತೊಡಿಸಿ ಹೇಳಿದರು. ಕೆರೆದಿದ್ದ ಬರೆಲ್ಲ ಮುಗ್ಧರಾಗಿ ಕೇಳಿದರು, ನಕ್ಕರು, ಹಾಗೆಯೇ ಅನರ ಮನಸ್ಸಿನಲ್ಲಿ ವಿಚಾರವೂ ಹುಟ್ಟಿತು ಮನುಷ್ಯನ ಸಣ್ಣತನವ ಅರಿವಾಗಿ ಹಿಂದು ನೋವೂ ಅವನ ವಿಷಯವಲ್ಲಿ ವಯೆಯೂ ಉಂಟಾಯಿತು ಇದು ಕೈಲಾಸಂ ಅವರ ಪ್ರತಿಭೆ, ನ ಪತ್ವ

ಈ ಬಗೆಯ ಸಮ್ಮೇಲನದಲ್ಲಿ ಭಾಗವಹಿಸುವುದು ನನ್ನ ಜೀವನಕ್ಕೆ ಒಗ್ಗುವುದಿಲ್ಲ, ನನ್ನ ಮನಸ್ಸು ಇವಕ್ಕೆ ಬಗ್ಗುವುದಿಲ್ಲ ಮೂಲೆಯಲ್ಲಿದ್ದು ಸುತ್ತಲೂ ನಡೆವುದನ್ನು ಕಣ್ಣಿಂದ ನೋಡಿ ಕಿವಿಯಿಂದ ಕೇಳಿ ನಾಟಕಕಟ್ಟಿ ಆನಂವಪಟ್ಟು ನಾಲ್ಕು ಜನ ರಸಿಕ ಮಿತ್ರರಿಗೂ ಹೇಳಿ ಆನಂದಪಡಿಸುವ ಸಾಮಾನ್ಯಜೀವಿ ನಾನು ನನ್ನ ಲೋಕ ಭಿನ್ನವಲ್ಲ ಹಾಸ್ಯದ ನೃದು ಲೋಕ

ನನ್ನ ನಾಟಕಗಳಲ್ಲಿ ಜನರಾಡುವ ನೂತನ್ನೇ ಬಳಸುವೆನೆ ಟೊಳ್ಳು–ಗಟ್ಟಿ ನಾಟಕವ ಸಾತು ಸಾತು ನನ್ನ ಮನಸ್ಸಿನ ಅಂಗಳವಲ್ಲಿ ಬೆಳೆದ ಹುಡುಗಿಯರಲ್ಲ ನಮ್ಮ ಸೀಮೆಯಲ್ಲಿ ಅನರಿವರ ಮನೆಯಲ್ಲಿ ಕಂಡ ಹುಡುಗಿಯರು ಅವರು ಆಡಿನ ನೂತಿನ ನೃಯಿ, ತಪರ ಭಾವೆ, ನನ್ನ ನ ನಸ್ಸಿನಲ್ಲಿ ಮೂಡಿ "ಟೊಳ್ಳು ಗಟ್ಟಿ ಯಲ್ಲಿ ತಿಳಿಯಿತು

ಪೊಪ್ಪವರ ಬತಾಯಿ, ಬಡವರ ಸಕಾಯಿ (ಅಂದರೆ ಸಾಡಾ ಇವಿತೆ) ನನ್ನ ವೃತ್ತಿಗೆ ಎದ್ದು ತೋರುತ್ತವೆ ಇವನ್ನ ನಾನು ಹಾಸ್ಯವೆಂಬ ಭೂತಕನ್ನಡಿಯ ಮೂಲಕ ತೋರಿಸುತ್ತೇನೆ

ಜನ ನಾನು ತೋರಿಸುವ ತಮ್ಮನ್ನು ನೋಡಿ ತಾವೇ ನಗುತ್ತಾರೆ. ಹಾಸ್ಯ ರೋಗಿಗೆ ಪಥ್ಯವಿದ್ದಂತೆ. ಜನಕ್ಕೆ ಮಸಸ್ಸು ಕುಗ್ಗಿದಾಗ ಹಾಸ್ಯ ಅವನ್ನು ಅರಳಿಸುತ್ತವೆ

ಕನ್ನಡನಾಡಿನಲ್ಲಿ ನಾನಾಭಾಷೆಯ ಜನ ಇದ್ದೇನೆ ತಮಿಳು, ತೆಲುಗು, ತುಳು, ಕೊಂಕಣಿ, ಮರಾಠಿ ಜನ ಕನ್ನಡನಾಡಿನಲ್ಲಿ ಸೇರಿ ಕನ್ನಡಿಗರಾಗಿದ್ದಾರೆ ನಾನೇ ತಮಿಳ. ಪರಿಷತ್ತಿನ ಉಪಾಧ್ಯಕ್ಷರಾದ ನನ್ನ ಕಿರಿಯಣ್ಣ ನಾಸ್ತ್ರಿಯವರೂ ತಮಿಳರು. ಹಿರಿಯಣ್ಣ ರಾಜಾಜಿಯವರೂ ತಮಿಳರು ಕರ್ನಾಟಕವನ್ನು ಹಿಂದು ಸ್ವಾತಂತ್ರವಾಗಿ ಕಟ್ಟಬೇಕೆಂದು ನಾವು ಆತುರರಾಗಿದ್ದೇನೆ

ಭಾಷಾವಾರು ಭೇದಭಾವನೆ ಬಹುಜನಮೋಹೋಣ ಒಳಗೂ ಹೊರಗೂ ಎಲ್ಲರೊಡನೆ ಸಮರಸವಾಗಿ ನಡೆದು ನಾವು ಕರ್ನಾಟಕರು ಉಳಿದ ದಾಕ್ಷಿಣಾತ್ಯರಿಗೆ ಮೇಲುಪಂಗ್ತಿಯಾಗಿ ಇರೋಣ ದಾಕ್ಷಿಣಾತ್ಯರೆಲ್ಲ ಹಿಂದಾಗಿ ಉತ್ತರಾದಿಯವರಿಗೆ ಮೇಲುಪಂಗ್ತಿಯಾಗೋಣ

ಕನ್ನಡ ಬೆಳೆಯುತ್ತಿದೆ ಈಗ ಆಗುತ್ತಿರುವ ಅಸಂಖ್ಯ ಗ್ರಂಥರಾಶಿ ಹುಟ್ಟುವುದರಿಂದ ನನಗೆ ಸಂತೋಷವಾಗಿದೆ ಅನೇಕ ಪತ್ರಿಕೆಗಳು ಹುಟ್ಟುವೆ ಲೇಖಕರು ಇದಾರೆ ಎಲ್ಲರೂ ಹಿಂದೊಂದು ಕೆಲಸ ಮಾಡಿ ನಾಡನ್ನು ಮುನ್ನಡೆಸಬೇಕು ಎಂದು ಹೇಳಿದರು

ಮದ್ರಾಸಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಸ್ವಾಗತಗೀತೆ

ಎಲ್ಲಿ ಕಾವೇರಿ ನಲಿನಲಿದು ಮನಮಣಿಸಿತೋ ?
ಎಲ್ಲಿ ನೋಡಾವರಿಯು ಅಪ್ಪಿ ಮುದ್ದಿಸಿತೋ ?
ಎಲ್ಲಿ ಪಶ್ಚಿಮ ಜಲಧಿ ರತುನಗಳನರ್ಪಿಸಿತೋ ?
ಎಲ್ಲಿ ಪೂರ್ವಾಂಬುಧಿಯು ಮುದವಿ ಹರಿಸಿತ್ತೋ ?
ಅಲ್ಲೆಲ್ಲ ನೆಲಸಿಹ,
ಎಲ್ಲೆಲ್ಲು ಮೆರೆದಿಹ,
ಉಲ್ಲಸಿತಕರ್ನಾಟವ್ಯಮಮಧುರ ಭಾರತಿ!
ಸ್ವಾಗತವು ಸ್ವಾಗತವು ಸ್ವಾಗತವು ನಿನಗೆ ॥

ಎಲ್ಲಿ ಕಳಮಯಲಿ ಗಿಳಿಪಿಂಡಿನಿಂಚರವೋ ?
ಎಲ್ಲಿ ಜೋಳದ ರಾಗಿ ನವಣೆಗಳ ಬೆಳೆಯೋ ?
ಎಲ್ಲಿ ರಸದಾಳ ಹೊಂಬಾಳೆಗಳ ಬೆಳಹೋ ?
ಎಲ್ಲಿ ಕತ್ತಲೆ ಹಲಸು ತೆಂಗು ಕಂಗುಗಳೋ ?
ಎಲ್ಲಿ ಪುಲ್ಲಗೆ ನೊಲ್ಲೆ ಜಾಜಿ ಸೇವಂತಿಗೆಯೋ ?
ಎಲ್ಲಿ ಸಂಪಿಗೆಯೊ ಕೇದಗೆ ಗುಲಾಬಿಗಳೋ ?
ಎಲ್ಲಿ ಮಾವಾರದಲ್ಲಿ ಕುಕಿಲ್ವ ಕೋಗಿಲೆಗಳೋ ?
ಎಲ್ಲಿ ಕೊಡಗಿನ ಬೆಡಗು ತೊಡವಾಗಿಯಿಹುದೋ?
ಅದಳೆ ನಲಿದಾಡಿದಿರ,
ಅದರೊಳೊಲಿದಾಡಿದಿರ,
ಅದನೆಲ್ಲ ಬಣ್ಣಿಸಲು ಮುದದಿಂದ ಬಂದಿರಾ!
ಸ್ವಾಗತವು ಸ್ವಾಗತವು ಸ್ವಾಗತವು ನಿಮಗೆ ॥

* * * *

ಜಾತಿಮತಗಳ ಭೇದಭೇದಗಳವೆಂತೋ ?
ನಾಡ ಗಡಿ ನುಡಿ ನಡತೆ ವೈವಿಧ್ಯವೆಂತೋ ?
ಆರಸುತನದಧಿಕಾರವಿಷಮತೆಗಳಿವೆಂತೋ ?
ಪರಿಪರಿಯ ಸಂಕುಚಿತ ಭಾವನೆಗಳಿವಿನಿತೋ ?
ಕರ್ನಾಟವೊಂದಾಗಿ ನೆರೆವ ಸುಖವೆಂತೋ ?

* * * *

ತಮಿಳು ನುಡಿಗಳ ಮೃದುಲ ಮಾಧುರ್ಯವಿಲ್ಲಿ,
ತೆಲುಗು ಮಾತಿನ ಮಧುರ ಗಾಂಭೀರ್ಯವಿಲ್ಲಿ,
ಮಲೆಯಾಳ ತುಳುವೆ ಮೊದಲಾದ ನುಡಿಗಿಲ್ಲಿ,
ಕನ್ನಡದ ಕಸ್ತೂರಿಯ ಪರಿಮಳನ ಚೆಲ್ಲಿ,
ಹುಟ್ಟುದುವಿವೊಂದೆ ನುಡಿತಾಯ ಬಸುರಲ್ಲಿ,
ಹೆಚ್ಚು ಕಡಮಗಳೆಂಬ ಭೇದವಿಹ್ಮಿಲ್ಲಿ,
ಉದಯ ಸಾಗರದ ವಿಶೋಷಣ ತೆಳುತಲಿ,
ಉದಯವಾಗಿರಲಿ ಕನ್ನಡದ ಸಿರಿಯಲ್ಲಿ,
ಚೆನ್ನೆಪ್ಪನಾಯಕನ 'ಚೆನ್ನಪುರಿ' ಯಲ್ಲಿ,
ಚೆನ್ನೆ ಕನ್ನಡ ಚೆನ್ನೆ ಚೆನ್ನಾಗಿರಲಿ.
ಎಲ್ಲ ಸೋದರಿಯರೆ!
ಎಲ್ಲ ಸೋದರರೇ
ಎಲ್ಲೆಲ್ಲು ಸಹಕರಿಸೆ ಮುಂದೆ ಬಂದಿಹರೆ! ।
ಸ್ವಾಗತವು ಸ್ವಾಗತವು ಸ್ವಾಗತವು ನಿಮಗೆ ॥

ಎ. ಕೆ. ತಿರುಮಲೇಶ,
ವಿದ್ಯಾರ್ಥಿ, ಮದರಾಸು, ಅವರ ಕೃತಿಯಿಂದ

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೭ನೆಯ ಆವೃತ್ತಿ)	೧ ಆಣೆ
ಷಣ್ಮತಶಾಸ್ತ್ರಮತವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚಪಿಂಡಕ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೮ನೆಯ ಆವೃತ್ತಿ)	೩ ಆಣೆ
ಶ್ರೀಸಂಜಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೩ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೩ನೆಯ ಆವೃತ್ತಿ)	೩ ಆಣೆ
ಬಸವಾದಿಶಿವಶರಣ್ಯದಪರಣ (೪ನೆಯ ಆವೃತ್ತಿ)	೩ ಆಣೆ
ಶ್ರೀರೇಣುಜಾಚಾರ್ಯಶತಕ (೩ನೆಯ ಆವೃತ್ತಿ)	೩ ಆಣೆ
ಶ್ರೀಗುರುತತ್ವಪದಗಳು (೩ನೆಯ ಆವೃತ್ತಿ)	— ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೩ ಆಣೆ
ಶಿವಶಕ್ತಿವಿಲಾಸ	೩ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ಪುಣ್ಯಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪಂಚಪೀಠಪಾಠಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಷಣ್ಮತಶಾಸ್ತ್ರಮತವಿಮರ್ಶತತ್ತ್ವನಿರೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂಶೀಯರ್ಯ-ಕ್ಷಾತ್ರವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚತುರ್ಥಭಾಗ)	೬ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ಯಾಷ್ಟಕವಾಕರ (೩ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಗುರೋದರತ್ನಾವಳಿ	೮ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೩ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೩ ಆಣೆ
ಶಿವಾಷ್ಟಾತ್ರಿಪ್ರಾಂತಾಚರ್ಯಣ	೧೩ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ತ್ರೀಯರಿಗಾಗಿ ಪ್ರತ್ಯೇಕ ಆವೃತ್ತಿ)	೧[ರೂ
ಸಿದ್ಧಾಂತಶಿಖಾಮಣಿ (ಸಂಸ್ಕೃತ ಟೀಕಾಸಹಿತ)	೧ ರೂ
ಕೇನೋಪನಿಷತ್ (ಸಂಸ್ಕೃತ ಭಾಷ್ಯಸಹಿತ)	೧ ರೂ
ಶ್ರೀಕರಭಾಷ್ಯಂ (ಸಂಸ್ಕೃತ)	೧॥ ರೂ
ಸಚಿತ್ರ ರೇಣುಕವಿಜಯ (೩ನೆಯ ಆವೃತ್ತಿ)	೧॥ ರೂ
ವೀರಶೈವರತ್ನ (ಗದುಗು ಆವೃತ್ತಿ, ೭೦ ಪಕ್ಷಗಳ ಪೂರ್ಣಗಳಿಮುದ್ರಣ)	೨ ರೂ
ರೇಣುಕವಿಜಯ ಮಹಾಪುರಾಣ (ಸಂಸ್ಕೃತ ಭಾಷಾಂತರಸಹಿತ)	೨ ರೂ
ಸಿದ್ಧಾಂತಶಿಖಾಮಣಿ (ಸಂಸ್ಕೃತ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹ (ದಂಪ್ರಕ್ಷಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂಪ ಕೂಡಿರುವುದು)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೦೪ ಪುಟ)	೮ ರೂ
A brief life-sketch of Pandit Sri Kashinatha Shastriya (*English*)	4 As
The Philosophical Aspect of Viraasivism (*English*) ...	8 As
Speeches by Pandit Shri Kashinatha Shastriji (*English*)	12 As
ಲಿಂಗಧಾರಣಚಂದ್ರಿಕಾ (ಸಂಸ್ಕೃತ)	೩ ಕ
ವೀರಶೈವಧರ್ಮ (ಮರಾಠಿ)	೧ ರೂ
ಮಹಾಸಾರಾವಳೀಪನಿಷತ್ (ವೀರಶೈವಮಾರ್ಗ-ಸಂಸ್ಕೃತ)	೧ ರೂ
ಲಿಂಗಾರ್ಚನಚಂದ್ರಿಕಾವಳಿ (ಮೂಲ)	೮ ಆಣೆ
ಪಂಚಲಿಂಗಾರ್ಚನಕಾರಿಕಾ (ಸಂಸ್ಕೃತ)	೩ ಆಣೆ

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸರ್ಯಾಪೀಸ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಸಾರತರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No M. 2260. ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾವನಿಪಂಕಜಾತಜನಿತರ್ ಪಂಚಾಸ್ಯಚೀಜಾಧಿರ್ ।ಪಂಚಕ್ಲೇಶವಿನಾಶಕರ್ ಪರಕರಶ್ರೀಪಂಚಲಿಂಗೇಶ್ವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ. ೪ ಆಣೆ ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೧೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೪ನೇ ಜನವರಿ ೧೯೪೬ [ಸಂಚಿಕೆ ೩೫

॥ ಶ್ರೀಜಗದ್ಗುರು ರಾಜಯೋಗೀಂದ್ರಾಯ ನಮಃ ॥

ವೈರಾಗ್ಯದರ್ಪಣ

ಲೇ—ವೇll ಮಲ್ಲಿಕಾರ್ಜುನಶಾಸ್ತ್ರಿ, ರಾಜೇಶ್ವರಿಪುರ ಸ ಕೀಮಿ, ಕ್ಷ, ಮುದೇನೂರು)

(ಹಿಂದಿನಿಂದ ಮುಂದುವರಿದುದು)

ಆದರಿಂ ಸರ್ವಕಾಲದಲ್ಲಂ ಸುಖಪ್ರನೆಂದಿಪ್ಪ ಆ ರಾಜರ್ಷಿಗೆ ರಾಗಾದಿ ವಾಸನೆಗಳು ಪ್ರಕೃತೋಚಿತವಾದ ಪದಾರ್ಥಭಾವನೆಗಳೂ ಸಹ ಸೂರ್ಯನಿಗೆ ಕೆರಣಗಳಂತೆ ಆತ್ಮನಿಗೆ ಅಭಿನ್ನವಾಗಿಯೇ ಇದ್ದುವು ಭೂತಭವಿಷ್ಯದ್ವರ್ತಮಾನ ಜ್ಞಾನವಿದ್ದಾಗ್ಯೂ ಅವನು ವರ್ತಮಾನದಲ್ಲೇ ಧೃಷ್ಟಿಯನ್ನಿಟ್ಟು ಆತ್ಮಾದ್ವೈತ ಭಾವನೆಯಿಂದಲೇ ಕಾರ್ಯಗಳಂ ಮಾಡುತ್ತಿದ್ದನು ಇಂತು ಸ್ವವಿಚಾರದಿಂದಲೇ ಆ ರಾಜೇಂದ್ರನು ಪಡೆಯಬಕ್ಕದ್ದಂ ಪಡೆದು ಕೃತಕೃತ್ಯನಾದನು ಅನಪೇಕ್ಷೆ ನೀನು ಸನುಸ್ಮರಾದಿ ಅಸೆಯಂ ಬಿಟ್ಟು ವಿಚಾರಪರನಾಗದ್ದರೆ ಕೃತಾರ್ಥನಾಗುತ್ತೀಯೆ ಯಾವ ಯಾವದು ಸಿದ್ಧವಾಗುವುದೋ ಅದೆಲ್ಲವನ್ನೂ ಕೊನೆಮುಟ್ಟುವ ಪರ್ಯಂತವಾಗಿ ವಿಚಾರಿಸುವನಿನಗೆ ಸರ್ವವೂ ಬ್ರಹ್ಮವೆಂಬ ಸಿದ್ಧಾಂತವು ತಾನಾಗಿ ಗೋಚರವಾಗುವುದು ಈ ಅರ್ಥವು ಸಪ್ತಂಗದಿಂದಮಂಟಾದ ವಿಚಾರದಿಂದಲೇ ಆಗಬೇಕಲ್ಲವ ಗುರೂಪದೇಶ ಮಾತ್ರದಿಂದಲೂ, ಶಾಸ್ತ್ರಾಭ್ಯಾಸದಿಂದಲೂ, ಸ್ನಾನ ದಾನ ಜಪ ತಪೋಯಜ್ಞ ಇತ್ಯಾದಿ ಪುಣ್ಯಕರ್ಮಗಳಿಂದಲೂ ಆಗತಕ್ಕ ದ್ದಲ್ಲವು. ಅಪಾಗ್ಯ ಗುರೂಪದೇಶ ಮೊದಲಾದ್ದು ಮಾರ್ಗವಂ ತೋರುವದಾದ್ದರಿಂದ ಅವಕ್ಕೆ ಪ್ರತಿತ್ಯೆಯಂಕೊಡುವುದು ಪ್ರವಾಹದಂತೆ ಮುಂಭಾಗವನ್ನೇ ಬೇಳುತ್ತಿರುವ ಅಂತಃಕರಣಾದಿಗಳಿಗೆ ಎದುರು ಪ್ರವಾಹದಂತೆ ಗುರೂಪದೇಶಾದಿಗಳು ಮುಂಭಾಗದ ವೇಗವಂ ತಡೆಯುವುದಕ್ಕೂ ಹಿಮ್ಮೆಟ್ಟಿಸುವುದಕ್ಕೂ ಕಾರಣವಾಗುವುದು ಯಾವನಿಗೆ ಶಾಸ್ತ್ರಗಳಲ್ಲಿ ಪೂರ್ಣಾಪರವಿಚಾರ ಸಮರ್ಥವಾದ ಬುದ್ಧಿ ಪ್ರಕಾಶವುಂಟಾಗುವುದೋ ಅವನಿಗೆ ದೀಪದಿಂದಂಧಕಾರದಂತೆ ಜಾಡ್ಯವು ಹೋಗುವುದು ದುಸ್ತರವಾದ ಅಪತ್ಕುಗಳೆಂಬ ಸಮುದ್ರಗಳು ಪ್ರಜ್ಞೆಯೆಂಬ ನಾವಿಯಂ ದಾಟಲ್ಪಡುವವು ಪ್ರಜ್ಞಾಶೂನ್ಯನು ಬಿರುಗಾಳಿಯಂ ಕೃಷಕನಂತೆ ಕೆಂಬಕ್ಕೆ ದುಃಖಿಯಾದಲೂ ಶಾಠಿಸಲ್ಪಡುವನು. ಸಂಸಾರವೆಂಬುದು ಅಜ್ಞಾನವಾದ್ದರಿಂದಲೂ, ಅದಕ್ಕೆ ಜ್ಞಾನವೇ ನಾಶಕವಾದ್ದರಿಂದಲೂ, ಜ್ಞಾನದಿಂದಲೇ ಮೋಕ್ಷವೆಂದು ಜಗತ್ಪ್ರಸಿದ್ಧ ವಾಗಿರ್ಪುದು ಜ್ಞಾನಸಾಧನವಾದ್ದರಿಂದ ಗುರೂಪದೇಶಾದಿಗಳು ಶ್ರಾಧ್ಯವಾಗಿರ್ಪವು ಜ್ಞಾನಹೀನನು ಸರ್ವೋತ್ಕಮವಾದ ಕಾರ್ಯವಂ ಕೈಕೊಂಡೂಂ ಅದಂ ನೆರವೇರಿಸಲಾರದೆ ಅರ್ಥಾನುಸಾರವಾದ್ದರಿಂ ಫಲಾಪೇಕ್ಷೆಯುಳ್ಳವನು ನೀರು ಹಾಕುವುದೇ ಮೊದಲಾದ ಕಾರ್ಯಗಳಂ ಲತೆಯ ಬೆಳೆಸುವಂತೆ ಸತ್ಸಂಗಶಾಸ್ತ್ರಾಭ್ಯಾಸಾದಿಗಳಿಂದ ಪ್ರಥಮತಃ ಪ್ರಜ್ಞೆಯನ್ನೇ ಬೆಳೆಸಬೇಕು ಸೂರ್ಯಪ್ರಭೆಯಂ ಹೊಂದಿ ಚಂದ್ರಬಿಂಬಂ ಬೆಳ್ಳಂಗೆಯಂತೆ ಸತ್ಸಂಗಾದಿಗಳಂ ನೃಢಿಯಾದ ಪ್ರಜ್ಞಾವೈಭವಂ ಪರಮಾನಂದ ಫಲವೆಂಬಿಗುವುದು ಭೋಗ್ಯವಸ್ತುವಿನಂತೆ ಪ್ರಜ್ಞೆಯು ಬೆಳೆಸಲ್ಪಟ್ಟುದಕ್ಕೆ ಸರ್ವದುಃಖಗಳಿಗೂ ಮುಖ್ಯವಾಗಿ ಆಶತ್ಯಗಳಿಗೆ ಜೊತ್ಕವಾಗಿ ಸಂಸಾರ ನೈಷ್ಠಕ್ಕೆ ಮೂಲವಾಗಿರುವ ಅಜ್ಞಾನವಂ ನೀಗುವುದು ಲೋಕಗಳಲ್ಲಿ ಯಾವ ಯಾವ ಶುಭಫಲವಂಭೋಗ ವೆದೋ ಅದೆಲ್ಲಕ್ಕೂ ಈ ಪ್ರಜ್ಞೆಯೇ ಕಾರಣವಾದ್ದರಿಂದ ಇದಂ ಚಿಂತಾಮಣಿಯೆಂದು ಪೇಳುವರು ವಿಶ್ವರ್ಯ ಮೊದಲಾದ ಇಲ್ಲಿಯ ಸುಖಸಾಧನಗಳು ಸಾಮಾರಣ ಜನರಿಂದಲೂ ಸಾಧಿಸಲ್ಪಡುವವ್ವ ಪ್ರಜ್ಞಾವಂತನು ಮಬಲ ನಾರೂಂ ಬಲಿಷ್ಠನಂ ಜಯಿಸುವನೆಂಬ ಪ್ರಜ್ಞಾಹೀನನು ನಾಮೆಯಂ ಹೊಂದಿದ್ದರೂ ನಿದಿಯಂ ಪಾಟಿಲಾನನು ವಜ್ರಕವಚಂ ಧರಿಸಿರುವನನಂ ಬಾಣಗಳಂತೆ ಸ್ರಜ್ಞಾಶಾಲಿಗಳಂ ಅಶಾದೋಷಗಳು ಛೇದಿಸಲಾರವು ಮೊಡನಿಗೆ ಅಪತ್ಪಿನಂತೆ ಪ್ರಾಜ್ಞನಿಗೆ ಸಂಪತ್ತೇ ಒರುವುದು ಅಖಂಡ ಜ್ಞಾನಿಗೆ ಅಹಂಕಾರಾವರಣವಿಲ್ಲದ್ದರಿಂದ ಇವೆರಡೂ ಒಲೆಲಾರವು ಆದ ಸ್ರಯುಕ್ತ ಪ್ರಜ್ಞೆಯಿದ್ದವನು ಭೂಮಿಯಿದ್ದಂತೆ ಸಮಸ್ತ ಫಲವನ್ನೂ ಪಡೆಯುವನೆಂದು ಸಚ್ಚಿದ್ರೂಪನಾಗು ಎಚ್ಚೆ ರಿಕುಳುಳ ಚಂದ್ರನೆ ! ಚಿರಮು ಜನ್ಮವುಳ್ಳ ರಾಜನ ಸಾತ್ರಿಕೇ ಹೀಗೆ ಜನಕರಾಯನಂತೆ ಏಕೇಕವಂ ಪಡೆದು ನಿರ್ಜಾರಬಲದಿಂ ಕೃತಾರ್ಥರಾಗುವರು ಯಾವತ್ಪರ್ಯಂತರ ಆತ್ಮನು ತನ್ನಂ ತಾನೇ ವಿಚಾರಿಸುತ್ತಾ ಪ್ರಸನ್ನನಾಗಿ ತನ್ನಲ್ಲೇ ನಿಶ್ಚಲನಾಗೇ ತಾನತ್ಪೈರ್ಯಂತರ ಅಂತ ಆರಣಾದಿ ಶತ್ರಗಂ ಜಯಿಸುತ್ತಿರಬೇಕು ನೀಜೋತ್ಪನು ಸ್ವರೂಪಗಳಿಂ ಪರಾತ್ಪರನೆಂದು ಪ್ರಸಿದ್ಧನಾಗಿ ದೇವತೆಗಳಿಗೂ ವೀವನಾಗಿರುವ ಆತ್ಮನು ಪ್ರಸನ್ನನಾಗಿ ಅನುಭವದೃಷ್ಟಿಗೆ ಗೋಚರನಾಗುವಲ್ಲಿ ಮೋಹಜನಿಜದ ವೃಷ್ಟಿಗಳೆಂತಲೂ, ಅಪತ್ತಿಗಳ ವೃಷ್ಟಿಗಳೆಂತಲೂ, ದುಃಖದ ಸೃಷ್ಟಿಗಳೆಂತಲೂ, ವ್ಯಸನಗಳ ಸಮಷ್ಟಿಗಳೆಂತಲೂ, ಪ್ರಜ್ಞಾಶವಾದ ದುರ್ದೃಷ್ಟಿಗಳು ನಶ್ಯನಾಗುವವು ಸಂಕಲ್ಪ ವಿಕಲ್ಪ ಸಂಶಯ ನಿಶ್ಚಯ ಅಹಂತಾ ಮಮತಾದಿ ಸ್ವರೂಪವಾದ ಹೃದಯಗ್ರಂಥಿಗಳು ಭಗ್ನವಾಗುವನೆ ಅಂತರ್ವಿಚಾರ ಪರನಾಗಿ ಬಾಹ್ಯಕಾರ್ಯಗಳಂ ನೂಡುವವನಿಗೆ ಕೆಲವು ಕಾಲದಲ್ಲೇ ಆತ್ಮನು ಪ್ರಸನ್ನನಾಗುವನು ಈ ಆತ್ಮ ಪ್ರಸಾದವಂ ಸಂಪಾದಿಸುವುದಕ್ಕೆ ಸ್ವಪ್ರಯತ್ನವೇ ಮುಖ್ಯ ಕಾರಣಾನ್ಯದಂ ಮೂಢಪ್ರಲಾಪಕ್ಕೆ ಆಧಾರವಾಗಿರುವ ದೈವಕಥೆಯಂ ಬಿಟ್ಟು ದೃಢವಾಗಿ ವಿವೇಕಂ ಪಿಡಿಯುವವನಾಗು ಸಂಸಾರ ಸಾಗರವಂ ದಾಟಲಿಚ್ಛೈಸುನವರಿಗೆ ಸ್ವಪ್ರಯತ್ನ ಸಾಧ್ಯವಾದ ವಿಚಾರವೇ ಗತಿಯಲ್ಲದೆ ಅದೃತ್ಯನಾಗಲೀ, ಧನವಾಗಲೀ, ಕರ್ಮವಾಗಲೀ, ಒಂದು ವರ್ಗವಾಗಲೀ, ಯಾವದೂ ಗತಿಯಾಗಲಾರದು ಅದ್ದರಿಂ ವಿಚಾರವನ್ನೇ ನೀನು ಮುಖ್ಯವಾಗಿ ಗ್ರಹಿಸು ವವನಾಗು ವಿಚಾರದಿಂ ಸ್ವರೂಪವಿದಿಪಗಾಲು ವೇಹಾಭಿಮಾನವುಳ್ಳ ಈ ಆತ್ಮೇ ಪ್ರಾತಃಕಾಲದ ಕಮಲದಂತೆ ವಿಕಾಸವಂ ಪಡೆವನು ಬಿಳಲಿನಂ ಹಿಮದಂತೆ ಸಂಸಾರವೂ ಭಾವಿಸುವ ಚಿತ್ತವು ವಿಚಾರದಿಂ ಲಯವಂ ಪೊಂದುವದು ಅಂತಃಕರಣಾದಿಯಾಗಿ ದೇಹಾಂತವಾದ ಪದಾರ್ಥಗಳಲ್ಲಿ ಇದೇ ನಾನೆಂಬ ಜಡಾತ್ಮ ಜ್ಞಾನವೆಳೆಯಲು ಅಖಂಡ ಜ್ಞಾನಪ್ರಕಾಶವಾಗಿ ಸರ್ವವ್ಯಾಪಕವಾಗಿರುವ ಸ್ವರೂಪವು ಮೇಘಾವರಣವಿಲ್ಲದ ದಿನಮಣಿಯಂತೆ ಪ್ರಕಾಶಿಸುವು ನಾನೆಂಬ ಪದವು ಅಹಂಕಾರಕ್ಕೂ ಆದಕ್ಕೆ ಸಾಕ್ಷಿಯೆಂದ ಅತ್ಮನಿಗೂ ಭೇದಕವಾಗಿರ್ಪುದು ಸರ್ವವೂ ನಾನೆಂಬುನಲ್ಲಿ ಅತ್ಮನಿಗೆ ಭೇದಕವಾದ ನಾನೆಂಬ ಪದವು ಅಖಂಡ ಭಾವನೆಯಂ ತೋರಿಸುವದ ಜಡಪದಾರ್ಥದಲ್ಲಿ ನಾನೆಂಬ ನವರಿಂಮಂಬಾದ ನಾನೆಂಬ ಪದವು ಮಮಕಾರ ವಿಶಿಷ್ಟವಾದ ಅಹಂ-ಕಾರಕ್ಕೆ ಭೇದಕವಾಗುವದಾದ್ದರಿಂದ ಅಖಂಡಾರ್ಥವಂ ಭೇದಿಸಲಾರದು ವಿವೇಕವಿಚಾರ ಕಾಲದಲ್ಲಿ ಅಖಂಡಾರ್ಥವಂ ತಿಳಿದವರು ನಾನೂ ಇಲ್ಲ ನನ್ನದೂ ಇಲ್ಲವೆಂದು ನುಡಿಸರು ಆತ್ಮನೇ ಇಲ್ಲವೆಂಬ ಅರ್ಥವಿಂ ಶೂನ್ಯವಾಗಿ ಒದಿಪಿಂಬ ತಾತ್ಪರ್ಯದಿಂದ ನಾನಿಲ್ಲವೆಂಬುವದೇ ಇಲ್ಲವೆಂದು ಕೆಲವರು ಪೇಳುವರು ಇದರಿಂದ ಆ ಗ್ರಂಥವೆಂಬ ಎರಡು ಪದಗಳೂ ನಾನೆಂಬವದು ವಿಷಯವಾಗುವುದು ವಿಚಾರಾವಿಚಾರಗಳಲ್ಲಿ ಆತ್ಮನು ನಾನೆಂಬ ಸದಕ್ಕೆ ಸಾಕ್ಷಿಯಾಗಿದ್ದಾಗ್ಯೂ ಮಾಡಿ ನಂತೆ ತೋರಿ ಪ್ರತಿರುವನು ಈ ಅರ್ಥವಂ ತಿಳಿದವನು ಮನುಷ್ಯ ಗ್ರಾಮ್ಯಾಗ್ರಾಹ್ಯ ಭಾವಗಳಂ ಪಿಡಿದಿರುವ ನಾನಾಬುವದೇ ಒಂಥವೆಂದು ಅದಂ ತ್ಯಜಿಸಿ ಅಖಂಡಾರ್ಥ ಜ್ಞೋದಕ್ಕಾದ ನಾನೆಂಬವದಂ ಪಿಡಿದು ಬ್ರಹ್ಮಭಾವನೆಂ ನವ ಯು ನಾನೆಂಬಾಗಲಿ ಸಾಕ್ಷಿಭಾವದಿಂ ಸರ್ವಾತೀತನು ನಾನೆಂಂನಿಲಿ ಎ ದು ಭಾವಿಸುತ್ತಾ ಮುಕ್ತನೆನಿಸುವನು ಅಖಂಡಭಾವನೆಯೊಳಿರೆಡೆನ ಪದಾರ್ಥವಿಜ್ಞಪ್ತಿರಂದಿಲ್ಲಾ ನಾವಾಬವದಲ್ಲಿ ಸರ್ವಮೂ ವಿಸ್ಮೃತಿಯಾವದಿಂ ಕಾಣುವುದಿಂದಲೂ ಜಡಭಾವನ ಅಜ್ಞಾನಸಮ್ಮವಾದುದರಿಂದಲೂ ನಾನೆ ಒವದೇ ಅಂಗೀತವೆಂದು ತಿಳಿಯತಕ್ಕದ್ದು ವೈಭವಿಜ್ಞಪ್ತಿ ಶಬ್ದಸ್ಪರ್ಶ ರೂಪರಸಗಂಧ ಶಾಸ್ತ್ರಗಳೆಂಬ ಪಂಚವಿಷಯಗಳಲ್ಲೂ ನಾನೆಂಂಬವದು ಗೊತ್ತಾಗಿರುವದ್ದರಿಂದಲೂ ವೈಭವನೇ ಪ್ರಮಾಣವೆಂದು ಕೆಲವರು ಪೇಳುವರು ಸರ್ವಾನುಭವಸಿದ್ಧವಾದ ವೈಭವತ್ಕೆ ಉಪದೇಶವೇ ಬೇಡವಾದ್ದರಿಂದಲೂ, ಸರ್ವಮತ ದುಸ್ಸ್ವವಾದ ಅಹಂಕಾರವಳಿಯುವಲ್ಲಿ ವೈಭವತ್ಕೆ ಸ್ಥಿತಿಯೇ ತಪ್ಪುವದ್ದರಿಂದಲೂ, ಅಜ್ಞಾನಿಗಳಂ ಕೃತಾರ್ಥರಂ ಮಾಡಲೋಸುಗ ಪೂರಮಟ್ಟ ಶಾಸ್ತ್ರಗಳು ಅವರ ಚಿತ್ತ ರೀತಿಯಂ ಪಿಡಿದು ಪೇಳಿಕಾದ್ದರಿಂದ ನಾನೆಂಬ ಶಬ್ದಂ ಪಿಡಿದು ಪೊರಮಟ್ಟಿರುವನೆಂದು ತಿಳಿಯತಕ್ಕದ್ದು ಗ್ರಾಹ್ಯತ್ಯಾಜ್ಯ ಕಲ್ಪನೆಯೇ ಬಂಧವಾದ್ದರಿಂದ ಅಮ ಇರ ವರರೆಗೆ ಯಾರಿಗೂ ಸಮಸ್ಥಿತಿಯುಂಟಾಗಲಾರದು ಅದ್ದರಿಂದ ಅಜ್ಞಾನಸಿದ್ಧವಾದ ಜಡಾತ್ಮ ಭಾವನಂ ಬಿಟ್ಟು ಜನಕರಾಯನಂತೆ ವಿಚಾರ ಬಲದಿಂ ಪೂರ್ಣಭಾವನೆಂ ಪಿಡಿದು ಸಮಭಾವದಿಂ ಹೇಯೋಪಾದೇಯ ಭಾವನೆಯಿಲ್ಲದೆ ಕನ್ನಡಿಯಂತೆ ಬಂದೆದ್ದಿಲ್ಲವಂ ಗ್ರಹಿಸುತ್ತಾ ಅದರ ಲಾಭಾಲಾಭಗಳಲ್ಲೂ ಹಾನಿವೃದ್ಧಿಗಳಲ್ಲೂ ಹೋಕಶಕಗಳಲ್ಲಿ ಒಳಗಾಗದೆ ಧಾರ್ಮಭಾವನೂ ಮಾಡುವನೆನಾಗು

(ಸಶೇಷ)

ಶ್ರೀಮದುಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ್ವರ

ಶ್ರೀಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಪುಣ್ಯದಿನ.

ಪುಷ್ಯ ಬಾ॥ ೪ ಸೋಮವಾರ (೨೧—೧—೧೯೪೬).

ಯಾವ ಗುರುಸಾರ್ವಭೌಮನ ಮಹಿಮಪ್ರಭಾವದಿಂದ ಸುತಾಚಾರ್ಯರ ಧರ್ಮ ಪೀಠಗಳು ಪ್ರಕಾಶಕ್ಕೆ ಬಂದವೋ, ಯಾವ ಮಹಾತ್ಮನ ಪವಿತ್ರಪಾದನಿಸ್ಯಾಸದಿಂದ ವೀರಶೈವಮತದ ವೈಭವವು ಕರ್ನಾಟಕ ಆಂಧ್ರ-ಮಹಾರಾಷ್ಟ್ರಾದಿದೇಶಗಳಲ್ಲಿ ಪ್ರಕಾಶಿತ ವಾಯಿತೋ, ಯಾವ ಗುರುನ್ರಭಾಕರನ ವಿಸ್ತಾರಪ್ರಭೆಯಿಂದ ವೀರಶೈವಗುರುವರ್ಗವು ಎಚ್ಚೆತ್ತು ತನ್ನ ಕರ್ತವ್ಯಕರ್ಮದಲ್ಲಿ ನಿರತನಾಯಿತೋ, ಯಾವ ಪರಶಿವಾವತಾರಿಯ ಪಾದಾರವಿಂದವನ್ನು ಭಕ್ತ್ಯಾವೇಶದಿಂದವು ಪೂಜಿಸಿ, ಭಜಿಸಿ, ಧ್ಯಾನಿಸಿ, ಸೇವಿಸಿ, ಸಕಲೇಷ್ಟಾರ್ಥ ಸಿದ್ಧಿಗಳನ್ನು ಪಡೆಯಿತೋ, ಯಾವ ಧರ್ಮಾಚಾರ್ಯನ ಧರ್ಮಬೋಧಾಮೃತವನ್ನು ಪಾನಮಾಡಿ ಸಮಸ್ತಮಾನವರು ಸದ್ಧರ್ಮಶೀಲರಾದರೋ, ಯಾವ ಯತಿಪುಂಗವನ ನೈಜವಾದ ವಿರತಿಧರ್ಮವನ್ನು ನೋಡಿ ಸಮಸ್ತಮತೀಯ ಯತಿತತಿಯು ಮುಕ್ತಕಂಠ ದಿಂದ ಸ್ತುತಿಸಿತೋ, ಯಾವ ಕರುಣಾಕರನ ಕರುಣಾಕಟಾಕ್ಷವೀಕ್ಷಣದಿಂದ ಕಷ್ಟದಲ್ಲಿ ಶಿಲುಕಿ ಬಳಲುತ್ತಿದ್ದ ಭಕ್ತರ ಕಷ್ಟಗಳು ನಷ್ಟವಾದವೋ, ಯಾವ ದಯಾಸಮುದ್ರನ ದಯೆಯಿಂದ ದೀನರ ದುಃಖಗಳು ದೂರವಾದವೋ, ಯಾವ ಪುಣ್ಯಮೂರ್ತಿಯ ವಾದ ದರ್ಶನದಿಂದ ಪಾಪಿಗಳು ಪಾಪದಿಂದ ದೂರರಾಗಿ ಪುಣ್ಯಮಯ ಶರೀರಿಗಳಾದರೋ, ಯಾವ ಮಂತ್ರಮೂರ್ತಿಯ ಮಂತ್ರೋಪದೇಶದಿಂದ ಶಿಷ್ಯನವುದವು ಮಂತ್ರಮಯನಾಗಿ ವಿರಾಜಿಸಿತೋ, ಯಾವ ಮಹಿಮನ ಮಹಿಮಾತಿಶಯದಿಂದ ಶ್ರೀಜಗದ್ಗುರು ಸಂಚಾ ಚಾರ್ಯರ ಪವಿತ್ರಾಭಿಧಾನವು ಶ್ರುತಿಜಿಹ್ವೆಯ ಮುಖಮಂಟಪದಲ್ಲಿ ನರ್ತನಮಾಡಲು ಪ್ರಾರಂಭಿಸಿತೋ, ಯಾವ ಧರ್ಮಾವತಾರಿಯ ತಪಃಪ್ರಭಾವದಿಂದ ಉಜ್ಜಯಿನೀ ಸದ್ಧರ್ಮ ಸಿಂಹಾಸನವು ಜಗತ್ತಿನಲ್ಲಿ ಪ್ರಜ್ವಲಿತವಾಯಿತೋ, ಅಂತಹ ಸಾಕ್ಷಾತ್ಪರಶಿವಾವತಾರಿಗಳಾದ ಶ್ರೀಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ಶಿಷ್ಯೆಕ್ಯರಾಗಿ ಪುಷ್ಯ ಬಾ॥ ೪ ಮಿತಿಗೆ ೧೧೦ ವರ್ಷಗಳು ಪೂರ್ತಿಯಾಗುವವು. ಆ ಮಹಿಮ ಭರತಖಂಡದಲ್ಲಿರುವ ಸಮಸ್ತ ಗುರುಭಕ್ತರೂ ಶ್ರೀಜಗದ್ಗುರುಗಳವರ ಪುಣ್ಯದಿನವನ್ನು ನಿಃಕೇವ ಭಕ್ತಿಯಿಂದ ಆಚರಿಸಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಶ್ರೀಮನ್ಮಹಾರಾಜರವರ ಸಂಚಾರ

ಮೈಸೂರು ದೇಶಕ್ಕೆ ಸೇರಿರುವ ಕೋಲಾರ, ತುಮಕೂರು ಚಿತ್ರದುರ್ಗ ಈ ಮೂರು ಜಿಲ್ಲೆಗಳಲ್ಲಿ ಈ ವರುಷ ಸರಿಯಾಗಿ ಮಳೆ ಬೆಳೆಗಳಾಗದೆ ಅಲ್ಲಿಯ ಪ್ರಜೆಗಳು ಆಹಾರಾದಿಗಳ ವಿಷಯದಲ್ಲಿ ಬಹಳ ಕಷ್ಟಪಡುತ್ತಿರುವೆ ರೆಂಬ ವಿಷಯವು ಮಹಾಪ್ರಭುಗಳವರವರೆಗೆ ತಿಳಿದು ಬಂದುದರಿಂದ, ಪ್ರಜಾಪ್ರೇಮಿಗಳಾದ ಪ್ರಭುಗಳವರು, ಈ ವಿಷಯವನ್ನು ಸ್ವತಃ ಪರಿಶೀಲಿಸಬೇಕೆಂದು ಯೋಚಿಸಿ ಮೇಲ್ಕಂಡ ಮೂರು ಜಿಲ್ಲೆಗಳಲ್ಲಿಯೂ ಪ್ರವಾಸವನ್ನು ಮಾಡಿದರು. ಪ್ರಭುಗಳ ಸಂಚಾರದಿಂದ ಪ್ರಜೆಗಳ ಕಷ್ಟವು ದೂರಾಗುವುದರಲ್ಲಿ ಯಾವ ಸಂಶಯವೂ ಇರುವದಿಲ್ಲ. ಪ್ರಜಾಪ್ರೇಮಿಗಳೂ ಕರುಣಾಮೂರ್ತಿಗಳೂ ಆಗಿರುವ ಪ್ರಭುಗಳನ್ನು ಪಡೆದಿರುವ ಮೈಸೂರು ದೇಶವೇ ಧನ್ಯ!

ವರ್ತಮಾನಸಂಗ್ರಹ

ಜಪಾನಿ ಸಮ್ರಾಟರಿಗೆ ಅಂಗರಕ್ಷಕ ಪಡೆ ಇಲ್ಲ

ಜಪಾನಿನ ಜನ ಜೀವನದಿಂದ ಪ್ರಜಾ ಸತ್ತೆಯ ವಿರೋಧಿಗಳನ್ನೂ ಮಿಲಿಟರಿ ವಾದಿಗಳನ್ನೂ ಕಿತ್ತೊಗೆಯ ಬೇಕೆಂಬ ಮೆಕ್‌ಆರ್ಥರ್ ಆಜ್ಞೆಯ ಫಲವಾಗಿ ಸಮ್ರಾಟರ ೨೦೦ ಜನ ಅಂಗರಕ್ಷಕ ಪಡೆ ರದ್ದಾಗುತ್ತದೆ. ಇನ್ನು ಮುಂದೆ ಸಮ್ರಾಟ ಹಿರೋಹಿಟೋರವರ ರಕ್ಷಣಾ ಭಾರವನ್ನು ಹೊರತಕ್ಕವರು ಸಾಮಾನ್ಯ ಪೋಲೀಸರು.

ಯೆಹೂದ್ಯರಿಗೆ ಬಹಿಷ್ಕಾರ

ಯೆಹೂದ್ಯರಿಗೆ ಜಮೀನುಗಳನ್ನು ಮಾರುವ ಅರಬ್ಬರಿಗೆ ಮರಣದಂಡನೆ ವಿಧಿಸಲಾಗುವುದೆಂದು ಪ್ರಕಟವಾದ ಹಸ್ತಪತ್ರಿಕೆಗಳನ್ನು ಜರುಸಲೆಮಿನ ರಸ್ತೆಗಳಲ್ಲಿ ಹಂಚಲಾಗುತ್ತಿದೆಯಂತೆ. ಯೆಹೂದ್ಯರ ಸಾಮಾನುಗಳನ್ನು ಬಹಿಷ್ಕರಿಸಿ ಎಂದು ಹಸ್ತಪತ್ರಿಕೆಗಳನ್ನು ಹಂಚಲಾಗುತ್ತಿದೆಯೆಂದು ಹೇಳಲಾಗಿದೆ.

ರಾಣೇಬೆನ್ನೂರಿನಲ್ಲಿ ಗೋಳೀಬಾರು

ಧಾರವಾಡ ಜಿಲ್ಲೆಯ ರಾಣೆಬೆನ್ನೂರಿನಲ್ಲಿ ಶಕೆದ ಸೋಮವಾರ ರಾತ್ರಿ ಆಜಾದ್ ಹಿಂದ್ ಫೌಜಿನ ವೀರರ ಗೌರವಾರ್ಥವಾಗಿ ಹೊಸಪೇಟೆಯ ಮೈದಾನಿಗೆಯ ಮೆಲೆ, ಕೆಲವು ಮುಸ್ಲಿಮರು ಶಸ್ತ್ರಸಜ್ಜಿತರಾಗಿ ಬಿದ್ದು ಗಲಭೆ ಎಬ್ಬಿಸಿದರೆಂದೂ, ಉಭಯ ಪಕ್ಷದವರಿಗೂ ಹೊಡೆದಾಟ ಸ್ವಾರಂಭವಾಯಿತೆಂದೂ ನರದಿಯಾಗಿದೆ. ದಂಗೆಕೋರರು ಕೆಲವು ಅಂಗಡಿಗಳನ್ನು ಲೂಟಮಾಡಿ ಒಂದು ಸಿನಿಮಾ ಮಂದಿರಕ್ಕೆ ಬೆಂಕಿ ಇಟ್ಟರು. ಪೋಲೀಸರು ಗಲಭೆಯನ್ನು ನಿಲ್ಲಿಸಲು ಎರಡು ಬಾರಿ ಗುಂಡು ಹಾರಿಸಿದರು. ತಕ್ಷರಿಣಾವಾಗಿ ೪ ಜನರು ಸತ್ತರು. ೨೦ಕ್ಕಿಕ ಪೋಲೀಸರಿಗೂ ಜನರಿಗೂ ಗಾಯಗಳಾದವು. ಈ ಸಂಬಂಧದಲ್ಲಿ ಪೋಲೀಸರು ೨೫ ಮಂದಿಯನ್ನು ದಸ್ತಗಿರಿ ಮಾಡಿಹ್ಯಾರೆ ಕಳ್ಳಾ ಆಜ್ಞೆ ಜಾರಿಗೆ ತರಲಾಗಿದೆ.

ನಾರ್ವೆಯಿಂದ ೫ ಸಾವಿರ ಟನ್ ಮುದ್ರಣ ಕಾಗದ ಆಮದು

ಈ ವರ್ಷದಲ್ಲಿ ನಾರ್ವೆ ಸ್ಕೀರ್ಡಗಳಿಂದ ೫೦೦೦ ಟನ್ ಮುದ್ರಣ ಕಾಗದವನ್ನು ತರಿಸಲು ಸಾಧ್ಯವಾಗುಬಹುದೆಂದು ಇಂಡಿಯಾ ಸರ್ಕಾರ ಆಶಿಸಿದೆ. ಆದ್ದರಿಂದ ಹೊಸ ಪತ್ರಿಕೆಗಳಿಗೆ ಕೊಡುತ್ತಿರುವ ಕೋಟಾದಲ್ಲಿ ಎನೂ ಬದಲಾವಣೆ ಮಾಡಬಾರದೆಂದು ಸರ್ಕಾರ ತೀರ್ಮಾನ ಮಾಡಿದೆ.

ಇಂಡೋನೇಷಿಯನ್‌ರಿಗೂ ಜಪಾನಿಯರಿಗೂ ಘರ್ಷಣೆ

ಸುಮಾತ್ರಾದಲ್ಲಿ ಇಂಡೋನೇಷಿಯನ್ ನ್ಯಾಷನಲ್ ಸೈನಿಕರಿಗೂ ಮತ್ತು ಜಪಾನೀಯರಿಗೂ ಭೀಕರ ಕದನ ಪ್ರಾರಂಭವಾಗಿದೆಯೆಂದೂ, ಪರಿಸ್ಥಿತಿಯು ತುಂಬಾ ವಿಷಮಿಸಿಗೊಂಡಿದೆಯೆಂದೂ ವರದಿಯಾಗಿದೆ. ಶರಣಾಗತರಾದ ಜಪಾನಿಯರು ಉತ್ತರ ಸುಮಾತ್ರ ಪ್ರಾಂತ್ಯದ ಆಟೋಜ್ ಪ್ರದೇಶಕ್ಕೆ ಹಿಂತಿರುಗಿದಾಗ ಘರ್ಷಣೆ ಆಯಿತೆಂದು ಹೇಳಲಾಗಿದೆ. ಈ ಪ್ರಾಂತ್ಯದ ಜಪಾನಿಯರೆಲ್ಲರನ್ನೂ ಕೂಡಲೆ ನಿಶ್ಶಸ್ತ್ರರನ್ನಾಗಿ ಮಾಡಬೇಕೆಂದು ಇಂಡೋನೇಷಿಯನ್ ರಿಪಬ್ಲಿಕ್ ಅಧಿಕಾರಿಗಳು ಮಿತ್ರ ಅಧಿಕಾರಿಗಳಿಗೆ ಪ್ರತಿಭಟನೆರೂಪವಾದ ಮಾನವಿಮಾಡಿ ಪ್ರಾರ್ಥಿಸಿದ್ದಾರೆ. ಇಂಡೋನೇಷಿಯನ್ನರ ಮೇಲೆ ಕದನ ನಡೆಸಲು ಜಪಾನಿಯರಲ್ಲಿ ಡಿಸೆಂಬರ್ ೨೪ನೆಯ ತಾರೀಖಿನಿಂದ ಸುಮಾತ್ರಕ್ಕೆ ಕಳುಹಿಸಲಾಗುತ್ತಿದೆಯಂತೆ.

ರಷ್ಯನರ ಆಟಂ ಬಾಂಬ್

"ಆಂಗ್ಲ-ಅಮೆರಿಕನ್ ಆಟಂಬಾಂಬು ಆತ್ಯುಲ್ಬಣವಾಗಿ ಕಾಣಬಹುದಾದಂಥ ಹೊಸದೊಂದು ಆಟಂ ಬಾಂಬನ್ನು ರಷ್ಯದ ೫ ಮಂದಿ ಪ್ರಸಿದ್ಧ ವಿಜ್ಞಾನಿಗಳು ಆವಿಷ್ಕಾರ ಮಾಡಿದ್ದು ತಯಾರಿಸಿದ್ದಾರೆಂದೂ ರಷ್ಯನ್ ವಿಜ್ಞಾನಿಗಳಿಗೆ ಸಹಾಯಕರಾಗಿ ಇಬ್ಬರು ಜರ್ಮನ್ ವಿಜ್ಞಾನಿಗಳು ಕೆಲಸಮಾಡಿದರೆಂದೂ, ಡಿಸೆಂಬರ್ ೧೮ ನೇ ತಾರೀಕಿನ ನೇಚರ್ ಈ ಆಟಂಬಾಂಬ್ ತಯಾರಿಕೆಯ ಸಾಧ್ಯತೆ ಯನ್ನು ರಷ್ಯ ಸರ್ಕಾರಕ್ಕೆ ತಿಳಿಸಿರುವುದಾಗಿಯೂ ಹೇಳಲಾಗಿದೆ. ರಷ್ಯನ್ ವಿಜ್ಞಾನಿಗಳು ರಚಿಸಿರುವ ಆಟಂ ಬಾಂಬಿನ ಮುಖ್ಯ ಗುಣಗಳೇನೆಂದರೆ—ಈ ಬಾಂಬು ಪ್ರಯೋಗ ವಾದ ಕಾಲದಿಂದ ಅದು ಗುರಿಯನ್ನು ಮುಟ್ಟುವತನಕ ಬಗುರಿಯಂಕೆ ತಿರುಗುತ್ತಾ ಕ್ರಮ ಕ್ರಮವಾಗಿ ಹೆಚ್ಚು ಹೆಚ್ಚು ಶಕ್ತಿಯನ್ನು ಹೊಂದುತ್ತದೆ. ಇದು ಅತ್ಯಂತ ಮುಖ್ಯವಾದ ಅಂಶ. ಈ ಮುಖ್ಯಗುಣದ ಫಲವಾಗಿ ಆಂಗ್ಲ-ಅಮೆರಿಕನ್ ಆಟಂ ಬಾಂಬು ಫಲಶ್ರುತಿವಾಗಬೇಕಾದರೆ ಎಷ್ಟು ಯುರೇನಿಯಂ ಬೇಕು ಅಗತ್ಯವೋ ಅದಕ್ಕಿಂತ ಕಡಮೆ ಪ್ರಮಾಣದ ಯುರೇನಿಯಂ ಇದಕ್ಕೆ ಸಾಕು. ಆದರೆ ರಷ್ಯನರ ಆಟಂ ಬಾಂಬು ಯಾವ ಗಾತ್ರದಲ್ಲಾದರೂ ಅಧಿಕ ಸಂಖ್ಯೆಯಲ್ಲಿ ತಯಾರಿಸಲ್ಪಡಲು ಸಾಧ್ಯವಾಗುತ್ತದೆ. ಪರೀಕ್ಷೆಗಾಗಿ ತಯಾರುಮಾಡ ಲ್ಪಟ್ಟ ಬಾಂಬು ಟ್ರಿನ್ಸ್ ಚೆಂಡಿನ ಗಾತ್ರದಲ್ಲಿತ್ತು. ಅತಿ ವೇಗದಿಂದ ತಿರುಗುತ್ತಾ ಬಿದ್ದಿತು. ಆಗ ಉಂಟಾದ ಉಷ್ಣಸ್ಫುರಣಾ ಅತ್ಯತಿಶಯವಾಗಿತ್ತು. ಇದರಲ್ಲಿ ಬಾಂಬು ಬಿದ್ದು ನಾಶವಾಗುವ ಪ್ರದೇಶದ ವಿಸ್ತೀರ್ಣವು, ಕಡಿಮೆ ಯಾಗಿರುವಂತೆಯೂ ಅಥವಾ ವಿಶಾಲವಾಗಿರುವಂತೆಯೂ ಬಾಂಬಿನ ಗಾತ್ರಾನುಗುಣವಾಗಿ ನಿಶ್ಚಯಿಸಲು ಸಾಧ್ಯವಿದೆ. ಅತ್ಯಂತ ವಿಶಾಲವಾದ ಧಾರಿ ಬಂಡೆಗಳನ್ನು ಸಿಡಿಸ ಬೇಕಾದ ಇಂಜನಿಯರಿಂಗ್ ಕಾರ್ಯಗಳಿಗಾಗಿ ಆಟಾ ಮಿಕ್ ಶಕ್ತಿಯನ್ನು ಬಳಸಲು ರಷ್ಯನರಿಗಿಗ ಸಾಧ್ಯ ವಾಗಿದೆ. ಈ ತಿಂಗಳಾಂತ್ಯದಲ್ಲಿ ಮೊಲೆತಾಳು ಪರ್ವತ ಪ್ರದೇಶಗಳಲ್ಲಿ ಇನ್ನಷ್ಟು ಪರೀಕ್ಷಾ ಪ್ರಯೋಗಗಳನ್ನು ರಷ್ಯನರು ನಡೆಸಲಿದ್ದಾರೆ." ಹೀಗೆಂದು ಪ್ರಸಿದ್ಧ ಬರಿಷ್ ವಿಜ್ಞಾನಿ ಜಾ॥ ರಾಫೆಲ್ ಇ. ಜಿ. ಆರ್ಮಟ್ರೋ ಪ್ರಭುರ ಪಡಿಸಿದ್ದಾರೆ.

ಹೈದರಾಬಾದಿಗೆ ಒಂದು ಬಂದರು ಬೇಕಂತೆ

ಹೈದರಾಬಾದ್ ಸಂಸ್ಥಾನಕ್ಕೆ ಒಂದು ಬಂದರಿನ ಅವ ಶ್ಯಕತೆ ಇರುವುದರಿಂದ ಮದರಾಸ್ ಪ್ರಾಂತದಲ್ಲಿ ಬಾಗಾಳ ಸಮುದ್ರಕ್ಕೆ ಸೇರುವ ೧೦೦ ಮೈಲಿ ಕಾರಿಡರ್ ಪ್ರದೇಶ ವನ್ನು ಕೊಡಬೇಕೆಂದು ನೈಜಾಮ್ ಸರ್ಕಾರದವರು ಕೇಂದ್ರ ಸರ್ಕಾರದವರನ್ನು ಕೇಳಿಕ್ಕಾರೆಂದು ಲಂಡನ್ನಿನ "ದೇಲಿ ಎಕ್ಸ್‌ಪ್ರೆಸ್" ಪತ್ರಿಕೆ ವರದಿಮಾಡಿದೆ. ಇದರಿಂದ ಹೈದರಾಬಾದಿಗೆ ಕೊಕಾನಾಡ ಬಂದರ್ ಸೇರಬಹು ದೆಂದು ಹೇಳಲಾಗಿದೆ.

ಸಹಸ್ರಗಣಾರಾಧನೆಯ ಸಮಾರಂಭ

ವಿಜಾಪುರ ಜಿಲ್ಲಾ ತೊಪ್ಪಲಕಾಳ ಗ್ರಾಮದ ವಿರೂಪಾಕ್ಷ ಸ್ವಾಮಿ ಹಿರೇಮಠ ಇವರು ಸಹಸ್ರ ಗಣಾರಾಧನೆಯನ್ನು ನೆರವೇರಿಸುವ ಸಂಕಲ್ಪವನ್ನು ಈಗ್ಗೆ ೩೦ ವರ್ಷಗಳ ಹಿಂದೆಯೇ ಮಾಡಿದ್ದು ಅದು ನೆರವೇರುವವರೆಗೆ ಗೋಧಿ, ಅಕ್ಕಿ ಊಟ ಮಾಡುವದನ್ನು ಸಹ ಬಿಟ್ಟಿದ್ದರು. ಈ ಸೊವಲು ಎಷ್ಟೋ ಸಾರಿ ನೆರವೇರಿಸಬೇಕೆಂದು ಸಿದ್ಧತೆ ನಡೆಸಲು ಒಂದಿಲ್ಲೊಂದು ರೀತಿಯಿಂದ ವಿಘ್ನಗಳು ಉಂಟಾದವು. ಹೀಗೆ ಎಷ್ಟೋ ದಿವಸಗಳು ಕಳೆದುಲು ಒಂದು ದಿವಸ ಸದರಿಸ್ವಾಮಿಜಿ ಉದಾರಿಗಳೂ ಗುರುಲಿಂಗ ಜಂಗಮ ಪ್ರೇಮಿಗಳೂ ಬೆಲಂತಕಿ ಹಿರೇಮಠದ ಲಿಂಗೈಕ್ಯ ಶ್ರೀ ಬಸವೇಶ್ವರ ಶಿವಯೋಗಿಗಳವರ ಸೇವೆ ಯನ್ನು ಶ್ರೀಕರಣಪೂರ್ವಕಾಗಿ ಮಾಡಿ ಕೃತಾರ್ಥರಾದ ನರೂ ಆದ ಗುರುಭಕ್ತಕಂಠೀರವ ಶ್ರೀಮಾ ಸೋಜಾರಿ ನುಲ್ಲಯ್ಯನವರು ವಿರೂಪಾಕ್ಷಸ್ವಾಮಿಗಳ ಸನ್ನಿಧಿಗೆ ಹೋಗಿ, ಸ್ವಾಮಿಗಳೇ, ತಾವು ವಯೋವೃದ್ಧರಾದಿರಿ. ಈ ದೇಹವು ಸ್ಥಿರವಲ್ಲ, ತಮ್ಮ ಸಂಕಲ್ಪವು ಹಾಗೇ ಉಳಿ ಯಿತು. 'ಶುಭಸ್ಯಶೀಘ್ರಂ'—ಎಂಬಂತೆ ಮಂಗಳ ಕಾರ್ಯಗಳು ಶೀಘ್ರವಾಗಿ ಜರಗುವದು ಯೋಗ್ಯ; ನನಗಾದರೂ ಆಶ್ಚ ಮಾಡಿರಿ; ಇದಕ್ಕೆ ಜಾನೇನೂ ಹಿಂಜರಿಯುವನಲ್ಲವೆ ಎಂದು ನುಡಿಯಲು, ಅಗ್ಗೆ ಸ್ವಾಮಿ ಗಳು ಸಮಾರಂಭ ನೆರವೇರಿಸಲು ಆಜ್ಞೆ ಇತ್ತರು. ಕೂಡಲೆ ಮಲ್ಲಯ್ಯನವರು ಊರಿನ ಸರ್ವಭಕ್ತರನ್ನು ಕೂಡಿಕೊಂಡು ಒಂದು ವಾರದಲ್ಲಿ ಮೂಡಿದ್ದಲ್ಲದೆ, ಬಬ ಲೇಶ್ವರ ಸ್ವಾಮಿಗಳನ್ನೂ, ಬೆಲಂತರ ಹಿರೇಮಠ ಸಿದ್ಧ ರಾಮೇಶ್ವರ ಸ್ವಾಮಿಗಳನ್ನೂ ಬರಮಾಡಿಕೊಂಡು ಇವೆ ಹಿರೇಮಠದ ಲಿಂಗೈಕ್ಯ ಜೆನ್ನ ಬಸವೇಶ್ವರ ಶಿವಯೋಗಿಗಳ ಸ್ಥೋತ್ರೋದ ಪಲ್ಲಟ್ಟಿ ಉತ್ಸವನನ್ನು ವಿಜೃಂಭಣೆಯಿಂದ ಜರುಗಿಸಿದರು. ಇಂಥ ಕರಣಕಾಲದಲ್ಲಿಯೂ ಸಕ ಸಮಾ ರಂಭವು "ನಭೂತೋನಭವಿಷ್ಯತಿ"—ಎಂಬಂತೆ ಜರ ಗಿತು. ಸುಮಾರು ೬೫೦೦ ಜನರ ಸಮಾರಾಧನೆಯಾ ಯಿತು ಇಷ್ಟಲ್ಲಕ್ಕೂ ಮೂಲಕಾರಣರು ಮಲ್ಲಯ್ಯ ನವರಲ್ಲವೇ? ಒಬ್ಬರಿಂದ ಊರು ಪಾವನ ಒಬ್ಬರಿಂದ ಕೇರಿ ಪಾವನ ಎಂಬಂತೆ ಮಲ್ಲಯ್ಯನವರಂಥ ಗುರು ಭಕ್ತರು ಜಗತ್ಪಿತನಲ್ಲರಿವನವರಿಂದ ಅಸಾಧ್ಯ ಕಾರ್ಯಗಳು ಸುಗಮವಾಗಿ ಸಾಗುವದು ದೊಡ್ಡ ಮಾತಿಲ್ಲ. ಈ ಮಹಾ ಸಮಾರಂಭವನ್ನು ನೆರವೇರಿಸಿದ ಮಲ್ಲಯ್ಯನವರಿಗೂ ಸರ್ವ ಭಕ್ತರಿಗೂ ಕರುಣಾತ್ಮನು ಕಲ್ಯಾಣವನ್ನುಂಟು ಮಾಡಿಲೆಂದು ಪ್ರಾರ್ಥಿಸುತ್ತೇನೆ.

ಸಂಗಸ್ಸ ನಂವೆಸ್ಸಗೂಳ
ಕಾಮಂಡಕೆ

ಶ್ರೀಮಠಕ್ಕೆ ಗುರುವರ್ಗದ ಜಾಗೃತಿ

ಭರತಖಂಡದಲ್ಲಿರುವ ವೀರಶೈವರ ದೀಕ್ಷಾ, ಶಿಕ್ಷಾ, ಮೋಕ್ಷಾದಿಗಳೆಲ್ಲಾ ಗುರುವರ್ಗದ ಮೂಲಕಾರಣೇ ಭೂತವಾಗಿರುವುದೆಂಬ ವಿಷಯವು ಸರ್ವರಿಗೂ ವಿದಿತ ವಾಗಿಯೇ ಇದೆ. ಗುರುವರ್ಗದವರು ಮುಖ್ಯವಾಗಿ ವೇದಾಗಮಾದಿಗಳನ್ನು ಅಧ್ಯಾಪನಮಾಡಿ, ಅವುಗಳುಕ್ತ ವಾಗಿರುವ ನರ್ಣಾಶ್ರಮಾದಿ ಧರ್ಮಗಳನ್ನೂ ಆಸ್ಪಾವರಣ, ಭಂಜಾಚಾರ, ಪಟ್ಟಸ್ಥಲಗಳ ಸ್ವರೂಪವನ್ನೂ ತಮ್ಮ ಶಿಷ್ಯ ಮಂಡಲಿಗೆ ಉಪದೇಶಿಸಿ ಇವರನ್ನು ಉದ್ಧರಿಸಬೇಳು. ಇದೇ ಗುರುವರ್ಗದವರ ಮೊದಲಕೆಯ ಕರ್ತವ್ಯವಾಗಿರು ವದು. ಗುರುವರ್ಗದವರು, ಸದಾಚಾರಸಂಪನ್ನರೂ, ಶಮದಮಾದಿ ಗುಣಸಮಲಂಕೃತರೂ, ಅಗಾಧಾದಿ, ಅವರಿಂದ ಸಮಾಜವು ಉದ್ಧಾರವಾಗುವದು. ಇದಕ್ಕೆ ವಿರುದ್ಧವಾಗಿ ವರ್ತಿಸಿದರೆ, ಸಮಾಜವೂ ತಾವೂ ರಜ್ಜಾತ ಲಕ್ಷಿಯಾಗುವದರಲ್ಲಿ ಸಂಶಯವಿಲ್ಲ. ಶ್ರಾಚೀನ ಗುರು ವರ್ಗದವರು ನೇಗೆ ಹೇಳಿದಂತೆ, ಸಕಲ ಸಮ್ಮಾಣಗಣ ಭೂಷಿತರಾಗಿದ್ದರು. ಅದುದರಿಂದಲೇ ಪೂರ್ವದ ಹಿಂದೂ ರಾಜರೂ, ಮುಸಲ್ಮಾನ ರಾಜರೂ ಇವರ ಮಠಗಳಿಗೆ ಅನೇಕ ಭೂದಾನವನ್ನು ಮಾಡಿದರು. ಅವರು ಕೊಟ್ಟರುವ, ಭೂದಾನಗಳನ್ನು ಇಂದಿನವರೆಗೂ ಗುರು ವರ್ಗದವರು ಅನುಭವಿಸುತ್ತ ಬಂದಿರುವರು. ಶ್ರಾಚೀನ ರಾಜರು, ಇವರಲ್ಲಿ ಪೂರ್ಣಭಕ್ತಿಯನ್ನಿಟ್ಟು ಇವರಿಗೆ ಅನೇಕಾನೇಕ ಪಾಶನಗಳು ಮಾತಿರದೇಕಾದರೆ, ಪೂರ್ವದ ಗುರುವರ್ಗದವರು ಮಹಾಮಹಿಮಶಾಲಿಗಳಾ ಗಿದ್ದರೆಂಬುದರಲ್ಲಿ ಯಾವ ಸಂಶಯವೂ ಇರುವದಿಲ್ಲ.

ನಮ್ಮ ಗ್ರಾಮದಲ್ಲಿರುವ ವಿರಿಮಠಕ್ಕೆ ಪೂರ್ವ ಕಾಲದಲ್ಲಿ ಶ್ರೀ ಶಿವಯೋಗೀಶ್ವರಸ್ವಾಮಿಗಳೆಂಬರು ಅಧಿಪತಿಗಳಾಗಿದ್ದು, ಅಸಾಧಾರಣ ಮಹಿಮಾನ್ವಿತರಾಗಿ ದ್ದರು. ಇವರ ಮಹಿಮೆಯು ಎಲ್ಲ ಕಡೆಗೂ ಬಬ್ಬಿತ್ತು. ಇವರ ಮಹಿಮೆಯನ್ನು ಪರೀಕ್ಷಿಸುವದಕ್ಕೋಸ್ಕರ ಆ ಕಾಲದಲ್ಲಿ ನಮ್ಮ ದೇಶವನ್ನಾಳುತ್ತಾ ಈಗಿರುವ ಹುಮನಾಬಾದು ನಗರ (ಜಯಸಿಂಗಪುರ) ವನ್ನು ರಾಜ ಧಾನಿಯನ್ನಾಗಿ ಮಾಡಿಕೊಂಡಿದ್ದ, ರಾಮಚಂದ್ರನೆಂಬ ಮಹಾರಾಜನು, ಒಂದು ದಿನ ಈ ಯೋಗೀಶ್ವರರ ಬಳಿಗೆ ಬಂದು ಜರತಾರಿ ಬಟ್ಟೆಯಿಂದ ಮುಚ್ಚಿದ ಮಾಂಸ

[೪ನೆಯ ಪುಟವನ್ನು ನೋಡಿ]

ಸ್ವೀಕಾರ

ವಿಜಾಪುರ ಡಿ॥ ತೊಪ್ಪಲಕಾಳಗ್ರಾಮದಲ್ಲಿರುವ ವೇ॥ ಹಿರಿಯಮಠದ ವಿರೂಪಾಕ್ಷಸ್ವಾಮಿಯವರು ನೆರವೇರಿಸಿದ ಸಹಸ್ರ ಗಣಾರಾಧನೆಯ ಸಮಯದಲ್ಲಿ ಪ್ರಭಾಪೋಷಣಾ ಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ಮಂ॥ ರಾ॥ ಸಂಗೊಂಡಪ್ಪ ಬಾಗೇವಾಡಿ ಇವರ ದ್ವಾರಾ ತಲ್ಪರು ತ್ತವೆ.

ಸೊಲ್ಲಾಪುರ ನಗರದಲ್ಲಿರುವ ಸೌ॥ ಭಾಗೀರಥೀ ಬಾಯಿ ಕಟಾವ ಇವರ ಪುತ್ರಿ ಚಿ॥ ಸೌ॥ ಗೌರೀದೇವಿಯ ವಿವಾಹವು ವೈಭವದಿಂದ ನೆರವೇಂದ ಸಮಯದಲ್ಲಿ ಸದರಿಯವರು ಪ್ರಭಾಪೋಷಣಕ್ಕೋಸ್ಕರ 2 ರೂಪಾಯಿ ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಧಾರವಾಡ ಡಿ॥ ಕೆಲಗೇರಿ ಗ್ರಾಮದ ಗುಡ್ಡದ ಮಠದ ಸಿದ್ಧಲಿಂಗಯ್ಯನು ಹುಬ್ಬಳ್ಳಿಯಲ್ಲಿ ಶಿವಧೀನ ನಾದಾಗ್ಗೆ ಪ್ರಭಾಪೋಷಣಕ್ಕಾಗಿ ತೆಗೆಯಿಸಿದ 1-4-0 ರೂಪಾಯಿಯು ವೇ॥ ಹಿರೇಮಠದ ಸೋಮಯ್ಯನವರು ವೇ॥ ಹೊಸಮಠದ ವೀರಭದ್ರಯ್ಯನವರು ಇವರ ದ್ವಾರಾ ತಲ್ಪರುತ್ತದೆ.

ಸೊಲ್ಲಾಪುರ ಡಿ॥ ಮಾಳಕವಡೆ ಗ್ರಾಮದ ಇನಾಂದಾರ ಶ್ರೀಮಂತ ಡಿ. ಎನ್. ದೇಶಮುಖರಿಗೆ ಪುತ್ರರತ್ನವು ಜನಿಸಿದ ಸಂತೋಷಕ್ಕಾಗಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಲ್ಪಟ್ಟ 1 ರೂಪಾಯಿಯು ಶ್ರೀ ಜೈನಾಪುರ ಚರಮೂರ್ತಿಸ್ವಾಮಿಗಳ ದ್ವಾರಾ ತಲ್ಪರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನಾಯಲೆಂದು ಹಾರೈಸುತ್ತೇನೆ.

ಮಯವಾದ ಬಂಗಾರದ ತಟ್ಟೆಯನ್ನು ಮುಂದಿಟ್ಟು ನಮಸ್ಕರಿಸಿದನು ಶಿವಯೋಗಿಗಳು ಆ ತಟ್ಟೆಯನ್ನು ಹಾಗೆಯೇ ಅಶೀರ್ವದಿಸಿದರು ರಾಜನು ನೋಡುವಲ್ಲ ಒಂಗಾರದ ತಟ್ಟೆಯು ನಾನಾವಿಧ ಕೋಮಲ ಕುಸುಮ ಗಳಿಂದ ಕಂಗೊಳಿಸುತ್ತಿತ್ತು ಈ ವಿಧವಾದ ಗುರು ಮಹಿಮೆಯನ್ನು ರಾಜನು ಕಂಡು, ಅನಂರಿಗೆ ಶಿಷ್ಯ ನಾದನು ಇಂತಹ ಚರಿತ್ರೆಗಳು ಗುರುವರ್ಗದ ಇತಿಹಾಸ ದಲ್ಲಿ ಅನೇಕಾನೇಕವಾಗಿ ನಡೆದು ಹೋಗಿವೆ ಪೂರ್ವದ ಗುರುಗಳಲ್ಲಿ ವಿರಕ್ತರಾದಿಯಾಗಿ ಸರ್ವರೂ ಭಕ್ತಿಯ ನ್ನಿಟ್ಟು ವರ್ತಿಸುತ್ತಿದ್ದರು ಕಾಲಮಹಿಮೆಯಿಂದ ಇತ್ತೀ ಚೆಗೆ, ಈ ವರ್ಗದಲ್ಲಿ ವಿದ್ಯಾವಿಹೀನತೆಯು ತಲೆಮೇರಿ ಒಳಹ ಹಿಂದುಳಿಯಲು ಪ್ರಾರಂಭವಾಯಿತು ವಿರಕ್ತರ ಅಭ್ಯುದಯದಿಂದ ಗುರುವರ್ಗವು ತೇಜೋವಿಹೀನತೆಯನ್ನು ಹೊಂದಿ ಅವರ ಸೇವಕರಂತೆ ಆಚರಿಸತೊಡಗಿತು ಗುರು ವರ್ಗಕ್ಕೊದಗಿದ ಇಂತಹ ವಿಪತ್ಪರಿಸ್ಥಿತಿಯಲ್ಲಿ ಪಂಡಿತ ಶ್ರೀ ಕಾಶೀನಾಥ ಶಾಸ್ತ್ರಿಗಳವರು ಅವತರಿಸಿ ವಿರಕ್ತರ ಅಭ್ಯುದಯದಲ್ಲಿ ಮುಳುಗಿ ಹೋಗಿದ್ದ ಗುರುವರ್ಗದ ಅಭ್ಯುದಯವನ್ನು ತಂದಿಸಿ, ಗುರುಧ್ವಜವನ್ನು ಎತ್ತಿ ಹಿಡಿದು ಗುರುವರ್ಗ ಸಂಸ್ಥಾಪನೆಯೆಂಬ ಹೃದಯಭೂಮಿಯಲ್ಲಿ ಗುರು ತತ್ತ್ವ ಬೀಜವನ್ನು ಬಿತ್ತಿ ಅದನ್ನು ವೈಕ್ಷವನ್ನಾಗಿ ಮಾಡಿದರು. ಈ ಸಮಯದಲ್ಲಿ ಪಂಡಿತರಿಗೆ ಅನೇಕ ಕಷ್ಟಗಳು ಪ್ರಾಪ್ತವಾದವು ಆದರೂ ಪಂಡಿತರು ಅವುಗಳಿಗೆ ಹಿಂದಿರಿ ನಿಂತು ಗುರುವರ್ಗದ ವಿಜಯದ ಧ್ವಜವನ್ನು ಸರ್ವತ್ರ ಜಾರಾಡಿಸಿದರು ಅವರ ಅದ್ಭುತವಾದ ಕರ್ತೃತ್ವ ಶಕ್ತಿ ಯಿಂದ ಪ್ರತಿಯೊಂದು ನೆಗರ ಗ್ರಾಮಗಳಲ್ಲಿರುವ, ಗುರು ವರ್ಗದವರು ಎಚ್ಚೆತ್ತು, ತನ್ಮ ಪ್ರಜಾಪತಿ ಸ್ವರೂಪವನ್ನು ತಿಳಿದುಕೊಂಡರು ಅವರ ಆಸ್ಥಿತವಾದ ಚಲನೆಯಿಂದ ಇಡೀ ವೀರಶೈವ ಸಮಾಜವೇ ಉಲ್ಲೋಲ ಕಲ್ಲೋಲ ವಾಯಿತು ಅಲ್ಲಲ್ಲಿ ಗುರುವರ್ಗದವರು ಧೈರ್ಯದಿಂದ ಶಿಷ್ಯೋದ್ಧಾರ ಕಾರ್ಯದಲ್ಲಿ ತೊಡಗಿದರು ಗುರುವರ್ಗ ದವರು ಶಾಸ್ತ್ರಿಗಳವರ ನಿರತರಾದರು ಅಲ್ಲಲ್ಲಿ ಅನೇಕ ಜನ ಸಚ್ಚಿತರ್ಮೋರ್ಚಾಸ್ವಾಮಿಗಳು ಸಮಾಜ ಸುಧಾರ ಣೆಯ ಕಾರ್ಯವನ್ನು ಕೈಗೊಂಡರು ನಮ್ಮ ಪ್ರಾಣಾ ಪ್ರಾಂತದಲ್ಲಿ ನಂದೂರು ಗುಲ್ಬರ್ಗಾ ಜೇವರ್ಗಿ ಮೊದಲಾದ ಗ್ರಾಮಗಳ ಸ್ವಾಮಿಗಳವರೂ ನುಪಾಂಠ್ಯ ಪ್ರಾಂತದಲ್ಲಿ ಪಾಂಡಿಕೆರ ಒನ್ಕೆಯೇರ ಮೊಸಲಾದ ಸ್ವಾಮಿಗಳವರೂ ಮೈಸೂರು ಪ್ರಾಂತದಲ್ಲಿ ಹೆಗ್ಗೆರೂರು ಸ್ವಾಮಿಗಳವರೂ ಧಾರವಾಡ ಪ್ರಾಂತದಲ್ಲಿ ಕುಂದಗೋಳ ಯಬ್ಬಲ್ಲಿ ಸೂರಿ ಸೂಡಿ ಪತ್ತಿಗೇರಿ ಚಿಕ್ಕನಂಜಾಪುರಿ ಮೊದಲಾದ ಗ್ರಾಮಗಳ ಸ್ವಾಮಿಗಳವರೂ ಗುರುವರ್ಗದ ಕಾರ್ಯಕ್ಕಾಗಿ ತಮ್ಮ ಶರೀರವನ್ನೇ ಧಾರಣೆಯರಿಲೆ ವರು ಈ ರೀತಿಯಾಗಿ ಗುರುವರ್ಗವು ಇಂಡಿಯಾ ನೇಶವಲ್ಲಿ ಜಾಗೃತಿಗೊಳ್ಳುತ್ತಿರುವ ಸಮಯುವಲ್ಲಿ ಗುರುವರ್ಗದ ನೇತನನ್ನು ಪಾಕಕೊ ಡಿರುವ ಎಚ್ಚಿಟ್ಟಿರು ಪಂಚಾ ಚಾರ್ಯರ ತತ್ತ್ವಕ್ಕೆ ವಿರುದ್ಧವಾದ ಇನ್ನಾವುದೇ ಒಪನ ಮುಖ್ಯ ತತ್ತ್ವವಾದ ಜಾತಿಸಾಂಕರ್ಯ ಕಾರ್ಯದಲ್ಲಿ ತೊಡಗಿ ರುವದನ್ನು ನೋಡಿನರೆ ಅತ್ಯಂತ ನಿಷಾದವನೆನಿಸುತ್ತಿದ ವೀರು ಇನರಿಗಿ ಈ ವಿಧವಾದ ದುರ್ಬುದ್ಧಿಯನ್ನು ಏಕೆ ಕೊಟ್ಟನೋ ಪರಮಾತ್ಮ ಇನ್ನಾದರೂ ಈ ಮಹಾಪರಿಯರು ಗುರುವರ್ಗದ ಮೂಲತತ್ತ್ವಕ್ಕೆ ಕುಠಾರ ವಂತಿರುವ ಜಾತಿಸಾಂಕರ್ಯಕಾರಕ ದುಷ್ಕಾರ್ಯದಿಂದ ಪುನಃ ರಾಷ್ಟ್ರಕಲ್ಯಾಣವಾದರಲ್ಲಿ ಯಾವ ಸಂಶಯವೂ ಇಲ್ಲ ಅಮದರಿಂದ, ಗುರುವರ್ಗದ ಮಹಶ್ರೀಯರೇ! ಚಿಕ್ಕತಿಜಾನುಮನಿರೇ! ಎಲೆ ಜಾತಿಸಾಂಕರ್ಯಕಾರಕರ ದುರ್ವರ್ತನವನ್ನು ಖಂಡಿಸಿರಿ ನರಾಶ್ರಮಧರ್ಮ ಗ ನ್ನು ಪಾಲಿಸಿರಿ, ಗುರುವರ್ಗದ ಜಾಗೃತಿಯ ಒಗ್ಗೆ ಮಾಡಿರಿ ಇದು ಸುಮ್ಮನೆ ಕುತೂಹಲಕ್ಕೊಳ್ಳುವ ಕಾರವಲ್ಲ

ಗುರುವಿನ ಹತ್ತರ ಹೋಗುವಾ ಬನ್ನಿ ।
ಗುರುವಿನ ಕಾರ್ಯವ ಮಾಡುವಾ ಬನ್ನಿ ।
ಗುರುವಿನ ಮರ್ಮವ ತೀಳಿಯುವಾ ಬನ್ನಿ ।
ಗುರುವಿನ ಶ್ರೇಷ್ಠತೆ ಸಾರುವಾ ಬನ್ನಿ ।
ಗುರುವರ್ಗವನು ಸೊರೆಯುವಾ ಬನ್ನಿ ।
ಗುರುವರ್ಗ ಜಾಗೃತಿಗೊಳಿಸುವಾ ಬನ್ನಿ ।
ಸಂಸಾರದ ಮೋಹವ ಮೂಡುವಾ ಬನ್ನಿ ।
ಶಿವಸಾಮ್ರಾಜ್ಯವ ಪಡೆಯುವಾ ಬನ್ನಿ ।
ಧರ್ಮಧ್ವಜವನು ಊರುವಾ ಬನ್ನಿ ।
ಬನ್ನಿ ಬನ್ನಿ ಬಹು ಬೇಗನೆ ಬನ್ನಿ ।

ಗುರುಸಾದಕಿಂಕರ ಸಿದ್ಧರಾಮಯ್ಯ ಜಂಗಿ
ಹುಮನಾಬಾದ

ನುದರಾಸಿನಲ್ಲಿ ಕ್ಷಾಮಭೀತಿ

ನುದರಾಸ್ ಸ್ಥಾಂತ್ಯದಲ್ಲಿ ಬರುವ ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ಅಕ್ಕಿಯ ಕ್ಷಾಮ ಸಂಭವಿಸುವುದರಿಂ ಅಕ್ಕಿಯ ಬದಲು ಗೆಣಸನ್ನು ಆಹಾರವಾಗಿ ಉಪಯೋಗಿ ನಲು ಸಾಧ್ಯನೇ ಎಂಬುದನ್ನು ನುದರಾಸ್ ಸರ್ಕಾ ಆಲೋಚಿಸುತ್ತಿದೆಯೆಂದು ಹೇಳಲಾಗಿದೆ

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (ಒನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ (ಒನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (ಒನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (ಒನೆಯ ಆವೃತ್ತಿ)	೨ ಆಣೆ
ಶ್ರೀಸಂಜಾಚಾರ್ಯ ಮಂಗಳಸ್ತೋತ್ರಾವಳಿ (೧೦ನೆಯ ಒವೃತ್ತಿ)	೩ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೇ ಆವೃತ್ತಿ)	೩ ಒಣೆ
ಬಸವಾದಿಪ್ರಸಿಜತತ್ವವಿವರಣ (ಒನೆಯ ಆವೃತ್ತಿ)	೩ ಆಣೆ
ಶ್ರೀಸೇಣುಕಾಚಾರ್ಯಶತಕ (ಒನೆಯ ಆವೃತ್ತಿ)	೩ ಆಣೆ
ಶ್ರೀಗುರುತತ್ತ್ವಪ್ರದಗಳು (ಒನೆಯ ಆವೃತ್ತಿ)	೩ ಒಣೆ
ಶ್ರೀಕುಂಭೇಶ್ವರ ನಿಷಿಮಾಚಾರ್ಯಶತಕ	೨ ಆಣೆ
ಶಿವಶಕ್ತಿ ವಿಲಾಸ	೨ ಆಣೆ
ಪಂಜಾಚಾರ್ಯಸ್ತೋತ್ರ	೩ ಆಣೆ
ಪಂಚಾಚಾರ ಪ್ರಕಾಶಿಕ	೩ ಆಣೆ
ವೀರಶೈವಾಚಾರದೀಪಿ (ಒನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (ಒನೆಯ ಆವೃತ್ತಿ)	೮ ಆಣೆ
ಶ್ರೀಪತಿಶಂಡಿತಾರಾಧ್ಯರ ಕಾರ್ಯಗಳು	೧ ಆಣೆ
ಶೈಸ್ಥೋಪನಿತ್ಯರ್ಗ್ರಹ (ಸಂಸ್ಕೃತ)	೪ ಆಣೆ
ವೀರಶೈವ ಸ್ಯಾಯಶಿಕ್ಷಾವಿಧಿ	೪ ಆಣೆ
ವೈದಿಕವಾಜ್ಯಯೆಸಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವವಿವೇಚನೆ (ಒನೆಯ ಆವೃತ್ತಿ)	೬ ಆಣೆ
ವೀರಶೈವಾಂಜೇಯ ಸ್ಮಾರ್ತಶಾಸ್ತ್ರವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಸಂಸ್ಕೃತ ವ್ಯಾಖ್ಯಾನ)	೭ ಆಣೆ
ವೀರಶೈವ ಕಾಶ್ಯರ	೮ ಆಣೆ
ಬಸವಧ್ವಜಸ್ತೋತ್ರಾಕರ (ಒನೆಯ ಆವೃತ್ತಿ)	೮ ಆಣೆ
ತಿಪಾದ್ಯ ತಪರಿಭಾಷಾ (ಸಂಸ್ಕೃತ)	೮ ಆಣೆ
ಆಗಮ ಪರಿಷ್ಕಾರ	೮ ಆಣೆ

ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಗಳು (ತೆಲುಗು)	೪ ಆಣೆ
ಸಮ್ಯಗ್ವಿಚಾರಶಾಸ್ತ್ರಗಳು	೮ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೩ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೩ ಆಣೆ
ಶಿವಾಗಮಸಿದ್ಧಾಂತವಿವರಣ	೧೩ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ತವರಯುಕ್ತವಾದ ಒನೆಯ ಆವೃತ್ತಿ)	೧೫ ರೂ
ಸಿದ್ಧಾಂತಶಿಖಾಮಣಿವ್ಯಾಖ್ಯಾನ (ಸಂಸ್ಕೃತ ಟೀಕಾಗ್ರಂಥ)	೧ ರೂ
ಕೈವಲ್ಯಗೀತಾವಿವರಣ (ಸಂಸ್ಕೃತ ಟೀಕಾಗ್ರಂಥ)	೧ ರೂ
ಶ್ರೀಕರಭಾಷ್ಯ (ಸಂಸ್ಕೃತ)	೧೫ ರೂ
ಸಚಿತ್ರ ರೇಣುಕವಿಜಯ (ಒನೆಯ ಆವೃತ್ತಿ)	೧೫ ರೂ
ವೀರಶೈವವಿರತ್ನ (ಸಂಸ್ಕೃತ ಆವೃತ್ತಿಯ ಇಂಗ್ಲೀಷ್ ಭಾಷಾಂತರ)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಸಂಸ್ಕೃತ ಟೀಕಾಸಹಿತ)	೨ ರೂ
ಸಿದ್ಧಾಂತಶಿಖಾಮಣಿ (ಸಂಸ್ಕೃತ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹ (ಒಂದಕ್ಷಾಗಮ ಸಂಗ್ರಹ ಕಾರಣಾಗಮ ಸೂಕ್ಷ್ಮಾಗಮಗಳಿಂದ ಕೂಡಿರುವ ಗ್ರಂಥ)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಸುಧಾಜರಿ (ಕನ್ನಡವ್ಯಾಖ್ಯಾನ ೧೫೬೪ ಪುಟ)	೪ ರೂ
A brief life sketch of Pandit Sri Kashinatha Shastriji (*English*)	4 As
The Philosophical Aspect of Viraśaivism (*English*)	8 As
Speeches by Pandit Shri Kashinatha Shastriji (*English*)	12 As
ಶಿವಾದ್ವೈತನಿರ್ಣಯಚಂದ್ರಿಕಾ (ಸಂಸ್ಕೃತ)	೩ ರೂ
ವೀರಶೈವರತ್ನ (ಮರಾಠಿ)	೨ ರೂ
ಪ್ರಮಾಣಾಗಮಪರಿಷ್ಕಾರ (ವೀರಶೈವಾಚಾರ-ಸಂಸ್ಕೃತ)	೨ ರೂ
ಸಿದ್ಧಾಂತಶಿಖಾಮಣಿ (ಮೂಲ)	೮ ಆಣೆ
ಸಚಿತ್ರಕೇದಾರಕಾರಿಕಾ (ಸಂಸ್ಕೃತ)	೨ ಆಣೆ

ಸಾರ್ವತ್ರಿಕರು — **ಶ್ರೀಸಂಜಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು**

ಮೈಸೂರು ಸರ್ಯಾಕಾರ್ಯ ಕೋಷಿಸಲ್ಲಿರ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಿಂದ ನಾಗ ಶಂಭಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಪ್ರಕಾಶಿಸಲ್ಪಟ್ಟಿತು

REGISTERED No M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಭ್ಯಾಂ ಪ್ರಸೀದಂತು ॥ REGISTERED No M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನವಂಶಜಾತಜಪಿತರ್ ಪಂಚಾಸ್ಯಪೀಠಾಧಿಪರ್ । ಪಂಚಶ್ಲೋಕವಿಚಾರಕರ್ ಪರತತ್ತ್ವಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಲಸತ್ಪಂಚಾಕ್ಷರೀಮೋಹರ್ । ಪಂಚಾಚಾರ್ಯಜಗದ್ಗುರುತ್ರಿಮತವರ್ ಪಾಣಿಶ್ಚತುರ್ವೇದಿಸೋಮಂ ॥

ಸ್ವದನಂಗೆ ೨ ರೂ ೪ ಆಣೆ ಪರಸ್ವದನಂಗೆ ೩ ರೂ ವಿ ಪಿ. ಖರ್ಚು ಸೇರಿ ೩ ರೂ. ೪ ಆಣೆ

ಸಂಪುಟ ೧೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೧ನೇ ಜನವರಿ ೧೯೪೬ [ಸಂಚಿಕೆ ೩೬

ಪ್ರಭೆಗೆ ಸ್ವಾಗತವು

ಓ ! ಪ್ರಭೆಯೆ, ಬಾ ಪ್ರಭೆಯೆ, ಆಚಾರ್ಯ ಪ್ರಭೆಯೆ!
ಎನ್ನ ಹೃದಯಾಂಬುಜಕೆ ರವಿಯೆ ! ಜಗವರಿಯೆ,
ಜಗವ ಬೆಳಗಲು ಬಂದ ಆ ದಿವ್ಯ ಭವಿಯೆ'
ಬಾ ! ಬೇಗ ಬಾ, ನಿನ್ನ ಬರುವನ್ನೆ ನೋಡುತ್ತ
ತರಹರಿಸುತಿಹೆನಿಲ್ಲಿ, ತಳುವದಿರೆಯೆ ಬಾ,
ನಿನ್ನ ಬರುವೇ ಎನ್ನ ಜೀವನದ ಬರವು,
ನಿನ್ನ ಬರವೇ ಎನ್ನ ಜೀವನದ ಜೀವನವು,
ನೀ ಒಂದೆ ಎಳೆದೆನ್ನ ಮನಕೆ ಸೊಗವೇರುವದು,
ನಿನ್ನ ನೋಡಿದೊಡೆನ್ನ ಎದೆಯುಬ್ಬಿ ಹೋಗುವುದು,
ಎನ್ನ ಜೀವನ ವನದಿ ಕುಸಿಲಿಡುವ ಕೋಗಿಲೆಯೆ'
ಎನ್ನ ಮಾನಸ ಹಂಸೆ, ಎನ್ನ ಸರ್ವಸ್ವ
ಎನ್ನಂತರಂಗವನು ಬೆಳಗಿಸಲು ಬಾ, ಪ್ರಭೆಯೆ'
ಓ! ಪ್ರಭೆಯೆ, ಬಾ, ಪ್ರಭೆಯೆ ! ಆಚಾರ್ಯ ಪ್ರಭೆಯೆ ॥

ಕಾಳಕತ್ತಲೆಯಲ್ಲಿ ಜಗವಂದು ಮುಳುಗಿರಲು
ಅರಿದವರ ಕಣ್ಮುಗಿಲುಮಂಥತ್ವ ವಡಿದಿರಲು
ಗೂಗೆಗಳ ಸಾಮ್ರಾಜ್ಯವೆಲ್ಲೆಲ್ಲಿ ನೆಲಸಿರಲು
ಸತ್ಯಧರ್ಮಗಳಂತು ನಾಮ ಮಾತ್ರವೊಸರಿರಲು
ಆಚಾರ್ಯ ಜಯಕಾರವಡಗಿಹೋಗಿರಲು
ಎಲ್ಲೆಲ್ಲಿಯುಂ ಛಿನ್ನತರಾಜಾಂತಿ ಮುಸುಗಿರಲು
ಗುರುತಿತ್ಯರೆಂಬುಭಯ ಜಕ್ಷತೆಕ್ಕಿಗಳಂದು
ಆಗಲಿ ಬಳಲುತಲಿರಲು ಮುರನೆಸ್ಯೆಯೊದಗಿರಲು
ದೈವ ಪ್ರೇರಣೆಯಿಂದ ಧರೆಯ ಪೊರೆಯಲು ಬಂದ
ಶ್ರೀ ಜಗದ್ಗುರು ಸಿದ್ಧಲಿಂಗ ಕರುಣಾರುಣನ
ಉದಯವಾಗಲು, ಗುರುಗಳೈವರಂತೆ ರೂಪು-
ನೆತ್ತ ಶಾಶ್ವತಾಶ ಬುಧವಿಯು, ಮೈಸೂರು
ಉದಯಗಿರಿಯಲಿ ಮೂಡಿ ನೀ ಬಂದೆ ಪ್ರಭೆಯೆ!
ಓ! ಪ್ರಭೆಯೆ, ಬಾ, ಪ್ರಭೆಯೆ! ಎನ್ನ ಶ್ರೇಯದ
ಪ್ರಭೆಯೆ ॥

ನೀ ಬಂದ ಜಾಡಲ್ಲೆ ಜಗವು ಜಾಗೃತವಾಯ್ತು!
ಗೂಗೆಗಳ ಭೂತ್ಕಾರವೆಲ್ಲೆಯೋ ಲಯವಾಯ್ತು
ನಿಜತತ್ವವನ್ನುಗಳ ಜಯ ಕಾಣುವಂತಾಯ್ತು
ಶ್ರುತಿಧರ್ಮವದು ಮತ್ತೆ ಚಿರಪ್ರತಿಷ್ಠಿತಮಾಯ್ತು
ಸಮಜಾಪವನೆ ಮೂಡಿ ನಿಜಕಾಂತಿ ನೆಲಸಿತು
ವೀರಶೈವರ ಧರ್ಮವೆಲ್ಲೆಲ್ಲಿಯುಂ ಬೆಳಗಿತು
ವೀರಸಂದಿಧ್ವಜವು ಬಾಂಡಳಮೊಗಾಡಿತು
ಗುರುಕುಲದ ಮುಖಕಮಲಗಳು ಅರಳಿ ಮೆರೆದವು
ಗುರುಭಕ್ತ ಸಿಂಹಗಳು ಎದ್ದು ಆರ್ಭಟಿಸಿದವು
ಗುರುತತ್ತ್ವವೇತ್ರೃಗಳ ನುಡಿಗಡಣ ವಾದ್ಯಗಳು
ಮೊಳಗಿ ಮಂಗಲ ಸಮಯವನು ಸೂಚಿಸಿದವು
ಆಚಾರ್ಯ ಜಯಕಾರವಾಗಸವ ನಡರಿತು
ಗುರುಕುಲೋದ್ಯಾನವದಲಿ ತನುಸಿ ಹೂಗಳು ಅರಳಿ
ಕೀರ್ತಿಗಂಧವು ಹರಿದಿ ಘ್ರಾಣತರ್ಪಣವಾಯ್ತು
ಎಲ್ಲೆಲ್ಲಿಯುಂ ತಾನೆ ಸೊಗಸೆ ಸೊಗಸಾಯ್ತು
ಇದು ನೋಡು ಎಲೆ, ಪ್ರಭೆಯೆ, ನೀಂ ಗೈದ ಕಜ್ಜ
ಆಲ್ಲವ್ಲ, ಇನಿತಲ್ಲ ಇನ್ನೆನಿತೊ ಇಹುದು
ಅದನೆಲ್ಲ ಒನ್ನೆಸುವ ಕಕ್ತಿ ಎನಗಿಲ್ಲ
ನೀಂ ಗೈವ ಗುರುಕಾರ್ಯರಂಗದಾ ಬಣ್ಣನೆಯ
ಮಾಡುವಾ ಒಲುಹುಳ್ಳ ಕವಿಯೊಬ್ಬ ನೂ ಇಲ್ಲ
ಕವಿಯ ಮಾತಿನ ತತಿಗೆ ಮೀರಿಹುದು ನಿನ್ನ ಗುಣ
ನೀನಾದರೇನಂತೆ ಯೋಗಿಗಳಿಗೇ ವೇದ್ಯ
ಓ ! ಪ್ರಭೆಯೆ, ಬಾ, ಪ್ರಭೆಯೆ ! ಎನ್ನಾತ್ಮ ಪ್ರಭೆಯೆ ॥

ಎನ್ನ ಜೀವನಕಾಂತಿ ಜ್ಞಾನಜ್ಯೋತಿಯ ಬೆಳಗೆ
ವೀರಶೈವರ ಪುಣ್ಯಧಾತಿಯೇ ತೇಜವೇ
ಅವ ವಿಶೇಷಣಗಳ ನಿನಗೆ ಪ್ರಭೆಯೆ, ಈಯಲಿ ಪೇಳು?
ಎನ್ನೆದೆಯೊಳಹ ಅವ ನಾಡಿಯನು ನಾ ತುಡಿಕೆ
ನಿನ್ನೊ ಳರುವಾದರವ ಹೊರಪಡಿಸಲಿ ಪೇಳು?
ಓ ! ಪ್ರಭೆಯೆ, ಬಾ, ಪ್ರಭೆಯೆ ! ಆಚಾರ್ಯ ಪ್ರಭೆಯೆ ॥

ಎಂದಿಗುಂ ಬರುತಲಿರು ನಮ್ಮೆದೆಗೆ ಪ್ರಭೆಯೆ!
ಜಗವಮರಿ ಬೆಳಗಿಸಲಿ ಬೆಳಗಿ ನೀಂ ಪ್ರಭೆಯೆ,
ಎಂದೆಂದಿಗುಂ ಬೆಳಗು ಬೆಳಗು ಪ್ರಭೆಯೆ,
ಗುರುಕುಲದ ಜ್ಯೋತಿಗಳು ಧರ್ಮಾವತಾರಿಗಳು
ವೀರಶೈವಿಷ್ಠಿಕ ಬ್ರಹ್ಮಚಾರಿಗಳುಮಾದ
ನೆಮ್ಮ ಶಾಶ್ವತಾಶ ಪಂಡಿತರು ಚಿರಕಾಲ
ಬಾಳಿ ಒದುಕಲಿ ! ಪ್ರಭೆಯು ಬಿತ್ತರಿಸುತಲೆ ಇರಲಿ !
ಅವಾಗಳುಂ ಪ್ರಭೆಯು ಬೆಳಗುತಿರಲಿ !
ಜನರು ನಿಜತತ್ತ್ವವನು ಕಾಣುತಿರಲಿ !
ಎನ್ನ ಈ ಬಾಸ್ಕೆಗೆ ಸತ್ಯವಾಗಲಿ ! ಗುರುವೆ, ಓಂ!!!

ಶ್ರೀ ಜಗದ್ಗುರು ಪಂಚಾಚಾರ್ಯ ಪಾದಾಳಿತ
ಗುರುಕುಲ, ಶಾಸ್ತ್ರೋಕ್ತ ರೀತಿಯಲಿ ನಡೆಯುತ್ತಿರುವ ಸಂಸ್ಕೃತ ಪಾಠಶಾಲೆಯ ಅಧ್ಯಾಪಕರು.

ನೆಲಗಡಲೆ ರಫ್ತಿಗೆ ಪ್ರತಿಬಂಧಕ

ಮೈಸೂರು ಜಿಲ್ಲೆಯಲ್ಲಿ ಕಡಲೆ, ಉದ್ದು ಮತ್ತು ಹೆಸರುಕಾಳು ವರ್ತಕರಲ್ಲಿ ಎಷ್ಟಿದೆ ಎಂಬುದಕ್ಕೆ ಲೆಕ್ಕ ಕೊಡಬೇಕೆಂದೂ, ನೆಲಗಡಲೆ ಬೀಜವನ್ನು ಜಿಲ್ಲೆಯಿಂದ ಯಾರೂ ಹೊರಗೆ ಸಾಗಿಸಕೂಡದೆಂದೂ ಮೈಸೂರು ಜಿಲ್ಲಾಧಿಕಾರಿಗಳು ಡಿಫೆನ್ಸ್ ಕಾನೂನಿನಂತೆ ಆಜ್ಞೆಯನ್ನು ಹೊರಡಿಸಿರುವರು

ಆಹಾರ ಧಾನ್ಯಗಳ ಡಿಪೋ

ರಾಜಧಾನಿಯಲ್ಲಿ ಕಡಲೆಬೇಳೆ, ಕಡಲೆಹಿಟ್ಟು ಮತ್ತು ಹಸಿ ಕಡಲೆಯ ಅಭಾವವನ್ನು ನಿವಾರಿಸಲು ಮೈಸೂರಿನ ಆಹಾರ ಧಾನ್ಯಗಳ ಒಟ್ಟು ವ್ಯಾಪಾರಿಗಳ ಸಂಘದವರು ಜಗನ್ಮೋಹನ್ ಬಂಗಲೆ ರಸ್ತೆಯಲ್ಲಿ ಒಂದು ನೂತನ ಡಿಪೋವನ್ನು ತೆರೆದರು ಈ ಸಮಾರಂಭಕ್ಕೆ ಜಿಲ್ಲಾಧಿಕಾರಿಗಳಾದ ಶ್ರೀ ಸಿ ಎಂ ಹೆಜ್ ರಣಜೋಧಸಿಂಗ್ ರವರು ಅಗ್ರಾಸನವನ್ನು ವಹಿಸಿದ್ದರು ಸಂಘದ ಪರವಾಗಿ ಶ್ರೀ ಎಲ್ ಶ್ರೀನಿವಾಸರಾಯರು ಸ್ವಾಗತ ಭಾಷಣ ಮಾಡಿ, ರಾಜಧಾನಿಯಲ್ಲಿ ಮೇಲ್ಕಂಡ ಆಹಾರ ಧಾನ್ಯ ಜನಗಳಿಗೆ ಸಿಕ್ಕುವ ಕಷ್ಟವನ್ನು ಪರಿಹರಿಸುತ್ತಿರುವುದನ್ನು ನಿವಾರಿಸಲು ಈ ಡಿಪೋದಲ್ಲಿ ಸಮರ್ಪಕವಾದ ವ್ಯವಸ್ಥೆ ಮಾಡಲಾಗಿದೆಯೆಂದೂ, ಈಗ ಲಾಭ ಮೂಟೆಗಳಷ್ಟು ಕಾಳನ್ನು ಶೇಖರಿಸಲಾಗಿದೆಯೆಂದೂ, ಸರ್ಕಾರದವರು ಇದಕ್ಕೆ ಹೆಚ್ಚು ಕೋಟಾ ಕೊಡಬೇಕೆಂದೂ ಕೋರಿದರು ಪೌರ ಸಭಾಧ್ಯಕ್ಷರಾದ ಶ್ರೀ ಆರ್ ರಾಮಚಂದ್ರರಾವ್ ಬಾಂಧೋದಯವರು ಭಾಷಣಮಾಡಿ ಸಂಘದವರನ್ನು ಪ್ರಶಂಸಿಸಿದರು. ಜಿಲ್ಲಾಧಿಕಾರಿಗಳು ಸಂಘದ ಕಾರ್ಯವನ್ನು ಪ್ರಶಂಸಿಸಿ ಅವಶ್ಯ ಸಹಾಯ ಮಾಡುವುದಾಗಿ ಭರವಸೆ ಕೊಟ್ಟರು

ಸ್ವೀಕಾರ

ಹುಬ್ಬಳ್ಳಿ ನೆಗರವಲ್ಲಿರುವ ವೇ॥ ಪಿ ವಿ ಹಿರೇಮಠ ವಕೀಲ ಇವರ ಜ್ಯೇಷ್ಠ ಸಹೋದರರಿ ಶ್ರೀಮತಿ ಗಂಗಮ್ಮ ಧರ್ಮಾರ ತೆಟ್ಟಿಪ್ಪಯ್ಯ ಗುಬ್ಬಿಸ್ವಾಮಿಮಠ ಇವರ ಪುತ್ರಿ ಚಿ॥ ಸೌ॥ ಶಮಲಾಕ್ಷಿಯಮ್ಮನ ಗದಗಿಟ್ಟಿಗೇರಿ ಗ್ರಾಮದ ಹಿರಿಯ ಮಠದ ವೇ॥ ಹುಳ್ಳಯ್ಯನವರ ಪುತ್ರ ಚಿ॥ ಜಪ್ಪಯ್ಯನಿಗೆ ಕೊಟ್ಟು ಚಿ॥ 31-12-45 ನೆಯ ದಿವಸ ನಿಶ್ಚಯಮಾಡಿದ ಸಮಯದಲ್ಲಿ ಪ್ರಭಾಪೋಷಣಾ ಕ್ಯೋತ್ಸವರ ವವಸ ಕಡೆಯಿಂದ ಸಮರ್ಪಿಸಿದ 2-8-0 ವಧುವಿನ ಕಡೆಯಿಂದ ಸಮರ್ಪಿಸಿದ 1-4-0 ಒಟ್ಟು 3-12-0 ರೂ. ಗಳು ವೇ॥ ಜಿ. ಸಿ. ಹಿರೇಮಠ ಬಿ. ಎ, ಎಲ್ ಎಲ್ ಬಿ, ವಕೀಲ ಇವರ ವ್ಯಾಜ ತಲ್ಲಿರುತ್ತವೆ

ಈ ಮೇಲ್ಕಂಡ ಮಹಾತಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಜರ್ಮನಿಯ ಪರಾಜಯವೂ ಭಾರತೀಯ ನೌಕಾ ಬಲವೂ

ಆಫ್ರಿಕಾ ಖಂಡದಲ್ಲೂ ಆಟ್ಲಾಂಟಿಕ್ ಮಹಾ ಸಾಗರದಲ್ಲೂ ಮತ್ತು ಮೆಡಿಟರೇನಿಯ ಸಮುದ್ರದಲ್ಲೂ "ರಾಯಲ್ ಇಂಡಿಯ ನೌಕಾ ಪಡೆ" ಯವರು ಸಾಹಸ ಕಾರ್ಯಗಳನ್ನಿ ಸಿ ಪ್ರಬ್ಧಮಾರ್ಧಗೋಳದಲ್ಲಿ ಮಿತ್ರ ಪಕ್ಷದವರಿಗೆ ಜಯವನ್ನು ಗಳಿಸಿಕೊಡುವುದಕ್ಕೆ ಬಹುಮಟ್ಟಿಗೆ ಸಹಾಯಕರಾದರು

ಈ ನೌಕಾ ಪಡೆಯವರ ಸಾಹಸದಿಂದ ಮೆಡಿಟರೇನಿಯ ಸಮುದ್ರದಲ್ಲೂ, ಪಾರ್ಸೀ ಕೊಲ್ಲಿಯಲ್ಲೂ ಅತ್ಲಾಂಟಿಕ್ ಮಹಾ ಸಮುದ್ರದಲ್ಲೂ ಅನೇಕ ಸಲ ಆಟ್ಲಾಂಟಿಕ್ ಸಮುದ್ರದಲ್ಲಿ ಯುದ್ಧ ನಡೆದ ಸಂದರ್ಭಗಳಲ್ಲಿ ಈ ನೌಕಾ ಪಡೆಯವರು 'ಕಾಸ್ಯಾಯ್' ಗಳನ್ನು ಸಾಗಿಸುವ ಕೆಲಸದಲ್ಲೂ ಮತ್ತು "ಯು' ಬೋಟ್‌ಗಳೂಡನೆ ಸಹಕರಿಸಿ ಕೆಲಸ ಮಾಡುವುದರಲ್ಲೂ ಒಳ್ಳೆ ಪ್ರಾಮುಖ್ಯವಾದ ಪಾತ್ರವನ್ನು ವಹಿಸಿದ್ದರು

1941 ರಲ್ಲಿ ರೆಡ್‌ಸೀ, ಗಲ್ಫ್ ಆಫ್ ಏಡೆನ್ ಮತ್ತು ಪರ್ಷಿಯ ಗಲ್ಫ್, ಈ ಸ್ಥಳಗಳಲ್ಲಿ ಸೇನೆ ಸಲ್ಲಿಸುವುದ ಕ್ಕಾಗಿ ಈ ನೌಕಾ ಪಡೆಗೆ ಸೇರಿದ ಪಡೆಗಳನ್ನು ಈ ಇಂಡಿಯನ ನೌಕಾ ಸೈನ್ಯದಿಂದಿಗೆ ಸೇರಿಸಿಕೊಳ್ಳಿರ ಲಾಯಿತು ಫ್ರಾನ್ಸ್ ಪತನವಾದ ನಂತರ ಪರಿಸ್ಥಿತಿ ಬೇಕಾಗಿದ್ದಿತು ಆಗ ಬ್ರಿಟಿಷರ ಸೈನ್ಯಗಳು ಸ್ವಲ್ಪ ಕಾಲ ಬ್ರಿಟಿಷ್ ಸೋಮಾಲಿ ಲ್ಯಾಂಡ್‌ನಿಂದ ಹೊರಬಿದು ತೋಗಬೇಕಾಯಿತು ಆಗ ಹಾಗೆ ಹೊರಬಿದ್ದುಗು ತ್ತಿದ್ದ ಸೈನ್ಯಗಳ ರಕ್ಷಣೆಯನ್ನಿ ಪರತಬಂಡದ ನೌಕಾ ಸೈನ್ಯವು ಬ್ರಿಟಿಷ್ರಿನ ನೌಕಾ ಸೈನ್ಯದೊಡನೆ ಸಹಕರಿಸಿತು ಅವೇ ರೀತಿ 1941 ರಲ್ಲಿ ಫುನ ಆ ಕಾರ್ಯಾನಿಯಲ್ಲಿ ಬ್ರಿಟಿಷರು ಕೆಲಸವನ್ನುದಕ್ಷೆ ಹೋದಾಗಲಾ ಸಹ ಈ ಎರಡು ನೌಕಾ ಸೈನ್ಯಗಳೂ ಸಹಕರಿಸಿ ಕೆಲಸ ಮಾಡಿ ಮುವು ಹೆಂದಲು ಸೈನ್ಯಗಳನ್ನು ತೀರಸ್ಥ ಪ್ರದೇಶಕ್ಕೆ ಕರೆದು ಕೊಂಡುಬ್ಬೋಗಿ ಬಿಟ್ಟು ಅಂತರ ಒರ್ಜಿಂದ ಪಕ್ಷದ ಸೈಗಳಲ್ಲಿ ಕಾವಲು ನಡೆಸುತ್ತಾ ನಿರ ಗಿಗೂ ಸಜಾಯ ದಿಂದ ಇಂಡಿಯನ್ ಸೈನ್ಯಗಳನ್ನು ತಿಂಬಿಸಿಕೊಳ್ಳಿಗಾ ಡಿಬಿಸುವು ಈ ಸಂದರ್ಭದಲ್ಲಿ ಈ ಸೈನ್ಯಗಳನ್ನು ಶತ್ರುಗಳು ಪ್ರತಿಬಂಧಿಸಲೇ ಇಲ್ಲ

ಎಲ್ಲಿಯಾ ದೇಶಾಂತಕ್ಕೆ ಮಿತ್ರಪಕ್ಷದ ಸೈನ್ಯ ಗಳು ಸ್ಥಿಗಾಗಿಂ ದ ತಕ್ಷಣವೆ ಅಲ್ಲಿಂದ ಈ ನೌಕಾ ಸೈನ್ಯಗಳು ಸಮಾಯ ನಾಮಾವ ಸಕ್ಕೆ ಸಾಗಿಸುವುದು 'ಎಸ್ಕಾರ್ಟ್'ಗಳನ್ನು ತಗೆಯು ವುದು, ಈ ಕೆಲಗಳಿಲ್ಲಿ ಈ ನೌಕಾ ಸೈನ್ಯಗಳಿಂದ ಅವೆ ಸಮಯ ಅನೇಕವೆಸಾದುದು ಎಲ್ಲ ಎಸ್ಕಾ ರ್ಟ್ ಎಸ್ ರಕ್ಷಿಗಿರಿ ಎಂಬ ನೌಕೆಯ ಸೈನ್ಯಗಳು "ಮೆಸ್ಸಾಜ್ಕಾಯ್" ಎಂಬ್ಲಿ ದಾಖ ಪಡೆಯಾಗಿ ಸತಾಯ ಮಾಡಿತು ಕೊನೆಗೆ ಮೆಸ್ಸಾನಾ ಎಂಬ ಪ್ರದೇಶದ ಮೇಲೇರಿ ಹೋದಾಗ ಭಾರತೀಯ ನೌಕಾ ಸೈನ್ಯಕ್ಕೆ ಸೇರಿದ "ಹಿಂದುಸ್ಥಾನ್", "ಇಂಡಸ್", "ಪಾರ್ಸಿ" ಈ ನೌಕೆಗಳು ಕ್ಲಾಫಿಸೀಯನಾದ ಕೆಲಸ ಮಾಡಿದುವು ಇಟಲಿಯ ನೌಕಾ ನಿಲ್ದಾಣವನ್ನು ಹಿಡಿಯುವುದಕ್ಕಾಗಿ ಬಂದಾಗ ಸಮುದ್ರದಲ್ಲಿ ಬ್ಲಾ "ಮೈನು" ಗಳನ್ನು ಶತ್ರುಗಳು ತುಂಬಿದ್ದುದು ಕಂಡು ಬಂದಿತು ಆಗ ಭಾರತೀಯ ನೌಕಾ ಸೈನ್ಯದವರು ಅವುಗಳನ್ನೆಲ್ಲಾ ತೆಗೆದು ನೌಕಾ ನಿಲ್ದಾಣದವರೆಗೂ ಅಪಾಯ ಸಂಭವಿಸದಂತೆ ಏರ್ಪಡಿಸಿದರು. ಈ ನೌಕಾ ಸೈನ್ಯದ ಒಂದು ನೌಕೆಯು ಈ ಕೆಲಸ ಮಾಡುತ್ತಿದ್ದಾಗಲಂತೂ ಬಹಳ ಅಪಾಯಕ್ಕೆ ಗುರಿಯಾಗುವ ಸಂಭವವಿದ್ದಿತು. ಆದರೆ ಅದೃಷ್ಟವಶಾತ್ ಏನೊಂದು ಅಪಾಯವೂ ಸಂಭವಿಸಲಿಲ್ಲ. "ಮೈನ್" ಗಳನ್ನೆಲ್ಲಾ ತೆಗೆದುಹಾಕಿದ ಮೇಲೆ "ಹಿಂದುಸ್ಥಾನ್" ಎಂಬ ಹಡಗನ್ನು ಮುಂದಿಟ್ಟುಕೊಂಡು ಒಟ್ಟು ನೌಕಾ ಸೈನ್ಯವೆಲ್ಲಾ ನಿಲ್ದಾಣವನ್ನು ಸೇರಿತು ಶತ್ರುಗಳನ್ನು "ಅಸ್ಸಾಲ್ಟ್" ಎಂಬಲ್ಲಿಂದ ಹೊರಬಿಸುವ ಕೆಲಸದಲ್ಲಿ "ರಕ್ಷಗಿರಿ" ಎಂಬ ನೌಕೆಯೇ ಮುಖ್ಯ ಪಾತ್ರವಹಿಸಿದ್ದಿತು. ಇತರ ಹಡಗುಳಲ್ಲಿಂದ ಇಟಾಲಿಯ ಸೈನ್ಯದ ಹಿಡಿತವನ್ನು ತಪ್ಪಿಸುವುದರಲ್ಲಿ ಇತರ ನೌಕೆಗಳೂ ಸಹಕರಿಸಿದುವು ಈರೀತಿ ಆಫ್ರಿಕಾದ ಈಶಾನ್ಯ ಭಾಗದಲ್ಲಿ "ಫಾಸಿಸ್ಟ್ ದಳಗಳ ರಕ್ತವನ್ನು ಕುಗ್ಗಿಸಿ ತನ್ನೂ ಲಕ ಇಟಲಿಯನ್ನು ಸೋಲಿಸುವುದರಲ್ಲಿ ಭಾರತೀಯ ನೌಕಾ ಸೈನ್ಯ ಎಷ್ಟು ಕೆಲಸ ಮಾಡಿತು

ನಾಜಿಗಳು ಇರ್ಾ ವೇರಿಂದ ನಡೆಸಿದ ಕುತೆಂತ್ರ ದಿಂದ 1941 ನೆಯು ಇಸವಿ ಆಗುವಷ್ಟರಲ್ಲಿ ಬ್ರಿಟಿಷರು "ಪರ್ಷಿಯಾ ಗಲ್ಫ್ ಕೊಲ್ಲಿಯಲ್ಲಿ ತಮ್ಮ ಪ್ರಭಾವ ವನ್ನು ಹೆಚ್ಚಿಸಿಕೊಳ್ಳಬೇಕಾಯಿತು ಈ ಕೆಲಸದಲ್ಲಿ ಬ್ರಿಟಿಷ್, ಭಾರತೀಯ ಮತ್ತು ಆಸ್ಟ್ರೇಲಿಯ ನೌಕೆಗಳು "ಆಬರ್ಡಾ" ನಲ್ಲಿ "ಒಂಬತ್ತಾ ಸುರ್" ಎಂಬ ಬ್ಲಿಗಿ ಸೈನ್ಯಗಳನ್ನು ತೆಗೆದುಕೊಂಡು ಹೋದುವು ಆಫ್ಘನ್ ರಾಷ್ಟ್ರಗಳಿಗೆ ಸೇರಿದ ಏನು ಮ್ಯಾನಾದ ನೌಕೆ ಗಳನ್ನು ಮಿತ್ರ ನೌಕೆಗಳು ಸಂರಕ್ಷಿಸಿದುವು ಈ ಸಾಹಸ ಕ್ಕಾಗಿ ಭಾರತೀಯ ನೌಕಾ ಸೈನ್ಯದ ಇಬ್ಬರು ಅಧಿಕಾರಿಗಳಿಗೆ ಡಿ ಎಸ್ ಸಿ ಪ್ರಶಸ್ತಿಯೂ ಮತ್ತು ಮೂವರಿಗೆ ಡಿ ಎಸ್ ಎಂ ಪ್ರಶಸ್ತಿಯೂ ದೊರೆತುವು

ನೀಲಿ ಕಂಡ ಪಟಿನಿಗಳು ನಡೆಯುವವರೆಗೆ ಭಾರತೀಯ ನೌಕಾ ಸೈನ್ಯದ ಎರಡೇ ಎರಡು ನೌಕೆಗಳು ಮಾತ್ರ ನಾಶವಾದುವು ಇದನ್ನೂ ಅಪ್ಪು ಹೊಡ್ಡ ನೆನ್ನವಲ್ಲ ಅಲ್ಲದೆ ಆ ನೌಕೆಗಳಲ್ಲದ್ದ ನಾವಿಕರೆಲ್ಲರನ್ನೂ ಸಂರಕ್ಷಿಸಲಾಯಿತು.

ಭಾರತೀಯ ನೌಕಾ ಸೈನ್ಯಕ್ಕೆ ಸೇರಿದ 'ಜಮುನಾ' ಮತ್ತು "ಸಟ್ಲೆಜ್" ಎಂಬ ಪಡಗುಗಳನ್ನು 1911ರಿಂದ ಎಜ್ಜಾಂಟಿಕ್ ಸಾಗರಕ್ಕೆ ಕಳುಹಿಸಲಾಯಿತು ಅಲ್ಲಿ ಅವು ನಡೆಸಿದ ಕೆಲಸದಲ್ಲಿ ಈ ನೌಕೆಗಳಿಗೆ ದೊರೆತ ಅನು ಭವವು ನಮಗಂತೂ ದೂರವೆ ಹಡಲ್ಲಿ ಬಹಳ ಸಹಕಾರಿ ಯಾಯಿತೆ ಸಮೂನ ಸಾಗಿಸುವ ಕೆಲಸದಲ್ಲಿ ಬೇರೆ ನೌಕೆಗಳು ಬಹಳ ಕೆಲಸ ನಡೆಸಿ ಸಿದುವು "ಕುಮಾಯೂನ್" ಮತ್ತು "ಚಾಮಿಂಡಾ" ನೌಕೆಗಳ ಅನು ಭವಗಳು ಸ್ವಾರಸ್ಯಕರವಾದವು ಇವು ಸ್ವಲ್ಪಕಾಲ ಸ್ವತ್ಪೆಂತಿಂದ ಪಕ್ಕದಲ್ಲಿ ಕಾವಲು ನೋಡಿದ್ದುವು. ಒಂದಕ ಸ್ವಲ್ಪಕಾಲ ಜಿಬ್ರಾಲ್ಟರ್‌ವರೆಗೂ ಸಹ ಕೆಲಸ ಮಾಡಿದುವು ಅನಂತರ ಎಜ್ಜರ ಆಫ್ರಿಕಾದಲ್ಲಿ ಜರ್ಮನರ ರನ್ನು ಸೋಲಿಸುವ ಸಾಹಸದಲ್ಲಿ ಸಹಾಯವಾಗಿ, ಕಡೆಗೆ ಬರತಖಂಡಕ್ಕೆ ಸೈನ್ಯಗ ಸ್ಥ ಸಾಗಿಸುವ ಕೆಲಸವನ್ನು ನಾಡಿಸಿದುವು 'ಕುಮಾಯೂನ್' ನೌಕೆಯು ಒಂದು ಸಹಮೇರಿ" ನನ್ನು ಸುಲಗಿಸಿತೆಂದು ಪರಿಯಾಣ ಆಯಿತು.

ಎಟ್ಟಿನಲು ಸೈನ್ಯವು ಸಿಸಿಲಿಗೆ ಬಂದಾಗ ಅದಕ್ಕೆ ಸಮಯಕ್ಕಾಗಿಯೂ ರಕ್ಷಣೆಕಾಗಿಯೂ ಭಾರತೀಯ ನೌಕೆಗಳು ಕೆಲಸ ಮಾಡಿದುವು (1) 'ಡ್ಡೇ' ದಿನೋ ತ್ಸವದಲ್ಲೂ ಅವು ಬಾಗವಹಿಸಿ ಶತ್ರುಗಳಿಂದ ಮಿತ್ರಪಕ್ಷ ದವರಿಗೆ ತೊಂದರೆಯಾಗದಂತೆ ಕಾವಲು ಕಾದುವು ಎಟ್ಟಿಶರ ಸಾಮಾನು ಸರಂಜಾಮುಗಳನ್ನು ಸಾಗಿಸುವ ಕೆಲಸದಲ್ಲಿ ಶ್ರಮಿಸಿದುವು ಒಂದು ನೌಕೆಯಂತೂ, ಕೆಲವು ಗಜಗಿಗು ವಿನಸ್ಸು ಒಟ್ಟು ಐ ದಿನಗಳ ಕಾಲ ಸಮುದ್ರದಲ್ಲೇ ಇದ್ದಿತು ಆ ಕಾಲದಲ್ಲಿ ಅದು ಎರಡು ಸಲ ಮೆಡಿಟರೇನಿಯ್ ಸಾಗರವನ್ನು ಸುತ್ತಿ ಆಟ್ಲಾಂ ಟಿಕ್ ಸಾಗರಕ್ಕೂ ಹೋಗಿ, ಫುನಃ ಲೇವಾರ್ ಪ್ರದೇ ಶದ ಒಂದು ಒಂದಿಗೆ ಬಂದಿತು ಹೀಗೆ ಅದು ಪ್ರಯಾಣ ಮಾಡಿದ ಒಟ್ಟು ದೂರ ಭೂಪ್ರದಕ್ಷಿಣೆಯ ಮೂರನೆಯ ಒಂದರಷ್ಟು ದೂರವಾಗುತ್ತದೆ. "ಅಗಸ್ಟು" ಬಂದಿನ ದಿಲ್ಲಾಗ್ಗೆ ಈ ನೌಕೆಯು ಶತ್ರುಗಳಿಂದಾಗುತ್ತಿದ್ದ ಒಂದು ಅನಾಹುತವನ್ನು ತಪ್ಪಿಸಿತು.

"ಗ್ಲೈಡರ್" ಜಾಂಬುಗಳಿಂದಾಗುತ್ತಿದ್ದ ಅನಾ ಹುತಕ್ಕೆ ಗುರಿಯಾಗಿದ್ದ ವಿಮಾನ ಸೈನ್ಯಗಳನ್ನು ಸಾಗಿಸು ತ್ತಿದ್ದ ಹಡಗುಗಳನ್ನು ರಕ್ಷಿಸಿದ ಕೀರ್ತಿ "ಕೃಷ್ಣಾ" ಎಂಬ ನೌಕೆಗೆ ಸಲ್ಲುತ್ತದೆ. ಅದೇ ವಿಮಾನ ಸೈನ್ಯಗಳನ್ನು ಸಾಗಿಸುವ ಹಡಗುಗಳ್ " ಯು " ಬೋಟ್‌ಗಳಿಂದ ತೊಂದರೆ ಯಾದಾಗಲೂ "ಕೃಷ್ಣಾ" ನೌಕೆಯೇ ರಕ್ಷಣೆ ತೊಟ್ಟು ಒಂದು " ಯು " ಬೋಟನ್ನು ಪ್ರಾಯಶಃ ಸ್ವಲ್ಪ ಭಾಗ ಪಡಿಸಿತು ಇನ್ನೊಂದು ಪ್ರಸಿದ್ಧ ಹಡಗು "ಗೋದಾವರಿ" ಎಂಬುದು ಇದು ಶತ್ರುಗಳ " ಯು " ಬೋಟ್ ಗಳನ್ನು ಬಹಳ ಸಾಹಸಪಡಿಸಿತು. ಒಮ್ಮೆ ಈ ಹಡಗೂ ಮತ್ತು ಇಂಥ ಕೆಲವು ಹಡಗುಗಳೂ ಸೇರಿ ಸಾಲ್ಕು " ಯು " ಬೋಟ್‌ಗಳನ್ನು ಮುಳುಗಿಸಿದವು. ಈ ಹಡಗು ಬ್ರಿಟನ್ನಿನ ಸಕ್ಷದಲ್ಲಿದ್ದಾಗ ಚಕ್ರವರ್ತಿ ಸಾರ್ ಭೌಮರೇ ಇದಕ್ಕೆ ಭೇಟಿ ಕೊಟ್ಟರು. ಅವಂತರ ಇದು ಫುನಃ ಶತ್ರು ಬೇಟೆಗೆ ಹೊರಟಿತು.

ಈರೀತಿ ಭಾರತೀಯ ನೌಕಾ ಸೈನ್ಯವು ಶತ್ರುಗಳನ್ನು ಸೋಲಿಸುವ ಕೆಲಸದಲ್ಲಿ ಬಹಳ ಸಾಹಸ ಮಾಡಿದುವು. ಅಡ್ಮಿರಲ್ ರ್ಯಾಮ್ಸೇ ಅವರು ಭಾರತೀಯ ನೌಕಾ ಸೈನ್ಯವನ್ನು ಹೀಗೆಂದು ಶ್ಲಾಘಿಸಿದರು

"ಈ ಯುದ್ಧದಲ್ಲಿ ಭಾರತೀಯ ನೌಕಾ ಸೈನ್ಯವು ಬ್ರಿಟನ್ನಿನ ಮತ್ತು ಇತರ ದೇಶಗಳ ನೌಕಾ ಸೈನ್ಯಗಳ ಕೂಡನೆ ಕೆಲಸ ಮಾಡಿದೆ ಆ ನೌಕಾ ಸೈನ್ಯವು ಅಟ್ಲಾಂ ಟಿಕ್ ಯುದ್ಧದಲ್ಲೂ ಮತ್ತು ಭರತಖಂಡದ ಸುತ್ತಲೂ ಇರುವ ಸಾಗರಗಳಲ್ಲಿ ಕೆಲಸ ಮಾಡುವುದರಲ್ಲೂ ಭಾಗ ವಹಿಸಿದ ಭಾರತೀಯ ನೌಕಾ ಸೈನ್ಯವೆ ಯಾವ ಹಡಗೂ ನಾನು ಜರ್ಮನಿಗೆ ಸೇರಿದ್ದ ಪ್ರದೇಶದ ದಾಳಿ ಪಡೆಯ ವಾಗ ನನ್ನ ಕೈಕೆಳಗೆ ಕೆಲಸ ಮಾಡದಿದ್ದಾಗ್ಯೂ ನನ್ನ ಕೆಲಸಕ್ಕೆ ಆ ನೌಕಾ ಸೈನ್ಯದಿಂದ ಪರೋಕ್ಷವಾಗಿ ಸಹಾಯ ವಾಗಿದೆ. ಇದರಿಂದೆಲ್ಲಾ ಸ್ಪಷ್ಟವಾಗುವುದೇನೆಂದರೆ, ಶತ್ರುಗಳು ಭೂಯುದ್ಧಕ್ಕೆ ಎಷ್ಟೇ ಆಣೆಮಾಡಿಕೊಂ ಡಿರಲಿ, ಸಮುದ್ರ ಮಾರ್ಗಗಳ ಮೇಲೆ ಅವರಿಗೆ ಹತೋಟಿ ಯಿಲ್ಲದಿದ್ದರೆ ಸೋಲು ಖಂಡಿತ, ಮತ್ತು ಆ ಹತೋಟಿ ಯಿದ್ದರೆ ಗೆಲ್ಲುವುದೂ ಖಂಡಿತ."

ಮೈ ೧ ಬು.

ವರ್ತಮಾನ ಸಂಗ್ರಹ

ಅಧಿಕ ನಿಮಾನಗಳ ನಾಶ

೬೦ ಲಕ್ಷ ಪೌಂಡುಗಳ ಬೆಲೆಬಾಳುವ ೩೦೦ ನಿಮಾನ ಗಳನ್ನು ಜರ್ಮನಿಯು ಪೆಸಿಫಿಕ್ ಸಮುದ್ರದಲ್ಲಿ ನಾಶಪ ಡಿಸುವುದಂತೆ! ಅವುಗಳನ್ನು ಬ್ರಿಟನ್ನಿಂದ ತೆಗೆದುಕೊಳ್ಳ ಲಾಗಿತ್ತಂತೆ

ರೈಲ್ವೆ ಸ್ಟೇಷನ್ನಿನಲ್ಲಿ ಆಸ್ಫೋಟನೆ

ಪೂನಾ ರೈಲ್ವೆ ಸ್ಟೇಷನ್ನಿನಲ್ಲಿ ಆಸ್ಫೋಟನೆಯಾಗಿ ರೈಲ್ವೆ ವಾಚ್‌ಮನ್‌ನೊಬ್ಬನು ಸತ್ತುಹೋದನು ಮತ್ತು ಇಬ್ಬರಿಗೆ ತೀವ್ರ ಗಾಯಗಳಾದುವು ಪಾರ್ಸಲ್ ಆಫೀಸಿ ನಲ್ಲಿದ್ದ ಸ್ಯಾಟ್‌ಕೇಸ್ ಒಂದರಲ್ಲಿದ್ದ ಮೈಬು ಆಸ್ಫೋಟನೆಯಾಗಿ ಈ ದುರಂತ ಪ್ರಕರಣ ನಡೆಯಿತೆಂದು ತಿಳಿಬುರುತ್ತದೆ.

ಬಂಧನದಿಂದ ಪಾರಾದರೂ ಸಾವು ಮಾತ್ರ ತಪ್ಪಲಿಲ್ಲ

ಸಿಂಗಪುರದಿಂದ ಬ್ರಿಟಿಷ್ ಯೋಧ ಬಂದಿಗಳನ್ನು ಸಾರುಮಾಡಿಕೊಂಡು ಬರುತ್ತಿದ್ದ ಹಿಂದು ಆರ್ ಎ.ಎಫ್. ವಿಮಾನವು ಸುಸ್ಕೇಲ್ಸ್ ಬಳಿ ಉರುಳಿ ಬಿತ್ತು. ತಕ್ಷಣ ವಾಗಿ ೨೩ ಮಂದಿ ಮಡಿದರು ಮೂರು ಮಂದಿ ಅಪ್ಪತ್ರೆ ಯಲ್ಲಿದ್ದಾರೆ

ನರೇಂದ್ರರಿಗೆ ವೈಸರಾಯ್ ವೇವೆಲ್ಲರ ಉಪದೇಶ

"ನಿಮ್ಮ ಅಧಿಕೃತ ಪ್ರತಿನಿಧಿಗಳ ಮೂಲಕ ನೀವು ರಾಜ್ಯಾಂಗ ನಿರೂಪಣಾ ಸಮಿತಿಯಲ್ಲಿ ಪೂರ್ಣ ಪಾತ್ರ ನಿರ್ವಹಿಸಬೇಕು ಭಾರತವು ಜಾಗ್ರತಿ ಪೂರ್ಣರಾಷ್ಟ್ರಗಳಲ್ಲಿ ತಿಯನ್ನೈದುವುದರಲ್ಲಿ ನರೇಂದ್ರರು ಅಡ್ಡಿಯಾಗಿರಬಾ ರದು, ನರೇಂದ್ರರು ತಮ್ಮ ಪುಡಿಗಳ ರಾಜಕೀಯ ಸಾಮಾಜಿಕ ಅಧಿಕಾ ಪ್ರಗಳಿಗೆ ವಿರೋಧವಾಗಿ ವರ್ತಿಸ ಬಾರದು, ಸಣ್ಣ ಪುಟ್ಟ ಸಂಸ್ಥಾನಗಳು ನೆರೆಯ ಸಂಸ್ಥಾನ ಗಳೊಡನೆ ಮಿಳತನಾಗಬೇಕು; ಇಲ್ಲವೇ ತಮ್ಮದೇ ಆದ ಒಂದು ಸಂಯುಕ್ತ ವ್ಯವಸ್ಥೆಯನ್ನು ರೂಪಿಸಿಕೊಳ್ಳ ಬೇಕು. ಪೂರ್ವಕಾಲದಲ್ಲಿ ಸಮಸ್ತ ಬ್ರಿಟಿಷ್ ಸಾರ್ವಭೌಮ ನರೇಂದ್ರರಿಗೂ ಆಗಿರುವ ಶೋಚಕರಾಗುಳಲ್ಲಿ ತಿದ್ದು ಪಾಡಾಗಲು ಸಮ್ಮತಿಸಬೇಕು." ಹೀಗೆಂದು ವೈಸರಾಯರು ನರೇಂದ್ರ ಮಂಡಲದ ಅಧಿವೇಶನದಲ್ಲಿ ಮಾಡಿದ ಭಾಷಣ ದಲ್ಲಿ ತಿಳಿಸಿದರು.

ಹೊಸ ನೋಟುಗಳು

ರಿಜರ್ವ್ ಬ್ಯಾಂಕಿನವರು ೫೦, ೧೦೦ ಮತ್ತು ೬೫೦ ೂ ಗಳ ಹೊಸ ಕರೆನ್ಸಿ ನೋಟುಗಳನ್ನು ತೀಳ್ಗಡ ್ಯೇ ಚಲಾವಣೆಗೆ ತರಲಿದ್ದಾರಂತೆ.

ನೂರು ರೂಪಾಯಿ ನೋಟು ಚಲಾವಣೆಯಲ್ಲಿದೆ

ಸರಕಾರದವರು ೫೦೦, ೧೦೦೦, ೧೦,೦೦೦ ರೂಪಾಯಿ ಬೆಲೆಯ ಭಾರಿಯ ನೋಟುಗಳನ್ನು ಚಲಾವಣೆಯಿಂದ ತೆಗೆದಿದ್ದಾರೆಯೇ ಹೊರತು ೧೦೦ ರೂಪಾಯಿಯ ನೋಟುಗಳನ್ನು ತೆಗೆದಿಲ್ಲ. ಅವು ಚಲಾವಣೆಯಲ್ಲಿಯೇ ಇವೆ. ಹಳ್ಳಿಯವರು ಗಾಬರಿಗೊಂಡು ಕವುಗಳನ್ನು ಮುರಿಸಬೇಕಾಗಿಲ್ಲ. ಸುಳ್ಳಾಡಿ ಯಾರಾದರೂ ಹೆದರಿಸಿದರೂ ಹೆದರಬೇಕಾಗಿಲ್ಲ.

೫೦೦-೧೦೦೦-೧೦೦೦೦ ರೂಪಾಯಿ ನೋಟುಗಳ ಬಗ್ಗೆ ನೂತನ ಶಾಸನ

ಭಾರತದ ಎಲ್ಲ ಬ್ಯಾಂಕುಗಳು ತಮ್ಮಲ್ಲಿ ೫೦೦, ೧೦೦೦, ಮತ್ತು ೧೦,೦೦೦ ರೂಪಾಯಿನ ಬೆಲೆಯ ನೋಟುಗಳೆನ್ನು ಇನೆ ಎಂಬುದನ್ನು ಕೂಡಲೆ ಸರಕಾರಕ್ಕೆ ತಿಳಿಸಬೇಕು ಮತ್ತು ಜನವರಿ ೧೨ ತಾರೀಖಿನ ಮೇಲೆ ಈ ಬೆಲೆಯ ನೋಟುಗಳು ಚಲಾವಣೆಯಾಗುವದಿಲ್ಲ ನೆಂದು ಇಂಡಿಯಾ ಸರಕಾರದವರು ಪ್ರಸಿದ್ಧಮಾಡಿದ್ದಾರೆ ಜನಗಳಲ್ಲಿ ಇದ್ದ ನೋಟುಗಳನ್ನು ಅವರು ಸರ್ಕಾರದ ಟ್ರೆಜರಿಗೆ ಒಪ್ಪಿಸಬೇಕು ಒಟ್ಟಿನುವಾಗ ತಮ್ಮ ಹೆಸರು, ಕಸುಬು, ಕೊಡಕಲ್ಲ ವರವಾಸ ತೆರಿಗೆ ಈ ಮುಂತಾದ ವಿವರ ಕೊಡಬೇಕೆಂದು ಶಾಸನ ಹೊರಟಿದೆ. ಇಷ್ಟು ಭಾರಿ ಬೆಲೆಯ ನೋಟುಗಳನ್ನು ಕೆಲವರಿಷ್ಟುವರಿಂದ, ಕಳ್ಳತನದ ವ್ಯಾಪಾರ ನಡೆಸಿ ಗಳಿಸಿದ ಹಣ ಹೊರಕ್ಕೆ ತೆಗೆಸುವುದು ಸರಕಾರದ ಉದ್ದೇಶವೆಂದು ಹೇಳಲಾಗಿದೆ

ನೋಟುಗಳ ಬಗ್ಗೆ ಸರ್ಕಾರಿ ಪ್ರಕಟಣೆ

೫೦೦, ೧೦೦೦, ೧೦ ಸಾವಿರ ರೂ. ನೋಟುಗಳಿಗೆ ಈಗಷ್ಟು ಬೆಲೆಯೇ ಇಲ್ಲವೆಂದು ನಿರಾಧಾರವಾದ ವದಂತಿಗಳು ಹರಡಿವೆ. ಈ ವದಂತಿಗಳು ಸುಳ್ಳು; ಅಂಥನೋಟು ಪಡೆದಿರುವವರು ಶಾಸನದಲ್ಲಿ ಸೂಚಿಸಿರುವ ಬ್ಯಾಂಕು ಅಥವಾ ಖಜಾನೆಗಳಿಗೆ ಕೊಡುವ ಡಿಕ್ಲರೇಷನ್‌ಗಳು ಎಲ್ಲಾ ವಿಧಗಳಲ್ಲೂ ಸಮರ್ಪಕವಾಗಿದ್ದರೆ ಕೂಡಲೇ ಹಣವನ್ನು ಅಥವಾ ೧೦೦ ರೂ ನೋಟುಗಳ ರೂಪವಲ್ಲಿ ಕೊಡಲಾಗುವದು. ಬ್ಯಾಂಕುಗಳಿಗೆ ಅಥವಾ ಖಜಾನೆಗಳಿಗೆ ಡಿಕ್ಲರೇಷನ್‌ಗಳ ಬಗ್ಗೆ ಅನುಮಾನ ಬಂದಾಗ ಮಾತ್ರ ಆ ವಿಚಾರ ಕೇಂದ್ರ ಸರ್ಕಾರದ ಪರಿಶೀಲನೆಗೆ ಒಪ್ಪಿಸಲ್ಪಡುತ್ತದೆ. ಸರ್ಕಾರ ಅದಷ್ಟು ಜಾಗ್ರತೆ ತೀರ್ಮಾನ ಕೊಡುತ್ತದೆ.—ಹೀಗೆಂದು ಇಂಡಿಯಾ ಸರ್ಕಾರದ ಪ್ರಕಟನೆಯೊಂದು ತೊರಬಿದ್ದಿದೆ.

ಬ್ರಿಟಿಷರಿಗೆ ಡಾ|| ಬಾಮಾರವರ ಶರಣಾಗತಿ

ಬರ್ಮಾದ ಮಾಜಿ ಪ್ರಧಾನ ಡಾ|| ಬಾಮಾರವರು ಟೋಕಿಯೋದಲ್ಲಿ ಬ್ರಿಟಿಷ್ ಅಧಿಕಾರಿಗಳಿಗೆ ಶರಣಾಗತರಾದರು. ಬರ್ಮಾದಿಂದ ತಪ್ಪಿಸಿಕೊಂಡು ಬಂದಲಾಗಾಯ್ತು ಅವರು ಹತ್ಯೆಯೋದ್ಯೋ ಇದ್ದುದಾಗಿ ತಿಳಿಸಿದರು; ಅಲ್ಲದೆ ಬರ್ಮಾದಿಂದ ವಿಮಾನದಲ್ಲಿ ಅಗಸಿಸಿದುದಾಗಿಯೂ ತೇಳಿದರು ಡಾ|| ಬಾಮಾರವರು ಬರ್ಮಾ ಸ್ವಾತಂತ್ರ್ಯಕ್ಕಾಗಿ ಅವಿಶ್ರಾಂತ ಹೋರಾಟ ನಡೆಸಿದ್ದಾರೆಲ್ಲದೆ ಹಿಂದೆ ರೌಂಡ್ ಟೇಬಲ್ ಸಮ್ಮೇಳನಕ್ಕೆ ಹೋಗಿದ್ದಾಗ, ಬರ್ಮಾವನ್ನು ಭಾರತದಿಂದ ಪ್ರತ್ಯೇಕಿಸಕೂಡದೆಂದು ಅಲ್ಲಿ ವಾದಿಸಿದರು. ಅಲ್ಲದೆ ಬರ್ಮಾ-ಬರ್ಮೀಯರಿಗಾಗಿ ಎಂದು ಪ್ರತಿಪಾದಿಸಿದ ಬರ್ಮಾ ಪ್ರಜಾಪಕ್ಷಕ್ಕೆ ಇವರು ಪ್ರಮುಖರಾಗಿದ್ದರು ಶ್ರೀ ಸುಭಾಷ್‌ಚಂದ್ರಬೋಸರು ಜರ್ಮನಿಯಿಂದ ಟೋಕಿಯೋಕ್ಕೆ ಬಂದಮೇಲೆ ಡಾ|| ಬಾಮಾರವರು ಸುಭಾಷರ ಸ್ವಾತಂತ್ರ್ಯ ಸಮರಕ್ಕೆ ನೆರವಾಗಿದ್ದರು.

ಪುದುಕೋಟೆ ಸರ್ಕಾರದ ಆಜ್ಞೆ

ಹೋಟೆಲುಗಳಲ್ಲಿ; ಭೋಜನ ಗೃಹಗಳಲ್ಲಿ ಅಕ್ಕಿಯಿಂದ ಮಾಡಿದ ಇಡ್ಡಿ, ದೋಸೆ, ಅಪ್ಪಂ, ಮತ್ತಿತರ ಪದಾರ್ಥಗಳನ್ನು ಮಾರಕೂಡದೆಂದು ಪುದುಕೋಟೆ ಸರ್ಕಾರ ಅಕ್ಕಿ ವಸ್ತುಗಳ ತಯಾರಿಕೆ ಚಟೋಟಿ ಆಜ್ಞೆ ಶೀತ್ರಿಯ ಬಹುವಾರ ಜಾಕಿದೆ. ಈ ಆಜ್ಞೆಯನ್ನು ಮೀರಿದರೆ ೩ ತಿಂಗಳು ಸಜ ಅಥವಾ ಜುಲ್ಮಾನೆ ಅಥವಾ ಎರಡನ್ನೂ ವಿಧಿಸಲಾಗುತ್ತದೆ.

೧೫೦ ವಿದ್ಯಾರ್ಥಿಗಳ ಮೇಲೆ ಮೊಖದ್ದಮೆ

ನವೆಂಬರ್ ಅಂತ್ಯದಲ್ಲಿ ವಿದ್ಯಾರ್ಥಿಗಳ ಪ್ರದರ್ಶನ ಸಮಯದಲ್ಲಿ ಪೋಲೀಸಿನವರ ವಿರುದ್ಧ ಕ್ರಿಮಾಡಿದರೆಂಬ ಆಪಾದನೆ ಮೇಲೆ ಸುಮಾರು ೧೫೦ ವಿದ್ಯಾರ್ಥಿಗಳನ್ನು ಇಂದು ಚೀಫ್ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರ ಮುಂದೆ ೨ ತಂಡಗಳಾಗಿ ಹಾಜರ್ಪಡಿಸಲಾಯ್ತು. ಜನವರಿ ೨೦ ನೇ ತಾರೀಖಿಗೆ ಮೊದಲಿನಿಂದ ಮುಂದುವರಿಸಲಾಗಿದೆ ಮತ್ತು ಕೆಲವು ವಿದ್ಯಾರ್ಥಿಗಳನ್ನು ಜೈಲ್ ಮೇಲೆ ಬಿಡುಗಡೆ ಮಾಡಲಾಗಿದೆ

ಭಾರತಕ್ಕೆ ಸಯಾಂ ಅಕ್ಕಿ

ಭಾರತದ ಅನೇಕ ಪ್ರದೇಶಗಳಲ್ಲಿ ಪೈರುಗಳು ಕಿಟ್ಟು ಹೋಗಿ, ಆಹಾರದ ಅಭಾವವು ಹೆಚ್ಚಾಗುತ್ತಿದೆ ಮದ್ರಾಸ್ ಪ್ರಾಂತ್ಯದಲ್ಲಿ ೮ ಲಕ್ಷ ಟನ್ ಅಕ್ಕಿ ಮತ್ತು ಬೊಂಬಾಯಿನಲ್ಲಿ ೨ ಲಕ್ಷ ಟನ್ ಆಹಾರ ಪದಾರ್ಥ ಕಡಿಮೆಯಾಗಿದೆಯಂತೆ. ಈ ಪರಿಸ್ಥಿತಿಯನ್ನು ನಿವಾರಿಸಲು ಕೇಂದ್ರ ಸರ್ಕಾರದವರು ಬ್ರಿಟನ್ನಿಗೆ ದಂಡದ ಹಣವಾಗಿ ಸಯಾಂ ಕೊಡಲಿರುವ ಅಕ್ಕಿಯಲ್ಲಿ ೧೫ ಕೋಟಿ ಟನ್ ಅಕ್ಕಿಯನ್ನು ಭಾರತಕ್ಕೆ ತರಿಸಿಕೊಳ್ಳುವರಂತೆ

ಹೊಸ ಅಣುಬಾಂಬು

ಶ್ರೀ ರಾಮಕೃಷ್ಣಪರಮಹಂಸರು ಹೇಳಿರುವಂತೆ ಇಬ್ಬರು ಸ್ತ್ರೀಯರು ತಮ್ಮ ಊರಿನಿಂದ ಇನ್ನೊಂದು ಊರಿಗೆ ಮೋಗಿ ಮೀನುಗಳನ್ನು ಮಾರಿಕೊಂಡು ಹಿಂದಿರುಗಿ ಬರುವಾಗ ಸಂಜೆಯಾದ್ದರಿಂದ ಮುಳ್ಳಿ ಇದ್ದ ಊರಿನಲ್ಲಿ ಒಬ್ಬ ಹೂವಾಡಿಗನ ಮನೆಯಲ್ಲಿ ರಾತ್ರಿ ನಿಲ್ಲಿ ಬೇಕಾಯಿತು ಅವನ ಮನೆಯು ಚಿಕ್ಕದಾದ್ದರಿಂದ ಹೂವುಗಳಿನ್ನಿಟ್ಟಿದ್ದ ಕೊಠಡಿಯಲ್ಲಿ ಅವರುಗಳು ಮಲಗಿ ಕೊಳ್ಳುವುದಕ್ಕೆ ಅವನು ಆವರಿಗೆ ಸ್ಥಳವನ್ನು ಕೊಟ್ಟನು ಆ ಸ್ತ್ರೀಯರಿಗೆ ಎಷ್ಟು ಹೊತ್ತಾದರೂ ನಿದ್ರೆ ಬಾರದೆ ಇದ್ದದ್ದರಿಂದ ಒಬ್ಬಳು ಇನ್ನೊಬ್ಬಳಿಗೆ 'ಹಾಳು ಹೂವಿನ ವಾಸನೆಯಿಂದ ನಿದ್ರೆಬಾರದೆ ಇದೆ' ಎಂದಳು ಅದಕ್ಕೆ ಇನ್ನೊಬ್ಬಳು 'ಹಮಮು ನನಗೂ ಹೂವಿನ ವಾಸನೆಯಿಂದ ನಿದ್ರೆ ಬಾರದೆ ಇದೆ. ಮೀನಿನ ಬುಟ್ಟಿಗಳನ್ನು ಮೂಗಿನ ಹತ್ತಿರ ಇಟ್ಟುಕೊಳ್ಳೋಣ' ಎಂಬಳು ಆದರಿಂತೆ ಅವರು ಮೀನಿನ ಬುಟ್ಟಿಗಳನ್ನು ಮೂಗಿನ ಹತ್ತಿರ ಇಟ್ಟುಕೊಂಡುಹಡನೆಯೇ ಅವರಿಗೆ ನಿದ್ರೆ ಬಂದಿತು. ಮೀನುಗಳ ಬುಟ್ಟಿಯು ದುರ್ವಾಸನೆಯಾಗಿಯೂ, ಹೂವು ಗಳು ಸುವಾಸನೆಯಾಗಿಯೂ ಇದ್ದರೂ ಬಹುಕಾಲದಿಂದ ಮೀನಿನ ದುರ್ವಾಸನೆಯನ್ನೇ ಅನುಭವಿಸಿದ್ದರಿಂದ ಅವರಿಗೆ ಸುವಾಸನೆಯಲ್ಲಿ ಅಹಿತವು ತೋರಿ ದುರ್ವಾಸನೆಯಲ್ಲಿಯೇ ಹಿತವು ತೋರಿತು ಇದರಂತೆ ನಮ್ಮ ವತ್ತು ನಮ್ಮ ಹೆಂಡತಿ ಮಕ್ಕಳುಗಳ ದೇಹಗಳು ಹೇಯವಾಗಿದ್ದರೂ ನಮಗೆ ಬಹುಕಾಲದ ಅಭಿಭವದಿಂದ ದೇಹ ಗಳಲ್ಲಿ ಹೇಯತ್ವವನ್ನು ತೋರದೆ ಅವುಗಳಲ್ಲಿ ಪವಿತ್ರತ್ವನೇ ತೋರುತ್ತದೆ. ದೇಹವು ರೋಗಗ್ರಸ್ತವಾಗಿ ನಮಗೆ ದುಃಖವನ್ನು ಕೊಡುತ್ತಿದ್ದರೂ ದೇಹವೇ ನಾನೆಂಬ ಅಧ್ಯಾಸ (ತಪ್ಪು ತಿಳಿವಳಿಕೆ) ವು ಬಹುಕಾಲದಿಂದಿರುವುದರಿಂದ ದ್ವೇಷಬುದ್ಧಿ ಹುಟ್ಟದೆ ಆದರಲ್ಲಿ ನಮಗೆ ಪ್ರೀತಿಯೇ ವಿಶೇಷವಾಗಿದ್ದು ಅನನ್ನು ಕಾಪಾಡುವುದಕ್ಕೆ ಸರ್ವಪ್ರಯತ್ನ ಗಳನ್ನೂ ನಾವು ಮಾಡುತ್ತೇವೆ ಗರ್ಭದ ಲ್ಲಿರುವಾಗಲೂ, ಜನನವಾದಾಗಲೂ, ಮರಣವಾಗುವಾಗಲೂ, ಜನನದಿಂದ ಮರಣವಾಗುವವರೆಗೂ, ನರಕದ ಲ್ಲಿರುವಾಗಲೂ ನಾವು ನರಕಿಕರವಾದ ದುಃಖವನ್ನು ಅನುಭವಿಸುತ್ತಿದ್ದರೂ 'ಅಜ್ಞಾನೇನಾವೃತಂ ಜ್ಞಾನಂ ತೇನ ಮುಹ್ಯಂತಿ ಜಂತವಃ' ಎಂಬುದಾಗಿ ಶ್ರೀಮದ್ಭಗವದ್ಗೀತೆಯಲ್ಲಿ ಹೇಳಿರುವಂತೆ ನಮ್ಮನ್ನು ಅವರಿಸಿರತಕ್ಕ ಅಜ್ಞಾನವು ಆ ದುಃಖವನ್ನು ನಾವು ಮರೆಯುವ ಹಾಗೆ ಮಾಡುತ್ತದೆ 'ಭೋಗೇ ರೋಗಭಯಂ' ಎಂಬಂತೆ ವಿಷಯಗಳು ನಮಗೆ ಕ್ಷಣಿಕವಾದ ಸುಖವನ್ನು ಕೊಟ್ಟು ವಿಶೇಷವಾದ ದುಃಖವನ್ನು ಕೊಡುತ್ತವಾದರೂ ಅವಿಚಾರದಿಂದ ವಿಷಯಗಳಲ್ಲಿ ದುಃಖವಿದೆ ಎಂಬುದನ್ನು ನಾವು ತಿಳಿಯುವುದಿಲ್ಲ

"ರಾತ್ರಿರ್ಗಮಿಷ್ಯತಿ ಭವಿಷ್ಯತಿ ಸುಪ್ರಭಾತಂ ಭಾಸ್ವಾನುದೇಷ್ಯತಿ ಹಸಿಷ್ಯತಿ ಪಂಕಜಶ್ರೀಃ । ಇತ್ಥಂ ವಿಚಿಂತಯತಿ ಕೋಶ ಗತೇದ್ವಿರೇಫೇ ಹಾ ಹಂತ ಹಂತ ನಲಿನೀಂ ಗಜ ಉಜ್ಜಹಾರ"

ಅಂದರೆ ದುಂಬಿಗಳು ಸೂರ್ಯಾಸ್ತಮಾನವಾಗುವುದಕ್ಕೆ ಮುಂಚೆ ಕಮಲದಲ್ಲಿ ಮಕರಂದವನ್ನು ಪಾನಮಾಡುತ್ತಿದ್ದವು. ಸೂರ್ಯಾಸ್ತಮಾನವಾದ ಒಡನೆ ಕಮಲಗಳು ಮುಚ್ಚಿಕೊಂಡು ಅವುಗಳು ಕಮಲದ ಒಳಗೆ ಬಂಧಿಸಲ್ಪಟ್ಟವು ಈ ವಿಧವಾದ ಬಂಧನವು ಅವುಗಳಿಗೆ ದುಃಖವಾಗಿದ್ದರೂ 'ರಾತ್ರಿಯು ಕಳೆದುಹೋಗುತ್ತದೆ ಹಗಲು ಬರುತ್ತದೆ ಸೂರ್ಯನು ಉದಯವಾಗುತ್ತಾನೆ. ಕಮಲವು ಅರಳುತ್ತದೆ. ನಾವು ಹೊರಬಿಟುಹೋಗ ಬಹುದು" ಎಂಬ ನೆಂಬಿಕೆಯಿಂದ ಅವುಗಳಿಗೆ ದುಃಖವು ಕಾಣದೆ ಸಂತೋಷವಾಗಿದ್ದವು ಹೀಗಿರುವಾಗ ಒಂದು ಆನೆಯು ಬಂದು ಆ ಕಮಲವನ್ನು ಕಿತ್ತು ಕಾಲಲ್ಲಿ ಹೊಸಕಿದ್ದರಿಂದ ದುಂಬಿಗಳು ನಾಶವಾಗಿ ಹೋದವು. ಇದರಂತೆಯೇ ಭಿಕ್ಷುಕನಾದಿಯಾಗಿ ಚಕ್ರವರ್ತಿಯವರೆಗೆ ಪ್ರತಿಯೊಬ್ಬನಿಗೂ ಯಾವುದಾದರೂ ಒಂದು ದುಃಖ ವಿದ್ದರೂ ಮುಂದಕ್ಕೆ ಅನುಕೂಲವಾಗುತ್ತೆಂಬ ನಿರೀಕ್ಷಣೆ ಯಿಂದ ಸಂತೋಷವಾಗಿರುತ್ತಾನೆ. ಆದರೆ ಅನೇಕ ಸನಯಗಳಲ್ಲಿ ಅವನ ನಿರೀಕ್ಷಣೆಗೆ ವಿರೋಧವಾಗಿ ಅವನಿಗೆ ಮಃಖವು ಇನ್ನೂ ಹೆಚ್ಚಾಗುತ್ತದೆ.

ಅಂದರೆ ಬಹುಕಾಲದ ಅಭ್ಯಾಸದಿಂದ ನಮಗೆ ದುಃಖವೇ ಸುಖವಾಗಿ ತೋರುತ್ತದೆ ಒಂದುವೇಳೆ ದುಃಖವು ತೋರಿದರೂ ಮುಂದಕ್ಕೆ ಸುಖವಾಗುತ್ತೆಂಬ ನಿರೀಕ್ಷಣೆಯಿಂದ ದುಃಖಪಡದೆ ನಾವು ಸಂತೋಷವಾಗಿರುತ್ತೇವೆ ಈ ಕಾರಣಗಳಿಂದ ನಾವು ದುಃಖವನ್ನು ನಿವಾರಣೆ ಮಾಡುವುದಕ್ಕೆ ಪ್ರಯತ್ನವನ್ನೇ ಮಾಡುವದಿಲ್ಲ ನಮ್ಮಲ್ಲಿ ಯಾರಾದರೂ ಕಾಠಾರ್ಯಹವಾಸದ ಶಿಕ್ಷೆಗೆ ಆರ್ಹವಾದ ಅಪರಾಧವನ್ನು ಮಾಡಿದರೆ ಅವರು ಕಾರಾಗೃಹಕ್ಕೆ ಹೋಗುವುದಕ್ಕೆ ಭಯಪಟ್ಟು ಅಲ್ಲಿಗೆ ಹೋಗುವುದನ್ನು ತಪ್ಪಿಸಿಕೊಳ್ಳುವದಕ್ಕಾಗಿ ನಿದ್ರಾಹಾರ ಗಳನ್ನು ಸರಿಯಾಗಿ ಮಾಡದೆ ಹಗಲಿರುಳೂ ಯೋಚಿಸಿ ಯನ್ನು ಮಾಡುತ್ತಿರುತ್ತಾರೆ ನಾವು ವಿಚಾರಮಾಡಿ ನೋಡಿದರೆ ಕಾರಾಗೃಹವು ನಮ್ಮ ದೇಹದ ಹಾಗೆ ಹೇಯವಾಗಿಲ್ಲದೇ ಇರುವುದಲ್ಲದೆ ಗರ್ಭದಲ್ಲಿಯೂ, ಜನನವಾಗುವಾಗಲೂ, ಮರಣವಾಗುವಾಗಲೂ, ಜನನದಿಂದ ಮರಣವಾಗುವವರೆಗೂ, ನರಕದಲ್ಲಿಯೂ ನಾವು ಅನುಭವಿಸುವ ದುಃಖದಲ್ಲಿ ಒಂದಂಶವೂ ಆದರಲ್ಲಿ (ಕಾರಾಗೃಹದಲ್ಲಿ) ಇರುವದಿಲ್ಲ. ಹೇಯವಲ್ಲದೆ ಮತ್ತು ದುಃಖವಿಲ್ಲದೇ ಇರತಕ್ಕ ಕಾರಾಗೃಹಕ್ಕೆ ಹೋಗುವುದನ್ನು ತಪ್ಪಿಸಿಕೊಳ್ಳುವುದಕ್ಕೆ ಸರಿಯಾದ ನಿದ್ರಾಹಾರಗಳಲ್ಲದೇ ಹಗಲಿರುಳೂ ಜನಗಳು ಪ್ರಯತ್ನಪಡುತ್ತಿರುವಾಗ ಇಂಥಾ ಮತ್ತಾ ಭಯಂಕರವಾದ ಗರ್ಭವಾಸ ಮುಂತಾದ ದುಃಖ ಗಳನ್ನು ತಪ್ಪಿಸಿಕೊಳ್ಳುವ ವಿಷಯದಲ್ಲಿ ನಾವು ಯಾವ ಪ್ರಯತ್ನವನ್ನೂ ಮಾಡದಿರುವುದು ನಮ್ಮನ್ನು ಆವರಿಸಿರತಕ್ಕ ಅಜ್ಞಾನಶಕ್ತಿಯ ಪ್ರಭಾವವಾಗಿದೆ.

೧೫. ನಮ್ಮ ಜೀವನದ ಗುರಿ

ನಮ್ಮಲ್ಲಿ ಪ್ರತಿಯೊಬ್ಬನೂ ಯಾವ ದುಃಖವೂ ಇಲ್ಲದೆ ಶಾಶ್ವತವಾಗಿರತಕ್ಕ ಸುಖವನ್ನು ಅಪೇಕ್ಷಿಸುವುದರಿಂದ ಹಿಂದೆ ಹೇಳಿದ ಸರ್ವ ದುಃಖಗಳಿಂದಲೂ ಬಿಡುಗಡೆಯನ್ನು ಹೊಂದಿ ನಿತ್ಯಾನಂದವನ್ನು ಪಡೆಯ ತಕ್ಕದ್ದೇ ನಮ್ಮ ಜೀವನದ ಮುಖ್ಯ ಗುರಿಯಾಗಿದೆ.

ಇದಕ್ಕೆ ಮೋಕ್ಷವೆಂದು ಹೆಸರು ' ವರಿಸಲು ರಾಜನ ಕುವರಿಯು ಧೊರೆಮಗನೇ ಯೋಗ್ಯನೆಂಬ ನ್ಯಾಯವನ ತೀರ್ಯಲ್ ವರಮುಖ್ಯ ಗುಣಗಳೆಯಂ ವರಿಸಲು ವೈರಾಗ್ಯ ಸಂಪತ್ತುಳ್ಳವರ್ಯೋಗ್ಯಂ " ಎಂಬಂತೆ ರಾಜನ ಮಗಳನ್ನು ಲಗ್ನವಾಗುವುದಕ್ಕೆ ರಾಜನ ಮನೆಗೆ ಹೇಗೆ ಯೋಗ್ಯನೋ ಹಾಗೆ ವೈರಾಗ್ಯವುಳ್ಳವನೇ ಮೋಕ್ಷವನ್ನು ಪಡೆಯುವುದಕ್ಕೆ ಅರ್ಹನು. ' ಮಲಪರಿಕ್ಕಿಗೆ ನುಕ್ತಿಯುಣ್ಣದೆ ತನುವಿರಕ್ತಿಗೆ ಅಲ್ಲವು ' ಎಂಬಂತೆ ದೇಹತ್ಯಾಗ ಮಾಡುವದೂ, ಹೆಂಡತಿ ಮಕ್ಕಳನ್ನು ಒಡಿಸುವುದು, ವಿಶ್ವರ್ಯವನ್ನು ಬಿಸಾಡುವುದು ವೈರಾಗ್ಯವಲ್ಲ ಗರ್ಭವಾಸದೇ ಮುಂತಾದ ದುಃಖಗಳಿಗೆ ಭಯಪಟ್ಟು ದುಃಖಕ್ಕೆ ಸಾಧಕವು ಮತ್ತು ಅಶಾಶ್ವತವು ಆದ ದೇಹ, ಹೆಂಡತಿ, ಮಕ್ಕಳು, ಐಶ್ವರ್ಯ ಇವುಗಳಲ್ಲಿ ಮೋಹವನ್ನು ಬಿಡುವುದೇ ನಿಜವಾದ ವೈರಾಗ್ಯ ದೇಹವನ್ನು ತಾನು ಎಂಬುದಾಗಿಯೂ, ಸತಿಪುತ್ರಾದಿಗಳನ್ನು ನೆನ್ನದು ಎಂಬುದಾಗಿಯೂ ತಿಳಿದುಕೊಂಡಿರುವುದಕ್ಕೆ ಮೋಹವೆಂದು ಹೆಸರು " ಜಂತೂನಾಂ ನರಜನ್ಮದುರ್ಲಭಂ " " ಶರೀರ ಮಾದ್ಯಂ ಖಲು ಧರ್ಮಸಾಧನಂ " ಎಂಬಂತೆ ಎಲ್ಲಾ ಜನ್ಮಗಳಿಗಿಂತಲು ಮನುಷ್ಯ ಜನ್ಮವೇ ಶ್ರೇಷ್ಠವು ಮತ್ತು ಮೋಕ್ಷವನ್ನು ಪಡೆಯುವುದಕ್ಕೆ ಶರೀರವೇ ಮುಖ್ಯ ಸಾಧನವು ಆದುದರಿಂದ ನಮಗೆ ಈಗ ಮನುಷ್ಯ ಜನ್ಮವು ಬಂದಿರುವಾಗ ನಮ್ಮ ಶರೀರವನ್ನು ಮೋಕ್ಷ ಸಾಧನೆಗೆ ಉಪಯೋಗಿಸಕ್ಕೆಯ್ದಿಲ್ಲ ಆತ್ಯಾವಶ್ಯಕವಾಗಿದೆ.

" ನೃಪತ್ವಂ ಮಾತಾಪುತ್ರತ್ವಂ ಸಾಧ್ವೀ ಭಾರ್ಯಾ ಸುಚಿತ್ವಂ ।
ಅಮೃತಾಧಿಕಾರಂ ಕೃತ್ವಾ ಭರ್ತವ್ಯಾ ಮನುಜಪ್ರವರಾ ॥ "

ಎಂಬುದಾಗಿ ಹೇಳಿರುವಂತೆ ನೆನ್ನನ್ನು ನಂಬಿದ ತಾಯಿ ತಂದೆಗಳನ್ನು ಮತ್ತು ಹೆಂಡತಿ ಮಕ್ಕಳುಗಳನ್ನು ಕಾಪಾಡುವುದು ನಮ್ಮ ಮುಖ್ಯ ಕರ್ತವ್ಯವಾಗಿರುತ್ತದೆ. ಹಾಗಲ್ಲದೆ ಯಾರಾದೂ ವೈರಾಗ್ಯದ ನೆಪದಿಂದ ತಮ್ಮನ್ನು ನಂಬಿದವರನ್ನು ತ್ಯಾಗಮಾಡಿದ್ದೇ ಆದರೆ ತ್ಯಾಗಮಾಡಿದವನಿಗೆ ದುರ್ಗತಿಯಾಗುತ್ತದೆ. ನಾವು ಈ ಲೋಕದಲ್ಲಿರುವವರೆಗೆ ನಮ್ಮ ಮತ್ತು ನಮ್ಮನ್ನು ನಂಬಿದವರ ಪೋಷಣೆಗೊ, ದುಃಖಪರಿಹಾರಕ್ಕೆ ಸಾಧನಮಾಡುವುದಕ್ಕೂ ಧರ್ಮಮಾರ್ಗದಿಂದ ಧನವನ್ನು ಆರ್ಜಿಸುವುದು ಅತ್ಯಾವಶ್ಯಕವಾಗಿದೆ. ವಿಶ್ವರ್ಯವಂತರಾದವರು ತಮ್ಮನ್ನು ನಂಬಿದ ಹೆಂಡತಿ ಮಕ್ಕಳುಗಳಿಗೆ ಎಷ್ಟು ಅವಶ್ಯಕವೋ ಅಷ್ಟು ಧನವನ್ನು ಬಿಟ್ಟು ಉಳಿದ ಧನವನ್ನು ಧರ್ಮರೂಪವಾಗಿ ವಿನಿಯೋಗಿಸತಕ್ಕದ್ದು ಹಾಗೆ ಮಾಡದೇ ಹೋದರೆ ಅವರ ಕಾಲಾನಂತರ ಅವರ ಮಕ್ಕಳುಗಳು ಧನವನ್ನು ದುರ್ವಿಷಯಗಳಗೋಸ್ಕರ ಉಪಯೋಗಿಸುವುದರಿಂದ ಧನದೊಂತೆಗೆ ಮಕ್ಕಳುಗಳೂ ಸಹ ಹಾಳಾಗಿಹೋಗುತ್ತಾರೆ.

ಕೃತ್ಸ್ನಾ ವ್ಯಯಿಭ್ಯೋ ಧನಮನಿಶಮಾಶಾವಿಷಕ್ಷಾಪ್ತಿ ಹೇತೋಃ
ಪತ್ಯೇ ಕಿಂಚಿದ್ದಿಶೇದಮಪಲಪ್ಸ್ಯೆ ನ ಸನಂಕ್ಷಮಾಮಃ ।
ಕಾಕ್ಷ್ಯಾದ್ಯೇಕಕ್ಷೇ ಬಹುಶಕಗುಣಾಂಭೋಕಣಪ್ರಾಪ್ತಿ ಹೇತೋಃ
ಮೃರ್ಧಂ ಕಂಠಾಕಲುಷಪಯಸಾಂ ಸೋಪ್ಯಹಾಮೋರ್ಧ ಲೇಶಂ ॥

ಎಂಬಂತೆ ಕಷ್ಟಪಟ್ಟು ಸಂಪಾದಿಸಿದ ಹಣವನ್ನು ಜನಗಳು ಹೊರಕ್ಕೆ ಒಂದು ರೂಪಾಯಿ ಬಡ್ಡಿಯ ಆಶೆಯಿಂದ ಒಂದು ಕಾಗದವನ್ನು ಬರೆಸಿಕೊಂಡು ಹಣವನ್ನು ಕೊಟ್ಟು ಎಲ್ಲವನ್ನೂ ಕಳೆದುಕೊಳ್ಳುತ್ತಾರೆ. ಹಣವನ್ನು ಧರ್ಮರೂಪವಾಗಿ ಉಪಯೋಗಿಸಿದರೆ ಒಂದಕ್ಕೆ ನೂರ ರಷ್ಟು ಸಾಲದಿವಕ್ಕು ಮುಂದಕ್ಕೆ ಲಾಭವಾಗುತ್ತದೆಂದು ಶಾಸ್ತ್ರವು ಹೇಳುತ್ತಿದ್ದರೂ ಆದರಲ್ಲಿ ನಂಬಿಕೆಯು ಇಲ್ಲದೆ ಸ್ವಲ್ಪ ಹೊಟ್ಟಪ್ಪ ಸಹ ಧರ್ಮಕ್ಕೆಯ್ದಕ್ಕರ ಉಪಯೋಗಿಸುವುದಿಲ್ಲ. ಅಂದರೆ, ಒಬ್ಬನಲ್ಲಿ ಹತ್ತುಲಕ್ಷ ರೂಪಾಯಿ ಗಳಿದ್ದು ಅವನ್ನು ಸರಿಯಾದ ಸ್ವತ್ತುಗಳ ಆಧಾರದ ಮೇಲೆ ಕೊಟ್ಟು ಪತ್ರವನ್ನು ಬರೆಸಿ ರಿಜಿಸ್ಟರ್ ಮಾಡಿಸಿ ಕೊಂಡಿದ್ದರೆ ತಾನು ಸಾಯುವಾಗ ತನ್ನ ಹಣಕ್ಕೆ ಯಾವ ಭಯವೂ ಇಲ್ಲವು ಮತ್ತು ಬಡ್ಡಿಯೂ ಕೂಡ ಬರುತ್ತದೆಂಬ ನಂಬಿಕೆಯಿಂದ ಪ್ರಾಣಬಿಡುತ್ತಾನೆ. ಆದರೆ ಈ ಹತ್ತುಲಕ್ಷ ರೂಪಾಯಿ ಮತ್ತು ಇದರ ಬಡ್ಡಿಯಲ್ಲಿ ಒಂದು ಕಾಸಾದರೂ ಸಾಯುವವನಿಗೆ ಬರದೇ ಆವನ ಮಕ್ಕಳು ಅನುಭವಿಸುತ್ತಾರೆ

ಕೊಟ್ಟಿದ್ದು ತನಗೆ ಬಟ್ಟಿಟ್ಟಿದ್ದು ಪರರಿಂಗೆ ಕೊಟ್ಟಿದ್ದು ಕೆಟ್ಟ ತೆನೆಬೇಡ ಮುಂತೆ ಕಟ್ಟಿದಾಬುತ್ತಿ ಕಾಣಯ್ಯ ಸರ್ವಜ್ಞ ॥

ಎಂಬುದಾಗಿ ಸರ್ವಜ್ಞನು ಹೇಳಿರುವಂತೆ ಹತ್ತುಲಕ್ಷ ರೂಪಾಯಿನಲ್ಲಿ ಒಂದು ಅಂಶವನ್ನಾದರೂ ತಾನು ಧರ್ಮ ರೂಪವಾಗಿ ಕೊಟ್ಟರೆ ಒಂದಕ್ಕೆ ಸಹಸ್ರದಷ್ಟು ಫಲವು ಪರಲೋಕದಲ್ಲಿ ದೊರೆಯುತ್ತದೆ.

ತ್ರಿಭಿರಷ್ಟೌ ತ್ರಿಭಿರ್ನವ ತ್ರಿಭಿರೇಕೋ ತ್ರಿಭಿರಿಮೌ ತ್ರಿಭಿರಿದಂ ತ್ರಿಭಿಃ ।
ಆತ್ಮಕ್ಷೇತ್ರೇ ಕೃತಾ ಸಾಧ್ವಿಯಂ ಫಲಮಶ್ನುತೆ ॥

ಎಂಬುದಾಗಿ ಹೇಳಿರುವಂತೆ ನಾವು ಆತ್ಯತ್ಯುನ್ನತವಾದ ಧರ್ಮಕಾರ್ಯಗಳನ್ನು ಮಾಡಿದರೆ ಅದು ಈ ಜನ್ಮದಲ್ಲೇ ಫಲವನ್ನು ಕೊಡುವುದು

ಅದಾನಮೋಕ್ಷೇಣ ಭವೇದ್ಧರಿಷ್ಯೋ ದಾನಸ್ಯಮೋಕ್ಷೇಣ ಕರೋತಿ ಪಾಪಂ । ಪಾಪಾದವಶ್ಯಂ ನರಕಂ ಪ್ರಯಾತಾ ಪುತ್ರ ದಂರಿದ್ರಃ ಪುನರಿಹಪಾಪಃ ॥

ಎಂಬುದಾಗಿ ಹೇಳಿರುವಂತೆ ಧರ್ಮವನ್ನು ಮಾಡದೇ ಇರತಕ್ಕವನು. ಮುಂದಿನ ಜನ್ಮದಲ್ಲಿ ದರಿದ್ರನಾಗಿ ಹುಟ್ಟುವನು ದಾರಿದ್ರ್ಯದುಃಖದಿಂದ ಪಾಪಗಳನ್ನು ಮಾಡುವನು ಪಾಪಗಳನ್ನು ಮಾಡುವುದರಿಂದ ನರಕಕ್ಕೆ ಹೋಗುವನು ಪುನಃ ದರಿದ್ರನಾಗುವನು ಮತ್ತು ಪಾಪಿಯಾಗುವನು

೧೬. ಮೋಕ್ಷವನ್ನು ಹೊಂದುವುದಕ್ಕೆ ಸುಲಭೋಪಾಯ

ಜಗತ್ತಿಗೆ ಒಡೆಯನೂ, ಸರ್ವ ಪ್ರಾಣಿಗಳಿಗೆ ತಂದೆಯೂ, ನನ್ನುಗಳಿಗೆ ಜನ್ಮವನ್ನು ಕೊಡತಕ್ಕವನೂ ಆದ ಪರಮೇಶ್ವರನೊಬ್ಬನೇ ನಮ್ಮನ್ನು ಸರ್ವ ದುಃಖಗಳಿಂದಲೂ ಬಿಡುಗಡೆಯನ್ನು ಮಾಡುವುದಕ್ಕೆ ಶಕ್ತನೇ ಹೊರತು ಇನ್ನಾರಿಂದಲೂ ಸಾಧ್ಯವಿಲ್ಲ ಆದುದರಿಂದ " ಈ ಭಯಂಕರವಾದ ಗರ್ಭವಾಸಾದಿ ದುಃಖಗಳನ್ನು ನಾವು ಸಹಿಸಲಾರೆವು ಅವುಗಳಿಂದ ನಮ್ಮನ್ನು ಬಿಡುಗಡೆ ಮಾಡಿ ಕಾಪಾಡಬೇಕು ನಿನ್ನ ವಿನಃ ನಮ್ಮನ್ನು ಕಾಪಾಡತಕ್ಕವರು ಯಾರೂ ಇಲ್ಲ ನೀನೇ ನಮಗೆ ರಕ್ಷಕರು " ಎಂದು ಪರಿಪರಿವನ್ನಲ್ಲಿ ನಾವು ಆತ್ಯಂತ ದೈನ್ಯದಿಂದ ಮೊರೆಯಿಡತಕ್ಕದ್ದು ಇದೇ ನಿಜವಾದ ಭಕ್ತಿ ಇದೇ ಶರಣಾಗತಿ ಮಗನು ದುಸ್ಸನಾಗಿ ಅನೇಕವಿಧವಾದ ಕಷ್ಟನಷ್ಟಗಳನ್ನು ತಂದೆಗೆ ಉಂಟುಮಾಡಿದ್ದರೂ ಒಂದುಕಾಲದಲ್ಲಿ ಮಗನಿಗೆ ನಿಜವಾದ ಕಷ್ಟಾತ್ಪಾಪ ಬಂದು ತಂದರೆ ತಾನು ಮಾಡಿದ್ದು ತಪ್ಪು ಎಂಬುದಾಗಿ ತಿಳಿದು ನಿಜವಾಗಿ ದುಃಖಪಟ್ಟು ' ನೀನೇ ಗತಿ ' ಎಂಬುದಾಗಿ ತಂದೆಯಲ್ಲಿ ಮೊರೆಯಿಟ್ಟರೆ ತಂದೆಯು ಹೇಗೆ ಸಂತೋಷದಿಂದ ಕ್ಷಮಿಸುವನೋ ಅದರಂತೆ ಸರ್ವಪ್ರಾಣಿಗಳಿಗೂ ತಂದೆಯು ಮತ್ತು ಪರನುಕರುಣಾಳುವು ಆದ ಪರಮೇಶ್ವರನೂ ಕೂಡ

ಸರ್ವಧರ್ಮಾಶ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ ।
ಅಹಂ ತ್ವಾಂ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ ॥

ಎಂಬುದಾಗಿ ಶ್ರೀಕೃಷ್ಣ ಭಗವಂತನು ಗೀತೆಯಲ್ಲಿ ಹೇಳಿರುವಂತೆ ತಾವು ಪರಮೇಶ್ವರನನ್ನು ಮರೆತು ಅವನ ಆಜ್ಞೆಗಳಿಗೆ ವಿರೋಧವಾಗಿ ಇದುವರೆಗೂ ಮಾಡಿದ ಪಾಪ ಕಾರ್ಯಗಳಿಗೆ ನಿಜವಾದ ಪಶ್ಚಾತ್ತಾಪಪಟ್ಟು ಅವನಲ್ಲಿ ಯಾರು ಮೊರೆ ಇಡುತ್ತಾರೋ ಅವರ ಪಾಪಗಳನ್ನು ಸಂತೋಷದಿಂದ ಕ್ಷಮಿಸುತ್ತಾನೆ. ಒಂದುವೇಳೆ ಪುಣ್ಯ ಇವನು ಪಾಪಕಾರ್ಯಗಳನ್ನು ಮಾತ್ರವೇ ಅದರೆ ಪುಣ್ಯ ಪುಣ್ಯ ತಪ್ಪನ್ನು ಮಾಡತಕ್ಕ ಮಗನೆನ್ನು ತಂದೆಯು ಕ್ಷಮಿಸಲೇ ಇರುವಂತೆ ಇವನನ್ನು ತಂಪ್ಪರನು ಕ್ಷಮಿಸು ವದಿಲ್ಲ ರೋಮನ್ ಕ್ಯಾಥೋಲಿಕ್(ಶ್ರೈಸ್ತ)ನುತೀಯರು ತಮ್ಮ ಪ್ರಧಾನ ಗುರುವಿನ ಮುಂದೆ ತಾವು ಪಾಪಕರ್ಮಗಳನ್ನು ಮಾಡಿದ್ದನ್ನು ಒಪ್ಪಿಕೊಂಡರೆ ಅವರ ಪಾಪಗಳನ್ನು ದೇವರು ಕ್ಷಮಿಸುತ್ತಾನೆಂದು ತಿಳಿದಿರುತ್ತಾರೆ ಇದು ಏಸುಕ್ರಿಸ್ತನ ಅಭಿಪ್ರಾಯವಲ್ಲ ಏಕಕ್ಕೆಂದರೆ ನೆನ್ನನ್ನು ಪಾಪಗಳಿಂದ ಬಿಡಿಸಿ ಸುಖಿಗಳನ್ನಾಗಿ ಮಾಡುವ ಅಧಿಕಾರವಿದೂ ಈ ಲೋಕದಲ್ಲಿ ಅವತಾರ ಮಾಡಿದ ಏಸುಕ್ರಿಸ್ತನು ಮಾಡಿದ ಪಾಪಗಳನ್ನು ಒಪ್ಪಿ ಕೊಳ್ಳುವ ಮಾತ್ರದಿಂದಲೇ ಅವರುಗಳ ಪಾಪವು ಪರಿಹಾರವಾಗುತ್ತೆಂದು ಹೇಳುವುದಾದರೆ ಅನೇಕರು ನಿರ್ಭಯವಾಗಿ ಪಾಪಕಾರ್ಯಗಳನ್ನು ಮಾಡುವದಕ್ಕೆ ಅವನು ಅವಕಾಶಮಾಡಿಕೊಟ್ಟಂತಾಗುತ್ತದೆ ಯಾರಾದೂ ತಿಳಿಯದೆ ಪಾಪಕಾರ್ಯಗಳನ್ನು ಮಾಡಿ ಅದನ್ನು ಮಾಡಿದ್ದು ತಪ್ಪು ಎಂಬುದಾಗಿ ತಿಳಿದು ನಿಜವಾಗಿ ಪಶ್ಚಾತ್ತಾಪ (ದುಃಖ) ಪಟ್ಟರೆ ಅಂಥವರನ್ನು ದೇವರು ಕ್ಷಮಿಸುತ್ತಾನೆ ನಾವು ಸುರುಗಳ ಮುಂದೆ ನಾವು ಮಾಡಿದ ಪಾಪಗಳನ್ನು ಒಪ್ಪಿಕೊಳ್ಳುವುದರಿಂದ ನಮ್ಮ ಪಾಪಗಳನ್ನು ದೇವರು ಕ್ಷಮಿಸುತ್ತಾನೆಂದು ತಿಳಿದು ನಾವು ಯಥೇಚ್ಛವಾಗಿ ಪಾಪಕಾರ್ಯಗಳನ್ನು ಮಾಡಿದರೆ ದೇವರು ನಮ್ಮನ್ನು ಎಂದಿಗೂ ಕ್ಷಮಿಸುವುದಿಲ್ಲ ನಾವು ಆ ಪಾಪಕಾರ್ಯಗಳ ಫಲವನ್ನು ಅನುಭವಿಸಲೇ ಬೇಕಾಗುತ್ತದೆ

ಅನೆಯೇನಿದ ಪುರುಷಗೆ ಶ್ವಾಸನ ಭಯಂಪ್ಪಿದಂತೆ ಪರತಿಷ್ಠ ನಡಿಯಂ । ಧ್ಯಾನಿಪವಾಗಗೆ ಭವಳಯಲಿಯಂದೆಂದಿಗಿಲ್ಲಮದು ಸ್ಮಂ ಸತ್ಯಂ ॥

ಎಂಬುದಾಗಿ ಹೇಳಿರುವಂತೆ ಆನೆಯ ಮೇಲೆ ಉಳಿ ತಿರುವವನಿಗೆ ಸಾಯಿಯ ಭಯವು ಹೇಗೆ ಇಲ್ಲವೋ ಹಾಗೆ ಪರಮೇಶ್ವರನ ಧ್ಯಾನವನ್ನು ಸದಾ ಮಾಡತಕ್ಕವನ ಏಗೆ ಜನಿಸಮರಣಾದಿ ದುಃಖಗಳ ಭಯವಿಲ್ಲವು

ಯೇಸಕೇನಪ್ರಕಾರೇಣ ಯಸ್ಯಕಸ್ಯಾಪಿ ದೇಹಿನಃ ।
ಸಂತೋಷಂ ಜನಯೇತ್ಪ್ರಾಜ್ಞಃ ತದೇವೇಶ್ವರಪೂಜನಂ ॥

ಎಂಬುದಾಗಿ ಹೇಳಿರುವಂತೆ ಮನುಷ್ಯನೇ ಆದಿಯಾಗಿ ಸರ್ವಪ್ರಾಣಿಗಳನ್ನು ತನ್ನಂತೆ ತಿಳಿದು ಯಾವಾಗಲೂ ಯಾವ ಪ್ರಾಣಿಗೂ ಯಾವ ವಿಧವಾಗಿಯಾದರೂ ತೆನ್ನಿಂದ ತೊಂದರೆಯಾಗದಿರುವಂತೆ ನೋಡಿಕೊಂಡು ತನ್ನ ಕೈಲಾದಮಟ್ಟಿಗೆ ಪ್ರಾಣಿಗಳಿಗೆ ಉಪಕಾರವನ್ನು ಮಾಡಿ ಅವರುಗಳ ಮನಸ್ಸನ್ನು ಸಂತೋಷಪಡಿಸುವದೇ ನಿಜವಾದ ಈಶ್ವರಪೂಜೆ ತಂದೆಯಾದವನು ತನ್ನಲ್ಲಿ ನಿಜವಾದ ಭಕ್ತಿಯನ್ನಿಟ್ಟು ತನ್ನ ಮನಸ್ಸನ್ನು ಸಂತೋಷಪಡಿಸತಕ್ಕ ಕೆಲಸಗಳನ್ನು ಮಾಡತಕ್ಕ ಮಗನಿಗೆ ತನ್ನ ಆಸ್ತಿಯನ್ನು ಸಂತೋಷದಿಂದ ಹೇಗೆ ಕೊಡುತ್ತಾನೋ ಹಾಗೆ ಪರಮೇಶ್ವರನೂ ಕೂಡ ತನ್ನನ್ನೇ ಯಾವನು ನಂಬಿ ಪುಣ್ಯಕಾರ್ಯಗಳನ್ನೆ ಮಾಡುತ್ತಾನೋ ಅವನನ್ನು ಸರ್ವದುಃಖಗಳಿಂದಲೂ ಬಿಡುಗಡೆಯನ್ನು ಮಾಡುವುದಲ್ಲದೆ ಅವನಿಗೆ ಸಂತೋಷದಿಂದ ತನ್ನ ಪದವಿಯನ್ನು (ನಿತ್ಯಾನಂದವನ್ನು) ಕೊಡುತ್ತಾನೆ. ಪ್ರಪಂಚದಲ್ಲಿರತಕ್ಕ ಸರ್ವಮತಗಳು ತಮ್ಮ ಅಮ ಯಾಯಿಗಳನ್ನು ದುಃಖದಿಂದ ಬಿಡುಗಡೆಯನ್ನು ಮಾಡಿ ಅವರಿಗೆ ಸುಖವನ್ನುಂಟುಮಾಡತಕ್ಕದ್ದೇ ಗುರಿಯಾಗಿರು ತ್ತದೆ ಈ ಮತಗಳಲ್ಲಿ ಕೆಲವು ಮತಗಳು ದೇವರ ಇರುವಿಕೆಯನ್ನು ಒಪ್ಪುತ್ತವೆ ಕೆಲವು ಮತಗಳು ದೇವರ ಇರುವಿಕೆಯಮ್ಮು ಒಪ್ಪುವುದಿಲ್ಲ ದೇವರ ಇರುವಿಕೆ ಯನ್ನು ಒಪ್ಪಿರುವ ಮತಗಳು ತಮ್ಮ ಅನುಯಾಯಿಗಳು ದೇವರಲ್ಲಿ ಭಕ್ತಿಯನ್ನು ಇಡುವುದರ ಜೊತೆಗೆ ಒಳ್ಳೆಯ ದನ್ನು ಮಾಡು, ಕೆಟ್ಟದ್ದನ್ನು ಮಾಡಬೇಡ ಎಂಬುದಾಗಿ ಬೋಧಿಸುತ್ತವೆ ದೇವರ ಇರುವಿಕೆಯನ್ನು ಒಪ್ಪದೇ ಇರತಕ್ಕ ಮತಗಳೂ ಕೂಡ ಒಳ್ಳೆಯದನ್ನು ಮಾಡು, ಕೆಟ್ಟದ್ದನ್ನು ಮಾಡಬೇಡ ಎಂಬುದಾಗಿ ಹೇಳುತ್ತವೆ. ವಿಶೇಷವೆಂದರೆ ಈ ಮತೀಯರ ದೃಷ್ಟಿಯಲ್ಲಿ ದೇವರಲ್ಲದ

(ಅನಂಯ ಪುಟವನ್ನು ನೋಡಿ)

ಸ್ವೀಕಾರ

ಬಳ್ಳಾರಿ ತಾ॥ ಹೂವಿನಹಡಗಲಿ ತಾಲೂಕು ದೇವ ಗೊಂಡನಹಳ್ಳಿ ವೇ॥ ಮಕಡ ಗವಿಯಯ್ಯನವರ ಧರ್ಮ ಪತ್ನಿ ಶ್ರೀಮತಿ ದೊಡ್ಡಬಸವಮ್ಮನವರು ತಿಂಥಿಣಿನವಾದ ಸಮಯದಲ್ಲಿ ಪ್ರಧಾನೋಪಣಕ್ಕಾಗಿ ತೆಗೆಯಿಸಿದ 2 ರೂ. ಗಳು ಹೂವಿನಹಡಗಲಿ ಗುರುವೀರಾಂಕಿತರ ಶ್ರೀಯುತ ಸೊಪ್ಪಿನ ಗುರುಲಿಂಗಪ್ಪನವರ ದ್ವಾರಾ ತಲ್ಪಿರುತ್ತವೆ

ಅದನಾಧಿ ತಾ॥ ಹರೀಹರನಾಣದಲ್ಲಿರುವ ಶ್ರೀ॥ ಎಚ್ ಎಸ್ ಈಶ್ವರಯ್ಯನವರ ತಾಯಿಯವರು ತಿಂಥಿಣಿಗಳು 15ನೆಯ ತಾರೀಖಿನ ವಿವಸ ತಿಂಥಿನಿನಾದ ಸಮಯದಲ್ಲಿ ಪ್ರಧಾನೋಪಣಕ್ಕೆಯ್ತಾಸ್ಪರ ಸಮರ್ಪಿಸಿದ 1 ರೂಪಾಯಿಯ ಬೋರ್ಡ್ ಗರ್ಲ್ಸ್ ಸ್ಕೂಲ್ ಟೀಚರ್ ಎಂ. ದೊಡ್ಡಯ್ಯನವರ ದ್ವಾರಾ ತಲ್ಪಿರುತ್ತದೆ.

'ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇನೆ.

ದ್ದರೂ ಮಾವಿನ ಬೀಜವನ್ನು ಹಾಕಿದರೆ ಮಾವಿನ ಹಣ್ಣು, ಬೇವಿನ ಬೀಜವನ್ನು ಹಾಕಿದರೆ ಬೇವಿನ ಹಣ್ಣು ಸಿಗುವಂತೆ ಒಳ್ಳೇ ಕೆಲಸಮಾಡಿದವನಿಗೆ ಒಳ್ಳೇ ಫಲವು, ಕೆಟ್ಟಕೆಲಸಮಾಡಿದವನಿಗೆ ಕೆಟ್ಟ ಫಲವು ಸಿಗುತ್ತದೆ ಎಂದು ಆವರು ತಿಳಿದಿರುತ್ತಾರೆ ಆದುದರಿಂದ ಪ್ರಪಂಚದಲ್ಲಿರುವಕಷ್ಟ ಎಲ್ಲಾ ಮತಗಳ ಸಾಮಾನ್ಯತತ್ವವು ಒಳ್ಳೆಯದನ್ನು ಮಾಡು, ಕೆಟ್ಟದ್ದನ್ನು ಮಾಡಬೇಡ ಎಂಬುವದೇ ಆಗಿರುತ್ತದೆ ತಿಳ್ಳರಿಗೆ ಇರುವಿಕೆಯನ್ನು ಒಪ್ಪದೇ ಇರತಕ್ಕ ಮತೀಯರೂ ಕೂಡ ಕೆಟ್ಟದ್ದನ್ನು ಮಾಡತ ಬಳ್ಳೇ ದನ್ನೇ ಮಾಡುತ್ತಾ ಒಂದರೆ ಅನೆರಲ್ಲಿ ಪರಮೇಶ್ವರನ ಅನುಗ್ರಹವುಂಟಾಗಿ ಅವರಿಗೆ ತನ್ನಲ್ಲಿ ಭಕ್ತಿಯುಂಟಾಗುವ ಹಾಗೆಮಾಡಿ ಅವರಿಗೂ ಸಹ ತನ್ನ ಪಾದನಿಯನ್ನು ಕೊಡುತ್ತಾನೆ ಅದುದರಿಂದ ಸುಖದ ಆಸೆಗಾಗಿ ಯಾಗಿ ಶಾಸ್ತ್ರತತ್ವವನ್ನು ಸಿಖಿಸಿ ಮೊ ಮಲು ಸೇವನು ವವರೆಲ್ಲರೂ ಸಾಮಾನ್ಯವಾಗಿ ಪಾಪಕಾರ್ಯ ಗಳನ್ನು ಮಾಡದೆ ಪರೋಪಕಾರಾರ್ಥವಾದ ಧರ್ಮಕಾರ್ಯಗಳನ್ನೇ ಮಾಡತಕ್ಕವು ಆತ್ಮನೇ ಕಾಣಿಗುತ್ತದೆ

ಆವವರ್ಣ ಸಜ್ಞೀ ಆವರಣಕೆ ಸರಿಲಿ ಗುರುವಾಗಲಿ
ನೀಸಿ ವೈಸಿ ।
ಆಹುದರ ಜ್ಞಾನದೆ ಆವರಲ ಭೂಚಿಂದ ಜಾಸಿಸೊಲ್ಲಿಕೆ
ಹೋಗಬಿಸ್ಸಿಸಲು ದೇಗಾವೆಯ್ದಾದ ದೇರು ಟಿ ಜಿಸ್ಸಲ್ಲದೇ
ಆರು ಸಿರಿಯರ ಜಾಗು ವಿ ದ ವರಿಗಳು ಪಾಠಾರಿ ಕಿಲ
ಸದಸ್ಸಲಿಂಗನೆ॥

ಎಂಬುದಾಗಿ ಮಸ್ಸಿನ ಶ್ರೀ ಷಡಕ್ಷರಸ್ವಾಮಿಗಳು ಒಪ್ಪಿಸಿ ಕೊಟ್ಟರ ನಂತೆ ಒಬ್ಬ ದೇವರೇ ಆಯಾಯದೇಶ ಆಯಾ ಯಕಾಲ ಆಯಾಯ ಜನಗಳ ಸಂಸ್ಕೃತಿಗೆ ಅನುಸಾರ ವಾಗಿ ಆಯಾಯ ವೇಷವಭ್ಷಿ ಬಂದು ಆಯಾಯ ಮೆಚ್ಚ ವನ್ನು ಸ್ಥಾಪಿಸಿ ಆಯಾಯ ಮತೀಯರಿಗೆ ಗುರುವಾಗಿ ವ್ಹಾನೆ ಮತ್ತು ಅವರವರ ಭಾವನಾನುಸಾರ ಧರ್ಮವ ಹುತ್ತಾನೆ ಅಂದರೆ ಪ್ರತಿಯೊಂದು ಮತಕ್ಕೂ ಸ್ಥಾಪಕನುಂಟು ಈ ಸ್ಥಾಪಕರು ಸಾಮಾನ್ಯವಾಗಿ ಅವರ ಮತಕ್ಕೆ ಸಹಸ್ರ ವರ್ಷ ಅವಸಾಲಕ್ಕೆ ಜನಗಳು ಸಂಚಿತಿರಲಿಲ್ಲ ಆನಮೆಂದ ಪ್ರತಿಯೊಂದು ಮತಸ್ಥಾಪಕನು ಈಶ್ವರನ ಅವತಾರವೇ ಆಗಿದ್ದಾರೆ ಆವತಾರನೆಂದರೆ ಈಶ್ವರನು ತಿಲಾಸ ಮಡಿ ಕೆ ರ ವನ್ನು ಬಿಟ್ಟು ಭೂಲೋಕಕ್ಕೆ ಬಿಸಿದಿರುವಂತೆ ಕಳಿ ವೈಕುಂಠವನ್ನು ಬಿಟ್ಟು ಭೂಲೋಕಕ್ಕೆ ಬಿಸಿದಿರುವಂತೆ ಕಳಿ ಒಬ್ಬ ಪರಾಶಕ್ತಿಸಹಿತವಾದ ಈಶ್ವರನ ವಿಶಿಷ್ಟ ತವು ಸೇರತಕ್ಕದ್ದೇ ಅವತಾರ ಎಲ್ಲಾ ಮತಸ್ಥಾಪಕರು ಗಳು ಮತ್ತಾಪುರುಷರಾಗಿ ಇವರ ಸೂಲ್ಮ ಈಶ್ವರ ಎಲ್ಲಾ ಮತಗಳನ್ನು ಸ್ಥಾಪಿರುತ್ತಾನೆ ಪತ್ಯಾಸರು ಬೇರೆ ಬೇರೆ ಆಕಾರಲಿಂಗ ಪಾತ್ರೆಗಳನ್ನು ತೆಗದುಕೊಂಡು ಹು ನೀರನ್ನು ತರುವುದಕ್ಕೆ ಏಬಿಗೆ ಹೋಗುವ್ರಾರ ಸವಿಯಲ್ಲಿ ರತಕ್ಕ ನೀರಿಗೆ ಯಾವ ಆಕಾರವೂ ಇಲ್ಲ ಆಂದರೆ ಗಂಡಾಗಿಯಾಗಲಿ, ಹೆಂಣಾಗಿಯಾಗಲಿ ಆವವಾ ಇವಾವ ಆಕಾರ ಉಳ್ಳಾಗಿಯಾಗಲಿ ಇಲ್ಲ ಆದರೆ ಜನರು ತಂದಿರತಕ್ಕ ಪಾತ್ರೆಗಳ ಆಕಾರವನ್ನು ಹೊಂದಿ ಆವವರ ಕೆಲಸಕ್ಕೆ ಉಪಯೋಗವಾಗತಕ್ಕದ್ದೆ ಇವರಂತ ಈಶ್ವರನ ನಿಜವಾದ ಸ್ವರೂಪ ನಿರಾಕಾರವಾಗಿದ್ದರೂ ಭಕ್ತರ ಭಾವನಾನುಸಾರ ಆಯಾಯ ಆಕಾರಗಳನ್ನು ಹೊಂದಿ ಆವವರಲ್ಲಿ ಇವ್ಯಾಧರಗಳನ್ನು ಕೊಡುತ್ತಾನ

ಶ್ರುತಕ್ಕಾಗಲ್ಲಿಲ್ಲಾಗಲೆ ಬಂದು । ಸುತ ತಾಂಬ್ಯಕಲ್ಲಿ ಗರ
ಶಿಸಿದೆಂದು । ಮತ್ತೆ ತೆಲು ಜಲಿ ಗುಬಿಂದು ಮತ್ತೆ ತೆಲುದು
ನಂತಾಯಿಂದಂಗಿ । ಲ ನಾಶಾಬ್ಧಿಯಲ್ಲಿ ಪುನಃಪಡಿಂದು ।
ವೈಕಿಷಿಕರಿದಲ್ಲರಿಂದು । ಕೆಲಬು ಬ್ಲಾಧ್ಯರು ಕೂಸ್ಯಬು
ದೂರು । ಕೆಲಬರೆಂಬಿದು ವಿಖ್ಯಾತವಿದೆಂದು ॥ ಸಂಕಲ್ಪ ಬಗೆ
ಯುಳ್ಳಂತೆ ಶಂಸಿಸುವುದಾವರಿಂದಂತೆ । ಬಗೆಗೆಡಲಿಂಗಾಲ್ಲದೆ
ಯೊಂದು ಗುಣವಿಂ ನಿನೆ ಅಚ್ಚಾತ್ಮವಿಂದೆಂದು ॥

ಎಂಬುದಾಗಿ ಶ್ರೀಮನ್ಸಿಜಗುಣಶಿವಯೋಗಿಗಳು ಅಪ್ಪಣೆ ಕೊಟ್ಟರುವಂತೆ ಶುದ್ಧಜ್ಞಾನಸ್ವರೂಪನಾಗಿರತಕ್ಕ ಒಬ್ಬ ದೇವರನ್ನೇ ಉಪಾಸಿಸತ್ತುಗಳು ನಿರ್ಗುಣಬ್ರಹ್ಮ ಎಂಬ ದಾಗಿಯು ಆಗಮಗಳು ಪರವಿ ಎಂಬದಾಗಿಯು, ವೈಶವು ನಿಜಲಿಂಗ ಎಂಬದಾಗಿಯು ವೈಷ್ಣವರು ನಾರಾ ಯಣ ಎಂಬದಾಗಿಯು, ಸಾಂಖ್ಯರು ಪ್ರಕೃತಿ ಎಂಬ ದಾಗಿಯು ವೈಶೇಷಿಕರು ಈಶ್ವರ ಎಂಬದಾಗಿಯು, ಜೈನ್ಯರಲ್ಲಿ ಕೆಲವರು ಜೂನ ಎಂಬ ದಾಗಿಯು, ಇನ್ನು ಕೆಲವರು ವಿಘ್ನಾನೆಂಬುದಾಗಿಯು ಇನ್ನೂ ಇತರ ಮತೀಯರು ತಮ್ಮ ತಮ್ಮ ಪಸಿಸ್ಸಿಗೆ ತಕ್ಕಾಂತ ಹೆಸರು ಗಂದ ಕರೆಯುತ್ತಾರೆ

ಬ್ರಹ್ಮನೆಸಲಿ ಕವ ಸೃಸಿಸ್ತು ಪ್ರಬ್ರಹ್ಮನಮಾದಿಯ
ನರುಶ್ರುತ್ತ
ವಿಘ್ನನೆಂಬ ಜಗಮ್ಮಾರ್ ಗಂ ನೆಹ್ಮನಜನಿಗಳಂಲಾಲಿ
ಸುತ
ರುದ್ರನೆನಿಸಿ ಬಿಷ್ಣುಲಿಂಗತ್ತ ಕ್ಷುಪ್ರಪಶನಿನಿಸಂಹರಿಸುತ್ತ॥
ಈಶ್ವರನಿಸಿಯೆ ಜಲಿಸ್ಸಿಳ್ಳುತ್ತ ಶಾಶ್ವತಾಂಬ್ಯಗಳ ಸಂಪ್ರತ್ತ
ಸಾಯುಕ್ಯದಾಶಿವನಾಗಿ ಜಗತ್ತ ಪೋಷಿಂ ಸ್ಥಿಯ ಪಡಿಲಿ
ಯುತ್ತ ॥
ಸತ್ತಾಯಿಂಗ್ಗನ ಪೆಸ್ಸಿ ಲ ಚಿತ್ಪದ್ಮಾಸಂಂ ಲ್ಪಿಸಿ
ಕಂಪ

ಎಂಬುದಾಗಿ ಆದೀ ಶ್ರೀನನ್ನ ಜಗಣಿವಯೋಗಿಗಳು ಒಪ್ಪಣೆ ಕೊಟ್ಟರುವಂತೆ ಒಬ್ಬ ನುನುಷ್ಯನಿಗೆ ಆನೇಕ ಅಧಿಕಾರಗಳಿರುವದರಿಂ ಆವನು ಆಯಾಯ ಅಧಿಕಾರದ ಹಿಸರಿನಿಂದ ಆಯಾಯ ಅಧಿಕಾರಕ್ಕೆ ಸಂಬಂಧಪಟ್ಟು ಕೆಲಸ ಗಳನ್ನು ಹೇಗೆ ಮಾಡುತ್ತಾನೋ ಹಾಗೆ ಒಬ್ಬ ದೇವರೇ ಬ್ರಹ್ಮ ಎಂಬ ಹೆಸರಿನಿಂದ ಜಗತ್ತನ್ನು ಸೃಷ್ಟಿಸುತ್ತಾನೆ, ವಿಷ್ಣು ಎಂಬ ಹೆಸರಿನಿಂದ ಜಗತ್ತನ್ನು ಕಾಪಾಡುತ್ತಾನೆ, ರುದ್ರ ಎಂಬ ಹೆಸರಿನಿಂದ ಜಗತ್ತನ್ನು ಪ್ರಳಯಮಾಡು ತ್ತಾ ಒಂದೇ ದೇವ ಪ್ರತಿಯೊಂದು ಮತಕ್ಕೂ ಬೇರೆ ಬೇರೆ ದೇವರು ಇರುವ ಪ್ರಸ್ತಪಲ್ಲಿ ಆ ಆಗಂತಕದ್ದು ಆನೇಕ ವೈಪರೀತ್ಯಗಳು ಸಂಭವಿಸಿದ ಜನರಲ್ಲಿ ಆನೇಕ ದೇವರು ಗಳಿಗೆ ಪರಸ್ಪರ ಪೂಜೆ ಮಾಡಿ ಒಬ್ಬ ದೇವರು ಪ್ರಬಲವನ್ನು ಮಾಡಿದು ಇನ್ನೊಬ್ಬ ದೇವರು ಸೃಷ್ಟಿ ರನ್ನು ಒಬ್ಬ ದೇವರು ಸಪ್ಪಿಯನ್ನು ಮಾಡಿದರೆ ಇನ್ನೊಬ್ಬ ದೇವರ ಪ್ರಳಯವನ್ನು ಮಾಡಿ ಲೋಕದಲ್ಲಿ ಅವ್ಯವಸ್ಥೆಯನ್ನು ನಿರ್ಮಿಸುತ್ತಿದ್ದರು ಈ ಕಾರಣ ದಿಂದ ದೇವರು ಒಬ್ಬನಿರಬೇಕೇ ಹೊರತು ಅನೇಕ ದೇವರುಗಳಿರುವರು ಕೂಡಲ ಕೂಡದು

ಸ ಲೆ ಕಪ್ಪಲ್ಲ ಸಾರ್ಗಾರಿಗಂಕ್ಕಿ ಪ್ರಸಾದಗಳಿ
ಪ್ರವಿ ಸಂಸಾರಾನುವರಿಂದಲಿಂದಲು ಮತ್ತು ದೇವರು ನಾತ
ರಜಸೆತ್ವಾನುವರಿಂದಲು ದೇವರು ಸಿದಾಕಾರಾಗಿ ರುತ್ತಾನೆ
ದೇವರ ಎಲ್ಲಾ ಕಡೆಯೂ ಇರುವದರಿಂದ ಅವನು
ವಾಪಕ ಎಂಬ ಲಕ್ಷಣ ಪರಿಪೂರ್ಣನಾಗಿದ್ದಾನೆ ದೇವರು
ಲಾವಾಗಲೂ ಇರತಕ್ಕನಾದ್ದರಿಂದಲೂ, ಎಲ್ಲವನ್ನು
ತಿಳಿದವನಾದ್ದರಿಂದಲೂ, ದುಃಖವಿಲ್ಲದ ಆನಂದವಾಗಿರು
ವುದರಿಂದಲು ಸತ್ಯಜ್ಞಾನಾನಂದ ಸ್ವರೂಪನಾಗಿರುತ್ತಾನೆ
ಇದುದರಿಂದ ಹೇಳದಂತೆ ಇವನೇ ಪ್ರಪಂಚದಲ್ಲಿರುವತಕ್ಕ
ಸರ್ವಮತೀಯರಿಗೂ ಗುರುವಾಗಿಯು ಮತ್ತು ದೇವರಾ
ಗಿಯು ಇದ್ದಾನೆ ಹಿಂದೆ ಹೇಳಿದಂತೆ ಇವನನ್ನು ಹೊಂದಿ
ಆತ್ಯಂತಿಕವಾದ ದುಃಖವಿನೃತ್ತಿ ಮತ್ತು ನಿತ್ಯಾನಂದ
ಪ್ರಾಪ್ತಿ ಎಂಬ ಮೋಕ್ಷವನ್ನು ಪಡೆಯತಕ್ಕದ್ದೇ ಸರ್ವ
ಮತಗಳ ಮುಖ್ಯ ಗುರಿಯಾಗಿರುತ್ತ ಆದರೆ

ತ್ರಯಾ ಸಾಮ್ಯಂ ಹೋಗಾ ಪಶುಪತಿಮತಂ ಕೈಷ್ಣಮಿತಿ
ಪ್ರಭಿನ್ನೇ ಪ್ರಸ್ಥಾನೇ ಪರ ಮಿದ ಮದಃ ಪಥ್ಯಮಿತಿಚ ।
ರುಚೀನಾಂ ವೈಚಿತ್ರ್ಯಾದೃಜು ಕುಟಿಲ ನಾನಾಪಥಜುಷಾಂ ।
ನೃಣಾಮೇಕೋಗಮ್ಯ ಸ್ತ್ವಮಸಿ ಪಯಸಾನರ್ಣವ ಇವ ॥

ಎಂಬಂತೆ ನೆಟ್ಟಗೂ, ಸೂಜ್ಜಗೂ ಇರುವ ನಾನಾಮಾರ್ಗ ಗಳನ್ನು ಹಿಡಿದಿರುವ ನದಿಗಳೆಲ್ಲವೂ ಸಮುದ್ರವನ್ನು ಹೇಗೆ ಸೇರುತ್ತವೋ ಹಾಗೆ ರುಚಿಭೇದದಿಂದ ವಿವಿಧ ಮಾರ್ಗಗಳನ್ನು ಹಿಡಿದಿರುವ ಎಲ್ಲಾ ಮತೀಯರಿಗು ಪರಮೇಶ್ವರನೇ ಪ್ರತ್ಯಕ್ಷಸ್ವಾನವಾಗಿದ್ದಾನೆ ಆಂದರೆ ಕೆಲವು ಮತೀಯರು ಜಾಗ್ರತ್ತಿಯಾಗಿಯು ಮತ್ತೆ ಕೆಲವು ಮತೀಯರು ಸ್ವಪ್ನನವಾಗಿಯು ಪರಮೇಶ್ವರನನ್ನು ಹೊಂದುತ್ತಾರೆ ಒಬ್ಬ ಹುಡುಗನನ್ನು ಪಾಠಶಾಲೆಗೆ ಸೇರಿಸುವದಕ್ಕಾಗಿ ಅದರ ಮುಖ್ಯೋಪಾಧ್ಯಾಯರಲ್ಲಿ ಕರೆದುಕೊಂಡು ಹೋದರೆ ಆವನು ಅವನನ್ನು ಪರೀಕ್ಷಿಸಿ ಯಾವ ತರಗತಿಯಲ್ಲಿ ವಿದ್ಯಾಭ್ಯಾಸಮಾಡುವುದಕ್ಕೆ ಅರ್ಹನೋ ಆ ತರಗತಿಗೆ ಅವನನ್ನು ಸೇರಿಸುತ್ತಾರೆ ಅವನು ಆ ತರಗತಿಯ ಪಾಠಗಳನ್ನು ಕ್ರಮವಾಗಿ ಓದಿದರೆ ಮುಂದಿನ ತರಗತಿಗೆ ಹೋಗಿ ಆಲ್ಲಿಂದ ನಿಜಾನವಾಗಿ ಯಾಗಲಿ ಆಥವಾ ಜ್ಞಾನ್ಯತಿಯಾಗಿಯಾಗಲಿ ಕೊನೆಗೆ ತರಗತಿಯನ್ನು ಮುಟ್ಟುತ್ತಾನೆ ಪಾಠಶಾಲೆಯಲ್ಲಿರತಕ್ಕ ಎಲ್ಲಾ ತರಗತಿಗಳು ಕೊನೇ ತರಗತಿಗೆ ಹೇಗೆ ಸೋಪಾನ ಗಳೋ ಹಾಗೆ ಪರಮೇಶ್ವರನನ್ನು ಹೊಂದುವದಕ್ಕೆ ಎಲ್ಲಾ ಮತಗಳು ಸೋಪಾನಗಳಂತೆ ಇದರಿಂದ ಪರಮೇಶ್ವರನೂ ಕೂಡ ನಮಗೆ ಜನ್ಮವನ್ನು ಕೊಡು ವಾಗ ನಮ್ಮ ಸಂಸ್ಕಾರವನ್ನು ಪರೀಕ್ಷಿಸಿ ನಮ್ಮ ಸಂಸ್ಕಾ ರಕ್ಕೆ ತಕ್ಕ ಮತದಲ್ಲಿ ನಾವು ಹುಟ್ಟುವ ಹಾಗೆ ಮಾಡು ತ್ತಾನೆ ಕೆಲವು ಮತೀಯರು ದುಃಖಭಾವದಿಂದ ನನ್ನ ಮತವೇ ದೊಡ್ಡದು, ನಮ್ಮ ದೇವರೇ ದೊಡ್ಡ ವನು ಎಂಬುದಾಗಿ ಹೇಳುತ್ತಾ ಅನ್ಯಮತೀಯರನ್ನು ಮತ್ತು ಅವರ ದೇವರನ್ನು ದ್ವೇಷಿಸುತ್ತಾರೆ ಯಾರು ತಮ್ಮ ಮತವನ್ನು ಮತ್ತು ಇತರ ಮತಗಳನ್ನು ಚೆನ್ನಾಗಿ ತಿಳಿಯುತ್ತಾರೋ ಅವರು ಇದುವರಿಗೂ ಹೇಳಿದ ಕಾರಣ ಗಳಿಂದ ಅನ್ಯಮತವನ್ನಾಗಲಿ ಆಥವಾ ಅನ್ಯದೇವರನ್ನಾ ಗಲಿ ದ್ವೇಷಿಸುವದಿಲ್ಲ ಹಾಗೆ ದ್ವೇಷಿಸುವವರು ತಮ್ಮ ಮತವನ್ನಾಗಲಿ ಆಥವಾ ಇತರ ಮತಗಳನ್ನಾಗಲಿ ತಿಳಿದವರೇ ಅಲ್ಲ ಎಂಬುದು ಸ್ಪಷ್ಟವಾಗುವದು

ಆದುದರಿಂದ ಪ್ರತಿಯೊಬ್ಬರೂ ಅನ್ಯಮತೀಯರಲ್ಲಾ ಗಲಿ ಆಥವಾ ಅನ್ಯದೈವದಲ್ಲಾಗಲಿ ದ್ವೇಷವನ್ನಿಡದೆ "ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೇ ಭಯಾವಹಃ" ಎಂಬ ಶ್ರೀಮದ್ಭಗವದ್ಗೀತಾವಚನದಂತೆ ತಮ್ಮ ತಮ್ಮ ಮತದಲ್ಲೇ ಇದ್ದುಕೊಂಡು ತಮ್ಮ ತಮ್ಮ ಮತ ಧರ್ಮವನ್ನು ನಿಯಮಾ ಆಚರಿಸುತ್ತಲೂ, ತಮಗೆ ಇಷ್ಟ ವಾದ ಆಕಾರದಿಂದ ಈಶ್ವರನನ್ನು ಪೂಜಿಸುತ್ತಲೂ ಮತ್ತು ಧ್ಯಾನಿಸುತ್ತಲೂ, ಮನುಷ್ಯನೇ ಆದಿಯಾಗಿ ಯಾವ ಪ್ರಾಣಿಗೆ ಆಗಲಿ ಯಾವ ವಿಧವಾಗಿಯು ಹಿಂಸೆ ಯನ್ನು ಮಾಡದೆ ತನ್ನ ಕೈಲಾದಮಟ್ಟಿಗೆ ಕಷ್ಟಪಡತಕ್ಕ ಪ್ರಾಣಿಗಳಿಗೆ ಉಪಕಾರಮಾಡುತ್ತಲೂ ಇದ್ದರೆ ಲೋಕ ದಲ್ಲಿ ತಧರ್ಮವು ಹೋಗಿ ಪರಸ್ಪರ ಯುದ್ಧ, ಕ್ಷಾಮ, ರಾಂಕ್ಯಾಮಕಗೋಗಳಲ್ಲವೆ ಎಲ್ಲೂ ಈ ಲೋಕದಲ್ಲಿ ಸುಖವಾಗಿರವೆದಲ್ಲದೆ ಈ ಲೋಕವನ್ನು ಬಿಟ್ಟನಂತರವೂ ಅವರು ಈಶ್ವರಾನುಗ್ರಹದಿಂದ ಮುಖವಿಲ್ಲದ ಶಾಶ್ವತ ನಾದ ಆನಂದವನ್ನು ಹೊಂದುವರು

ಸರ್ವೇಶ್ವರರು ಸರ್ವರಿಗೂ ಮಂಗಳವನ್ನು ಉಂಟು ಮಾಡಲಿ

ಓಂ ತತ್ಸತ್

ದು ಖವಾರ್ತೆ

ಒಕ್ಕಾರಿ ಡಿ॥ ಹೊವಿವಹಡಗಲಿ ತಾಲೂಕು ದೇವ ಗೊಂಡನಹಳ್ಳಿ ಗ್ರಾಮದಲ್ಲಿ ಪ್ರಸಿದ್ಧರಾಗಿರುವ ವೇ॥ ಮರದ ಗನಿಯಯ್ಯನವರ ಧರ್ಮಪತ್ನಿಯವರಾದ ಶ್ರೀ ಮತಿ ದೊಡ್ಡಒಸಮ್ಮನವರು ತಮ್ಮ ೫೬ ನೆಯ ವರ್ಷ ದಲ್ಲಿ ತಾ॥ ೧೨ ೪ ೪೬ ನೆಯ ಮಂಗಳವಾರ ಶಿವಸಾ ಯುಜ್ಯವನ್ನು ಹೊಂದಿದರು ಇವರು ಮನೆಯಲ್ಲಿ ಗೃಹಲಕ್ಷ್ಮಿಯಂತೆ ರಾರಾಜಿಸುತ್ತ, ಪಾನಿ-ಧರ್ಮ-ಪರೋ ಪಕಾರ ಆತಿಥಿಸತ್ಕಾರ ಮುಂತಾದವುಗಳಲ್ಲಿ ನಿರತರಾಗಿದ್ದ ರ್ಲ್ಲದೆ, ಯಾವಾಗಲೂ ಗುರು-ಲಿಂಗ-ಜಂಗಮ ಪ್ರೇಮಿ ಗಳೂ ಆಗಿದ್ದರು ಸ್ವರ್ಗಾರೋಹಣ ತಾ॥ ೧೩ ೪-೪೬ ಕ್ಕೆ ದೊಡ್ಡ ಜಾತ್ರೆಯಂತೆ ನೆರವೇರಿತು ಎಂದು ಎಲ್ಲರ ಮುಖಮುದ್ರೆಗಳೂ ಕಳೆಗುಂದಿದ್ದವು ರುದ್ರಭೂಮಿ ಯಲ್ಲಿ ಅಂತಿಮಸಂಸ್ಕಾರವು ವಿಧ್ಯುಕ್ತವಾಗಿ ನೆರವೇರಿತು ಆ ಸಮಯದಲ್ಲಿ ಪ್ರಭಾವೋಪಣಕ್ಯೋಸ್ವರ ಪಂಚಾಕ್ಷರಿ ವೇ॥ ಹಿರೇಮಸುಕದ ರುದ್ರಯ್ಯನವರ ಹೇಳಿಕೆಯಂತೆ ಮೇರೆಗೆ ೨ ರೂ ಗಳನ್ನು ತೆಗೆಯಿಸಲಾಯಿತು

ಏವರ್ ಮಃಖಭಾಗಿ

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ವಿಲಿಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀಕಾಶೀಸಂಸ್ಥಾನಹಿರೇಮಠದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No. M 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಂಕಜಾತಜನಿತೆ ಪ ಜಾನ್ಯಶೀರಾಧಿಪೆ ಪಂಚಕ್ಲೇಶವಿನಾಶಕೆ ಪರತರಶ್ರೀಪಂಚಲಿಂಗೋದ್ಭವೆ ॥
ಪಂಚಾಚಾರನಿಯಾಮಕೆ ಪರಲಸತ್ಪಂಚಾಕ್ಷರೀಮೋದಕರ ಪಂಚಾಚಾರ್ಯಜ ದ್ಗುರುತ್ರ ಮುರವರ್ಷಾಲಿಪ್ಪುರೀಲೋಕಮಂ ॥

ಸ್ಥಳದವರಿಗೆ ೨ ರೂ ೪ ಆಣೆ ಪರರ್ಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೧೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೯ನೇ ಏಪ್ರಿಲ್ ೧೯೪೬ [ಸಂಚಿಕೆ ೫೦

ವೈರಾಗ್ಯದರ್ಪಣ

ಲೇ—ನೇ। ಪೆಲ್ಲಕಾರ್ಜುನಾಂಧ್ರ ಪಾಠಶಾಲೆಯ ವಿದ್ವಾನ್ ಮುದನೂರು)

(ಹಿಂದಿನಿಂದ ಮುಂದುವರಿದುದು)

ಯಾರು ಹೃದಯಬಲದಲ್ಲಿ ಕಣ್ಣಾಬಾಯಿಯಿಲ್ಲದೆ ಸೇರಿಕೊಂಡಿರುವ ಮನವೆಂಬ ಸರ್ಪವಂ ಜಯಿಸಲಾರದೆ ಸಂಸಾರ ಸಮುದ್ರಕ್ಕೆ ತೆರೆಗಳಂತಿರುವ ವಿಷಯಗಳಂ ಸೆಳೆಯಲ್ಪಡುವರೋ ಅವರಿಗೆ ಈ ಪ್ರಪ್ರಪಂಚೋಪದೇಶಂ ಕುರುಡನಿಗೆ ಉದ್ಯಾನವಂ ತೋರಿಸುವಂತೆಯೂ, ಕುಷ್ಠ ವ್ರಣದಿಂ ಮುಗಿಲ್ಲದವನಿಗೆ ವಾಸನೆಯಂ ತೋರಿಸುವಂತೆಯೂ, ಮದ್ಯಮನದಿಂ ಉನ್ಮತ್ತನಾದವನನ್ನು ಸಾಕ್ಷಿವಾದಕ್ಕೆ ಕರೆದಂತೆಯೂ, ಹೆಣವಂ ಕಂಡೆ, ಜನ ಸಮೂಹದ ಕಥೆಯಂ ಕೇಳುವಂತೆಯೂ, ವ್ಯರ್ಥವಾಗಿ ಹಾಸ್ಯಾಸ್ಪದವಾಗುವುದು ಪರಮಾರ್ಥವಾಗಿ ಇಲ್ಲದಿರುವ ಮನವಂ ಜಯಿಸದಿರುವನು, ಏಕವಂ ತ್ರಿನ್ನೆದೆ ವಿಷ ಮೂರ್ಛೆಯಂ ಹೊಂದುವನೆಂದು ತಿಳಿಯುವನಾಗು ಪ್ರಾಣಗಳ ಚಲನಶಕ್ತಿಯಿಂದಿಂದ್ರಿಯಗಳು ತಂತಮ್ಮ ವಿಷಯಗಳಂ ಗ್ರಹಿಸುವಲ್ಲಿ ಆತ್ಮನಿಗೆ ಆ ವಸ್ತುಜ್ಞಾನ ವಾಗುವುದು ಹೀಗಿರುವಲ್ಲಿ ಮದ್ಯದೊಳ್ಮನವೆಂಬ ಕಲ್ಪನೆಗೆ ಕಾರಣವೇನಿರುವುದು ಈ ವ್ಯವಹಾರ ಶಕ್ತಿಗ ಳೆಲ್ಲವೂ ಚಿತ್ಕೂರ್ಯನ ಕಿರಣಗಳಾದ್ದರಿಂದ ಮಘ ಪ್ರಾಣಾದಿಗಳು ಆ ಆತ್ಮನಿಗೆ ಭಿನ್ನವೆಂತಲೂ, ಮನಃ ಪ್ರಾಣಾದಿ ಶಬ್ದಗಳಿಗೆ ಆತ್ಮನೇ ವಾಚ್ಯನಾಗುವನೆಂಕಲೂ ವೇಳಲಶಕ್ಯನಾಗುವದು ಜೀವನೆಂಬ ಶಬ್ದಮಾತ್ರದಿಂದಲೇ ಜಗತ್ತೆಲ್ಲವೂ ಕುರುಡಾಗಿ ಪರಮಾರ್ಥವಂ ನೋಡದಿರುವದು ವ್ಯಾಪಕಭಾವದಿಂದಿರುವ ಚಿತ್ಪವೆಂಬುವದು ಜೀತನವಾದಲ್ಲಿ ಬೇರೆಯೆಂಬುವದು ಅಸಂತವಾಗು ವದು ಅಚೇತನವಾದಲ್ಲಿ ಇಂದ್ರಿಯಗಳಿಂತ ವಿಶೇಷ ಶಕ್ತಿಯುರಬೇಕು. ಆಯಾಯ ಇಂದ್ರಿಯಗಳ ಪಜಾಯ ದಿಂದಲೇ ರೂಪಾದಿ ಜ್ಞಾನಶಕ್ತಿಕಾಣುವದರಿಂದಲೂ, ಜ್ಞಾನಶಕ್ತಿ ಆತ್ಮನಿದಾದ್ದರಿಂದಲೂ, ಚಿತ್ಪವೆಂದು ಬೇರೆ ಪದಾರ್ಥವನ್ನ ಂಗೀಕರಿಸುವುದಕ್ಕೆ ಕಾರಣವಿಲ್ಲ ಅದು ಕಾರಣ ಜೀವ ಚಿತ್ಪಗಳೆರಡೂ ಅಸತ್ಕೆಂತಲೇ ತಿಳಿಯ ತಕ್ಕದ್ದು ಮಘನೆಂಬ ಬೇರೆ ಪದಾರ್ಥವನ್ನ ಂಗೀಕರಿ ಸಿರುವರ ದುಃಖವಂ ನೋಡಿ ಕರುಣೆಯಂ ನಿನ್ನ ಬ್ಯಿಯು ಮೂಢಭಾವದುದು ಅಜ್ಞಾನಿಗಳು ದುಃಖದ ಸ್ವರೂಪನನ್ನು, ಅದರ ಉತ್ಪತ್ತಿಯನ್ನು ಅದಕ್ಕೆ ಮುಖ್ಯವಾದ ಪದುರ್ಥವನ್ನು ಅದು ಬರುವುದಕ್ಕೆ ನಿಮಿತ್ತವನ್ನು ವಿಚಾರಿಸದೆ ವ್ಯರ್ಥವಾಗಿ ದುಃಖಪಡು ವುದಂ ನೋಡಿದರೆ ಅವರು ಕತ್ತೆಗಳಂತೆ ದುಃಖಪಡ ಲೊಸುಗನೇ ಪುಟ್ಟಿರುವರೆಂದು ತೋರುತ್ತಲಿದೆ ಮೃತ್ಯುವಿದಿಂ ಜಡಪ್ರಾಣಿಗಳು ನೀರ್ಕುಳ್ಳೆಗಳಂತೆ ನಾಶ ಕ್ಕೈಸುಗನೇ ಪುಟ್ಟುವವು ತಮಿಕರಿಂ ಪಶುಗಳು ವಾಯುವಿನಿಂ ಸೊಳ್ಳೆಗಳುಗುರುಗಳು, ಅಗ್ನಿಯಿಂ ಪತಂಗ ಗಳು ಬೇಡರಿಂ ಮೃಗಪಕ್ಷಿಗಳು, ದೊಡ್ಡ ಮೀನುಗಳಿಂ ಸಣ್ಣ ಮೀನುಗಳು, ನೊಣಗಳಿಂ ಕೂರೆಗಳು ಕಪ್ಪೆಗಳಿಂ ಹೊಣಗೆಗಳು, ಸರ್ಪಗಳಿಂ ಕಪ್ಪೆಗಳು, ನವಿಲು ಗರುಡ ಕೀರಗಳಿಂ ಸರ್ಪಗಳು, ಬೆಕ್ಕುಗಳಿಂ ಕೀರ ಇಲಿಗಳ, ನಾಯಿಗಳಿಂ ಬೆಕ್ಕುಗಳು, ಕರಡಿಗಳಿಂ ನಾಯಿಗಳು, ಸ್ಯಾಕ್ಸೆಗಳಿಂ ಕರಡಿಗಳು, ಸಿಂಹಗಳಿಂ ಹುಲಿಗಳು, ಶರಭಗಳಿಂ ಸಿಂಹಗಳು ಮೇಳಗಳಿಂ ಶರಭಗಳು, ಮಾಯು ಸಿಂಹಿಂ ಮೇಳಗಳು ಪ್ರತಿದಿನವದಲ್ಲು ಪ್ರತಿವಿಶೇಷದಲ್ಲು ಅನೇಕ ವಾಗಿ ಸಂಹರಿಸಲ್ಪಡುವವು ಆ ಮಯುವಂ ಗಿರಿಗು ತಡೆಯುವುವು ಗಿರಿಗಳ ರೆಕ್ಕೆಗಳಂ ವಜ್ರಾಯುಧವು ಕತ್ತರಿಸುವದು ಆ ವಜ್ರವು ಇಂದ್ರನ ಕೈಯಲ್ಲಿರುವುದು ಇಂದ್ರರು ವಿಷ್ಣುವಿಗೆ ಸ್ವಾಧೀನರಾಗಿರುವರು ಆ ಮಹಾ ವಿಷ್ಣುವು ಜಲಜಂತು ಮೊದಲಾದ ರೂಪವಂ ತಾಳು ನನು ನಿರಂತರದಲ್ಲು ನೊಳ್ಳೆ ಕೂರೆ ಜೇನು ಇರುವೆಗಳು ಹುಟ್ಟುವವು ನುತ್ತು ಭೂಮಿಯಲ್ಲಿ ವೃಶ್ಚಿಕ ಮೊದ ಲಾದ ಕ್ರಿಮಿಕೀಟಗಳು, ಅಂತರಿಕ್ಷದಲ್ಲಿ ವಿರ್ಗಾದಿಗಳು, ನವನದಲ್ಲಿ ಸಿಂಹಾದಿಗಳು, ಕಲ್ಲುಗಳಲ್ಲಿ ಭೇಣಾದಿಗಳು ಪುಟ್ಟುತಲಿರುವವು ಮತ್ತು ಪ್ರಾಣಿಗಳ ಅಂಗಗಳಲ್ಲೂ, ಆಮೇಧ್ಯದಲ್ಲಂ, ವೃಕ್ಷಾದಿ ಸ್ಥಾವರಯೋನಿಯಲ್ಲಿ ಸಹ ಅನೇಕ ಪ್ರಾಣಿಗಳು ಜನಿಕ ಪ್ರಕಾರವಾಗಿ ಪುಟ್ಟುವವು ಹೀಗೆ ಹುಟ್ಟಿ ಹುಟ್ಟಿ ಸಾಯುವ ಪ್ರಾಣಿಗಳ ವಿಷಯದಲ್ಲಿ ಕರುಣಾಶಾಲಿಗಳಾದಾಗ್ಯೂ ಸತ್ಪುರುಷರು ಏನು ಮಾಡು ವರು ನಿತ್ಯಮರಣವಾದ ಈ ಸಂಸಾರಸಂಭ್ರಮದಲ್ಲಿ ಕರ್ಮಭೋಕಗಳಂದುಸಯೋಗವೇನು ಇಲ್ಲ ವಿದ್ದಿರುವ ಪ್ರಾಣಿಗಳನ್ಯಾವನು ದುಃಖದಿಂ ಬಿಡಿಸಲಿಚ್ಛಿಸುವನೋ ಅವನ. ತನ್ನ ಭಕ್ತಿಯೆಂಬುದಾಕಾಶಕ್ಕೆ ಸೂರ್ಯತಾಪವಂ ತಡೆಯಲಿಚ್ಛಿಸುವನು ಮತ್ತು ಅವನು ಭೂಮಿಯ ನ್ನೆಲ್ಲವನ್ನೂ ಗುಡಿಸಲಿಚ್ಛಿಸುವನು ಮೋಟುಮರ ಗಳಿಗೆ ಕಥೆಯಂ ಪೇಳುವದು, ಪರುಗಳಂತೆ ನುನೋ ಧರಿಂದಿವೆಯೆಲ್ಲುವುದ ಜನಗಳಿಗೆ ಉಪದೇಶವಂ ಮಾಡುವದು ಸಹ ಸಮವೆನಿಸುವುದು ವಿಚಾರಪರವಾದ ಮನುಷ್ಯಜನ್ಮವಂ ಪಡೆದಾಗ್ಯೂ ನಾಶಕವಾದ ಕರ್ಮ ಗಳಲ್ಲೇ ಆಸಕ್ತರಾದ ಪ್ರಾಣಿಗಳಂ ನೋಡಿ ಕಲ್ಲು ಮರ ಗಳಂ ಸಹ ಮುಖಪಡುವವು ದುಷ್ಕರ್ಮವಿಲ್ಲದ್ದರಿಂ ಮೋರ್ಖರಿಂಂತಲೂ ಕಲ್ಲುಗಳು ಉತ್ತನುವೆಂದು ತೋರು ತಲಿದೆ. ಮನವಂ ಜಯಿಸಿ ಭೋಗವಲ್ಲಿ ಬೀಳದಿರುವನ ದುಮಿಳು ಹೋಗಲಾಡಿಸುವುದಕ್ಕೆ ಶಕ್ಯವಾದ್ದರಿಂದ ತೀವದವರು ಅವನಿಗೆ ಉಪದೇಶವಂ ಮಾಡಲಿಚ್ಛಿಸುವರು ಆದು ಕಾರಣವೆ ವಿಚಾರಪರನಾದ ನಿನಗೆ ಹಿತವಂ ನಾನು ಪೇಳುತ್ತಿರುವೆನು ಅನ್ಯಕಲ್ಪಿತವಾದ ವಿಷಭದಿಂ ಮತ್ತೊರ್ವನು ದಿಗಲುಪಡುವಂತೆ ಪ್ರಾಣಭಕ್ತಿಕಲ್ಪಿತ ವಾದ ಮನದಿಂ ನೀನು ದುಃಖಪರಿಪೇಡ ವಾರಸಂ ಪರಿಯಂ ಕಂಡವನು ಸ್ವಧರ್ಮವಂ ಮರೆತು ಭೋಗವಂ ಬಯಸುವಂತೆ ಪ್ರಾಣಶಕ್ತಿಯಲ್ಲಾಸಕ್ತನಾದ ಆತ್ಮನು ಸ್ವರೂಪವಂ ಮರೆತು ದೃಶ್ಯಸಂಕಲ್ಪವಂ ಮಾಡಿದ್ದರಿಂ ಆ ಸಂಕಲ್ಪವೇ ಮನೋರೂಪದಿಂದೆ ಈ ಸಂಸಾರವ ಕ್ಕೆಟ್ಟುಮಾಡಿರುವದು ಸಂಕಲ್ಪವಂ ನೀನು ಬಿಟ್ಟರೆ ಮಘವು ಪ್ರಪಂಚವು ಸಹ ಶಾಂತವಾಗುವದು ಕಟ್ಟು ಕೊಂಡಮ್ಮಾ ಕಪ್ಪವು ಬಿಟ್ಟುಸ್ಸೂ ಸುಖವು ಎನ್ನುವುದು ಅನುಭವಸಿದ್ಧವಾದ್ದರಿಂದ ವಿಚಾರಕ್ರಮದಿಂ ಸರ್ವವನ್ನೂ ಬಿಟ್ಟು ನಿತ್ಯಮುಕ್ತಸ್ವಭಾವದಿಂದಿರುವನಾಗು ನಾನೆಂಬು ನದ್ದರಿಂದಿದೆ ಬುವದು ಸಿದ್ಧನಾಗಿರುವದು ಇದಂಬು ವದನ್ನೇ ನಾನೆಂಬುವದು ಆಶ್ರಯಿಸಿಕೊಂಡಿರುವುದು ನಾನು ಇದೆಂಬ ಆತ್ಮಪ್ರಪಂಚಗಳ ಮಧ್ಯದಲ್ಲಿ ಉಭಯಾ ಧಾರವಾದ ಕಲ್ಪನೆ ಇರುವುದು ಆಒಂದುವಿಚಾರದಿಂದದಂ ನೀನು ಬಿಡಲು ನಾನು ಇಂಬು ಭೇದವಲ್ಲದ ಕೈವಲ್ಯವು ಸಿದ್ಧವಾಗುವದು ದೃಶ್ಯದರ್ಶನ ದೃಶ್ಯಾದಿ ತ್ರಿಸೃಷ್ಟಿ ಗಳಲ್ಲಿ ನಿರಾಲಂಬವಾದ ವ ದ್ಯಭಾಗವೇ ದೃಢವಾಗಿ ಪಿಡಿಯಲು ನಿರ್ವಿಕಲ್ಪವಾದ ಸ್ವರೂಪವು ಗೊತ್ತಾಗು ವುದು ಅದನ್ನೇ ಬೂಪಿಸುತ್ತಿರುವನಿಗೆ ಮರೆತಿದ್ದ ಒಡನೆಯಂತೆ ಕೈವಲ್ಯವು ಲಬ್ಧವಾಗುವುದು ವ್ಯಾಪಕ ವಾದ ನಿಜಸತ್ಪವಂ ನೋಡಿದೆ ಭಿನ್ನವಾಗಿ ದೃಶ್ಯವಂ ಪಿಡಿದದ್ದರಿಂದ ಸ್ವರೂಪನಂ ಮರೆತ ಆತ್ಮನೇ ಚಿತ್ತ ಭಾವವಂ ಹೊಂದುವನು ಆಗ ಸಮಸ್ತ ಸಂಸಾರವೂ ಉಂಟಾಗುವದು ಸಮಸ್ತ ಪದಾರ್ಥಗಳಗೂ ಒಂದೇ ಸತ್ಪವಾದ್ದರಿಂದ ಸರ್ವವೂ ಆತ್ಮನೆಂದು ನಿಶ್ಚಯವಾಗಲು ಮನ ಮೊದಲಾದ ಸರ್ವ ಪ್ರಪಂಚವೂ ಶಾಂತವಾಗು ವದು ಚಿತ್ಪಕ್ಕೊಂದು ಸತ್ಪವಿರ ವದೆಂಬ ನಿನ್ನ ಭಾವ ನೆಯೇ ಸಂಸಾರಕ್ಕೆ ಬೀಜವಾಗಿ ನಿನಗೆ ಬಂಧಕವಾಗುರು ವದು ಈ ಭಾವನೆಯಂ ಚಿತ್ಪಕ್ಕೊಂದು ಸತ್ಪತೋರು ವಲ್ಲಿ ನೀರು ಹಾಕಿದ ಬೀಜದಂ ಲತೆಯಂತೆ ಈ ಒತ್ತ ದಿಂದಲೇ ದಾಸದೋಷಜನಕವಾದ ಅಸೆಯುಂಟಾಗು ವದು ಜಾರಚೋರಾದಿ ಮತ್ಪುನಿಗನುಕೂಲವಾದ್ದ ರಿಂದಲೂ ದೃಶ್ಯಯಂ ತಡೆದು ಪದಾರ್ಥಗಳಲ್ಲಿ ವಿವರಿಂತ ಜ್ಞಾನವನ್ನುಂಟುಮಾಡುವುದರಿಂದಲೂ, ರೋಗಗಳಿಗೆ ವರ್ಧಕವಾದ್ದರಿಂದಲೂ, ಕತ್ತಲೆಯಂ ದಿಗಲುಬೀಳುವ ಪ್ರಾಣಿಗಳಿಗೆ ಮೃತ್ಯುರೂಪವಾದ್ದರಿಂದಲೂ ಭೂಮ್ಯಂತ ರಿಕ್ಷಗಳಲ್ಲಿ ಮಾಲಿನ್ಯವನ್ನುಂಟುಮಾಡುವುದರಿಂದಲೂ, ಅನಂತ ವಿಕಾರ ಕಾರಣವಾದ ವರ್ಷಾಕಾಲದ ಕೃಷ್ಣ ಪಕ್ಷದ ರಾತ್ರಿಗೆ ಸಮವಾದ ಈ ಅಸೆಯು ವಿಷದೆ ನಾಗಿಯಂತೆ ಮೋಹನವನ್ನುಂಟುಮಾಡುವದು ಹರಿ ಹರಾದಿಗಳು ಕಲ್ಪಾಗ್ನಿ ಜ್ವಾಲೆಗಳನ್ನು ಸಹ ತಡೆದಲ್ಲದೆ ಅಸೆಯಂ ತಡೆಯಲಿಲ್ಲವಾದ್ದರಿಂದ ಆಶಾಗ್ನಿ ಜ್ವಾಲೆಯಂ ಸಹಿಸುವುದಕ್ಕೆ ಯಾರೂ ಸಮರ್ಥರಲ್ಲವೆಂದು ತಿಳಿಯ ತಕ್ಕದ್ದು ತೀಕ್ಷ್ಣವಾಗಿಯೂ, ದೀರ್ಘವಾಗಿಯೂ, ಕಷ್ಟಾಗಿಯೂ, ಬೆಳಗುವ ಶಕ್ತಿಯು ಮುಟ್ಟಿಲು ತವುವಾ ಗಿರುವಂತೆ ಈ ಅಸೆಯು ಮೊದಲು ಸುಖವಾಗಿ ತೋರು ವದು. ಬಳಿಕ ಸರ್ಪವಂತೆ ಪ್ರಾಣವನ್ನೇ ಹಿರಿಯುವದು ಜಗತ್ತಿನಲ್ಲಿ ದುಃಖಗಳೆಷ್ಟಿರುವವೋ ಅವೆಲ್ಲವೂ ಈ ಆಶಾಲತೆಯ ಫಲಗಳೆಂದು ಪೇಳಲ್ಪಡುವವು

(ಸಶೇಷ)

ಶ್ರೀಮಜ್ಜಗದ್ಗುರುವಿಕೋರಾಮಾರಾಧ್ಯರ

ಹಾಗೂ

ಶ್ರೀಜಗದ್ಗುರು ದಾರುಕಾಚಾರ್ಯರ

ಜಯಂತೀಮಹೋತ್ಸವಗಳು

ವೈಶಾಖ ಶು॥ ೩ ಶನಿವಾರ ವೈಶಾಖ ಶು॥ ೫ ಸೋಮವಾರ

ಯಾವ ಸುಜಾತ್ರಾ ಭರತಖಂಡದಲ್ಲಿರತಕ್ಕ ಸಮಸ್ತಸಪ್ತಕ್ಷೇತ್ರ ಮಸ್ತಕಮಣೀ ಭೂತಗಳಾದ ಶ್ರೀದ್ರಾಕ್ಷಾರಾಮ, ಉಜ್ಜಯಿಪೀಕ್ಷೇತ್ರಗಳಲ್ಲಿ ವಿರಾಜಿಸುವ ಶ್ರೀಭೀಮನಾಥ, ಶ್ರೀಸಿದ್ಧೇಶ್ವರ ಮಹಾಲಿಂಗಗಳಿಂದವತರಿಸಿ, ಸರಮಾಣಿಕ್ಷೇತ್ರವಾದ ವೀರಶೈವಸಿದ್ಧಾಂತವನ್ನು ಭೂಮಂಡಲದಲ್ಲಿ ನೆಲೆಗೊಳಿಸಿ, ವ್ಯಾಸ, ದಧೀಚಿ ಮೊದಲಾದ ಅನಂತಜನ ಮಹರ್ಷಿಗಳನ್ನೂ, ಗೌತಮೇಂದ್ರ, ದೇವನಂದನ ಮೊದಲಾದ ಚಕ್ರವರ್ತಿಗಳನ್ನೂ ಶಿವಸಿದ್ಧಾಂತೋಪದೇಶದ್ವಾರಾ ಉದ್ಧರಿಸಿ ಲೋಕೈಕಪೂಜ್ಯರಾಗಿರುವರೋ, ಆಂಧ್ರ ಶ್ರೀಜಗದ್ಗುರು ವಿಕೋರಾಮಾರಾಧ್ಯರ ಹಾಗೂ ಶ್ರೀಜಗದ್ಗುರು ದಾರುಕಾಚಾರ್ಯರ ಜಯಂತೀಮಹೋತ್ಸವಗಳು ಇದೇ ವೈಶಾಖ ಶುಕ್ಲಪಕ್ಷದಲ್ಲಿ ಪ್ರಾಪ್ತವಾಗುವುದರಿಂದ ಸರ್ವ ಗುರುಭಕ್ತರೂ ಈ ಜಯಂತೀಮಹೋತ್ಸವಗಳನ್ನು ಅತ್ಯಂತ ವೈಭವದಿಂದ ನೆರವೇರಿಸಬೇಕು. **ವೈಶಾಖ ಶು॥ ೩ ಶನಿವಾರ ತಾ॥ ೪-೫-೧೯೪೬** ನೆಯ ದಿವಸ ಶ್ರೀಜಗದ್ಗುರು ವಿಕೋರಾಮಾರಾಧ್ಯರ ಜಯಂತೀಮಹೋತ್ಸವವನ್ನೂ, **ವೈಶಾಖ ಶು॥ ೫ ಸೋಮವಾರ ತಾ॥ ೬-೫-೧೯೪೬** ನೆಯ ದಿವಸ ಶ್ರೀಜಗದ್ಗುರು ದಾರುಕಾಚಾರ್ಯರ ಜಯಂತೀ ಮಹೋತ್ಸವವನ್ನೂ ನೆರವೇರಿಸಬೇಕು. ಈ ಮೊದಲು ಈ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿದಂತೆ ಭರತಖಂಡದಲ್ಲಿರುವ ಲಕ್ಷೋಪಲಕ್ಷ ಜನ ಶುದ್ಧಸಂಪ್ರದಾಯದ ವೀರಶೈವರು ಶ್ರೀಜಗದ್ಗುರು ರೇಣುಕಾಚಾರ್ಯರ ಹಾಗೂ ಪಂಡಿತಾರಾಧ್ಯ, ವಿಶ್ವಾರಾಧ್ಯರ ಜಯಂತೀ ಮಹೋತ್ಸವಗಳನ್ನು ಆಯಾಯ ಪವಿತ್ರದಿನಗಳಲ್ಲಿ ಅತ್ಯಂತ ಭಕ್ತಿಯಿಂದಲೂ, ವೈಭವದಿಂದಲೂ ನೆರವೇರಿಸಿದ ವಿಷಯವು ಈ ಪತ್ರಿಕೆಯಿಂದ ಸರ್ವರಿಗೂ ವೇದ್ಯವೇ ಆಗಿದೆ. ಶುದ್ಧಸಂಪ್ರದಾಯದ ವೀರಶೈವರು ಸದ್ಯಃ ಪ್ರಾಪ್ತವಾಗಿರುವ ಆಚಾರ್ಯರ ಜಯಂತೀ ಮಹೋತ್ಸವಗಳನ್ನು ಅತ್ಯಂತ ಭಕ್ತಿಯಿಂದಲೂ, ಉತ್ಸಾಹದಿಂದಲೂ, ವೈಭವದಿಂದಲೂ ನೆರವೇರಿಸಿ, ಜಗದಾಚಾರ್ಯರ ಕೃಪೆಗೆ ಪಾತ್ರರಾಗಬೇಕೆಂದು ಹಾರೈಸುತ್ತೇವೆ.

ವರ್ತಮಾನಸಂಗ್ರಹ

ಮಂತ್ರಿಮಂಡಲಗಳು

ಈಗ ಎಲ್ಲಾ ಪ್ರಾಂತಗಳ ಚುನಾವಣೆಗಳೂ ಮುಗಿದು ಮಂತ್ರಿಮಂಡಲಗಳು ಪ್ರಾರಂಭವಾಗಿವೆ. ಭಾರತದ ಎಲ್ಲಾ ಪ್ರಾಂತಗಳಲ್ಲಿಯೂ ಕಾಂಗ್ರೆಸ್ ನವರು ಹೆಚ್ಚುನುಂದಿ ಬಂದಿರುವುದರಿಂದ ಅಲ್ಲಿ ಕಾಂಗ್ರೆಸ್ ಮಂತ್ರಿಮಂಡಲಗಳು ಪ್ರಾರಂಭವಾಗಿವೆ. ಬಂಗಾಲದಲ್ಲಿ ಮುಸ್ಲಿಂಲೀಗ್‌ನವರು ಹೆಚ್ಚು ಜನ ಬಂದಿರುವುದರಿಂದ ಅಲ್ಲಿ ಮುಸ್ಲಿಂ ಲೀಗಿನ ಮಂತ್ರಿಮಂಡಲ ಸ್ಥಾಪಿತವಾಗಿದೆ.

ಹೂವರ್ ಅವರ ಸಂಚಾರ

ಪ್ರಪಂಚದಲ್ಲೆಲ್ಲಾ ಈ ವರ್ಷ ಕ್ಷಾಮದ ಭೀತಿ ತಲೆದೋರಿದೆಯಷ್ಟೆ ! ಅದಕ್ಕಾಗಿ ಇದನ್ನೆಲ್ಲಾ ನೋಡಿಕೊಳ್ಳಲು ಒಂದು ಸಮಿತಿ ಏರ್ಪಾಡಾಗಿದೆ. ಅದಕ್ಕೆ ಮಿ॥ ಹರ್ಬರ್ಟ್ ಹೂವರ್' ಎಂಬವರು ಕಾರ್ಯದರ್ಶಿಗಳು. ಇವರು ಈಗಾಗಲೇ ಧಾನ್ಯ ಕಡಿಮೆಯಾಗಿ ಕಷ್ಟಬಂದಿರುವ ಸುಮಾರು ೧೭ ದೇಶಗಳಲ್ಲಿ ಸಂಚರಿಸಿದ್ದಾರೆ. ಈಗ ನಮ್ಮ ಭಾರತಕ್ಕೆ ಬಂದಿದ್ದಾರೆ. ನಮ್ಮ ಸಂಸ್ಥಾನಕ್ಕೂ ಸಹ ಬಂದು ಕ್ಷಾಮಪೀಡಿತ ಸ್ಥದೇಶಗಳನ್ನೆಲ್ಲಾ ನೋಡಿಕೊಂಡು ಹೋದರು. ಇಲ್ಲಿಯ ಕಷ್ಟವನ್ನು ಕಣ್ಣಾರೆ ನೋಡಿದ ಮೇಲೆ ನಮಗೆ ಹೆಚ್ಚು ಧಾನ್ಯ ಕಳುಹಿಸಬಹುದು ಎಂದು ಎಲ್ಲರ ನಂಬಿಕೆ.

ಪ್ರಕಾಶಂರವರ ಚುನಾವಣೆ

ಮೊನ್ನೆ ಮದರಾಸಿನಲ್ಲಿ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೇ ಬಹುಮತಬಂದಿದೆ. ಶ್ರೀ ಸಿ. ರಾಜಗೋಪಾಲಾಚಾರಿಯವರು ಈ ಸಂಸ್ಥೆಯ ಒಬ್ಬ ಮುಖ್ಯ ಮುಖಂಡರು. 'ಅವರನ್ನೇ ಕಾಂಗ್ರೆಸ್ ಪಕ್ಷದ ನಾಯಕರನ್ನಾಗಿ ಆರಿಸಿ' ಎಂದು ರಾಷ್ಟ್ರಪತಿ ಆಜಾದರೂ, ಮತ್ತು ಪಟೇಲರೂ ಸದಸ್ಯರಿಗೆ ಸಲಹೆ ಮಾಡಿದರು. ಗಾಂಧಿಯವರ ಬೆಂಬಲವೂ ಅವರಿಗೇ ಇತ್ತು. ಆದರೆ ಮದರಾಸಿನ ಕಾಂಗ್ರೆಸ್ ಮುಖಂಡರಿಗೆ ಇದು ಸರಿಬೀಳಲಿಲ್ಲ. ಅವರು ಶ್ರೀ॥ ಟಿ. ಪ್ರಕಾಶಂ ಎಂಬವರನ್ನು ನಾಯಕರನ್ನಾಗಿ ಆರಿಸಿದ್ದಾರೆ. ಮದರಾಸ್ ಪ್ರಾಂತಕ್ಕೆ ಅವರು ಮುಖ್ಯಮಂತ್ರಿಯಾಗಲಿರುವರು.

ಶ್ರೀ॥ ರಾಮಸ್ವಾಮಿ ಮೊದಲಿಯಾರರು

ಇಂಡಿಯಾ ಸರ್ಕಾರದಿಂದ ಅಮೇರಿಕಾಕ್ಕೆ ಆಹಾರಸಲಹೋಗ ಹೋಗಿರಲಿಲ್ಲವೇ ? ಆ ನಿಯೋಗದಲ್ಲಿ ನಮ್ಮ ದಿವಾನ್‌ರವರಾದ ಶ್ರೀ॥ ಮಾಧವರಾಯರೂ ಇದ್ದರೆಂಬ ವಿಷಯ ತಮಗೆ ತಿಳಿದಿದೆ. ಆ ನಿಯೋಗದ ಮುಖಂಡರೇ ಶ್ರೀ॥ ರಾಮಸ್ವಾಮಿ ಮೊದಲಿಯಾರರು. ಇವರು ವೈಸರಾಯ್ ಮಂತ್ರಿಮಂಡಲದ ಸದಸ್ಯರೂ ಹೌದು. ಶ್ರೀ ಮೊದಲಿಯಾರರು ನಮ್ಮ ಸಂಸ್ಥಾನಕ್ಕೆ ಈ ವಾರ ಬಂದು ಆಹಾರಪರಿಸ್ಥಿತಿಯನ್ನು ಪರೀಕ್ಷಿಸಿ ಸೂಕ್ತಸಲಹೆಗಳನ್ನು ಕೊಟ್ಟು ಸಹಾಯ ಮಾಡುವುದಾಗಿ ಧರವನೆ ಇತ್ತರು.

ಮಂತ್ರಿಗಳ ನಿಯೋಗ

ನಿಯೋಗದವರು ಈಸ್ಟರ್ ರಜವನ್ನು ಮುಗಿಸಿ ಬುಧವಾರದ ದಿನ ದೆಹಲಿಗೆ ಹಿಂತಿರುಗಿದ್ದಾರೆ. ಪುನಃ ಕಾಂಗ್ರೆಸ್ ಮತ್ತು ಲೀಗ್ ಮುಖಂಡರೊಡನೆ ಮಾತುಕತೆಗಳನ್ನು ಮುಂದುವರಿಸಿದ್ದಾರೆ. ಎರಡು ಪಂಗಡಗಳಿಗೂ ಒಪ್ಪಂದನುಡಿಸಲು, ಬಹಳ ತ್ರಾಸು ಪಡಿಸುವರೆಂದು ತಿಳಿದುಬಂದಿದೆ. ಪ್ರಸ್ತಪದಲ್ಲಿಯೇ, ತಾತ್ಕಾಲಿಕವಾಗಿ ಹಿಂದು ಕೇಂದ್ರ ಸರಕಾರವನ್ನು ರಚಿಸುವರೆಂದೂ ಇದಕ್ಕೆ ಎಷ್ಟೇ ತೊಂದರೆಗಳಿದ್ದರೂ ಅವನ್ನು ಎದುರಿಸುವರೆಂದೂ ತಿಳಿದುಬಂದಿದೆ.

ಬೆಂಕಿಪೆಟ್ಟಿಗೆಯ ಬೆಲೆ ಇಳಿಯುತ್ತದೆ

ಆಗಸ್ಟ್ ತಿಂಗಳಿನಿಂದ ಬೆಂಕಿಪೆಟ್ಟಿಗೆಯ ಬೆಲೆಯನ್ನು ೯ ಕಾಸಿನಿಂದ ೬ ಕಾಸಿಗೆ ಇಳಿಸಲಾಗುವುದೆಂದು ಭಾರತದ ಸರ್ಕಾರ ಪ್ರಕಟಿಸಿದೆ.

ಸಂಸ್ಥಾನದಲ್ಲಿ ಮಳೆ

ಮೈಸೂರು ಸಂಸ್ಥಾನದಲ್ಲಿ ಜೆನ್ನಾಗಿ ಮಳೆ ಆಗಿದೆ. ಕಳೆದ ವರ್ಷಕ್ಕಿಂತ ಈ ವರ್ಷ ಮಳೆ ಹೆಚ್ಚಾಗಿದೆ. ಮುಖ್ಯವಾಗಿ ಮೈಸೂರು, ಹಾಸನ, ಮಂಡ್ಯ ಜಿಲ್ಲೆಗಳಲ್ಲಿ ಹೆಚ್ಚು ಮಳೆ ಬಿದ್ದಿದೆ.

ದಿವಾನರ ದೆಹಲಿಪ್ರವಾಸ

ದಿವಾನರಾದ ಪ್ರಧಾನಶಿರೋಮಣಿ ಶ್ರೀ ಎನ್. ಮಾಧವರಾಯರು ಏಪ್ರಿಲ್ ೨೨ ನೇ ಶಾರೀಖು ಸೋಮವಾರ ವಿಮಾನದಲ್ಲಿ ದೆಹಲಿಗೆ ಹೋದರು. ಆವರು ದೆಹಲಿಯಿಂದ ಬಂದನೇಲೆ ಆಹಾರಶಾಪೆಯನ್ನು ಅವರೇ ವಹಿಸಿಕೊಳ್ಳುವರು ಎಂದು ಹೇಳಲಾಗಿದೆ.

ಸಂಸ್ಥಾನದಲ್ಲಿ ಹೆಚ್ಚು ಆಹಾರ ಬೆಳೆಯಲು ಯೋಜನೆ

ಸಂಸ್ಥಾನದಲ್ಲಿ ಹೆಚ್ಚು ಆಹಾರ ಬೆಳೆಯಲು ಸರ್ಕಾರದವರು ರೈತರಿಗೆ ಅನೇಕ ಪ್ರೋತ್ಸಾಹಗಳನ್ನು ಕೊಡುತ್ತಿದ್ದಾರೆ. ಈಗ ರೈತರು ಆಹಾರ ಧಾನ್ಯಗಳನ್ನು ವಿದ್ಯುಚ್ಛಕ್ತಿಯ ಸಹಾಯದಿಂದ ಬೆಳೆದರೆ, ಆ ಧಾನ್ಯಕ್ಕೆ ಪಲ್ಲಾ ಒಂದಕ್ಕೆ ಈಗ ಕೊಡುತ್ತಿರುವ ಬೆಲೆಗಿಂತ ೨ ರೂ. ಹೆಚ್ಚು ಕೊಡಬೇಕೆಂದು ಸರ್ಕಾರದವರು ತೀರ್ಮಾನಿಸಿದ್ದಾರೆ. ಆದರೆ ನಮ್ಮ ಸಂಸ್ಥಾನದಲ್ಲಿ ವಿದ್ಯುಚ್ಛಕ್ತಿಯ ಸಹಾಯದಿಂದ ಧಾನ್ಯ ಬೆಳೆಯುತ್ತಿರುವವರು ಬಹಳ ಕಡಿಮೆ. ಏಕೆಂದರೆ ಅದರಿಂದ ಅವರಿಗೆ ಹೆಚ್ಚು ಆದಾಯವಿರುವುದಿಲ್ಲ. ಅಲ್ಲದೆ ಟ್ಯಾಕ್ಟರುಗಳು ಬಹಳ ದುಬಾರಿ. ಆದಕ್ಕಾಗಿ ಸರಕಾರದವರು ಟ್ರಾಕ್ಟರುಗಳ ಬೆಲೆಯನ್ನು ಶೇ. ೩೫ ರಷ್ಟು ಇಳಿಸಬೇಕೆಂದು ಮೈಸೂರು ಉಪಸಮಿತಿಯವರು ಸಲಹೆಕೊಟ್ಟರು. ಸರಕಾರದವರು ಈ ವಿಷಯವಾಗಿ ಒಪ್ಪಿಗೆಯಿತ್ತರೂ ಶೇ. ೩೫ ರಿಯಾಯಿತಿ ಕೊಡುವುದರ ಬದಲು ವಿದ್ಯುಚ್ಛಕ್ತಿಯಿಂದ ಬೆಳೆವ ಬೆಳೆಗೆ ಹೆಚ್ಚು ಬೆಲೆ ದೊರಕಿಸಿಕೊಡುವುದು ಉಚಿತವೆಂದು ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ಸಂಸ್ಥಾನದಲ್ಲಿ ಜುಲೈ ತಿಂಗಳವರೆಗೂ ದಾಸ್ತಾನಿದೆ

ಸಂಸ್ಥಾನದ ಆಹಾರ ಪರಿಸ್ಥಿತಿಯು ವರದಿ ಈಗ ಪ್ರಕಟವಾಗಿದ್ದು, ಸಂಸ್ಥಾನದಲ್ಲಿ ಈಗಿರುವ ದಾಸ್ತಾನು ಜುಲೈ ತಿಂಗಳ ಕೊನೆಯವರೆಗೆ ಸಾಕಾಗುವುದೆಂದು ಹೇಳಲಾಗಿದೆ.

ಸಂಸ್ಥಾನದಲ್ಲಿ ಜಾನುವಾರುಗಳ ಅಭಿವೃದ್ಧಿ ಯೋಜನೆ

ನಮ್ಮಸಂಸ್ಥಾನದಲ್ಲಿ ಜಾನುವಾರುಗಳ ಅಭಿವೃದ್ಧಿಗಾಗಿ ೫ ವರ್ಷಗಳ ಯೋಜನೆಯೊಂದನ್ನು ವೈದ್ಯಕಾರ್ಯದ ಇಲಾಖೆಯವರು ತಯಾರಿಸಿದ್ದಾರೆ. ಅದರಂತೆ ಜಾನುವಾರುಗಳನ್ನು ಜೆನ್ನಾಗಿ ಸಾಕುವವರಿಗೆ ೧೫೦ ಬೀಜದ ಹೋರಿಗಳನ್ನು ಉಚಿತವಾಗಿ ಕೊಡಬೇಕು. ಮತ್ತು ಖಾಸಗಿಯಾಗಿ ಸಾಕುವವರಿಗೆ ೧೫೦ ಹೋರಿಗಳನ್ನು ಸಾಕಲು ವರ್ಷಕ್ಕೆ ೧೦೦ ರೂ. ಗಳನ್ನು ಕೊಡಬೇಕು. ಇದರಿಂದ ೫ ವರ್ಷದಲ್ಲಿ ೨ ಲಕ್ಷ ಜಾನುವಾರುಗಳಾಗುವುವು. ಜಾತಿವನಗಳ ಅಭಿವೃದ್ಧಿಗಾಗಿ ಸಂಸ್ಥಾನದಲ್ಲಿ ೭ ಕೇಂದ್ರಗಳನ್ನು ತೆರೆಯಬೇಕು. ಶಿವಮೊಗ್ಗ ಜಿಲ್ಲೆ ಬೊಂದನ್ನು ಬಿಟ್ಟು ಉಳಿದ ಎಲ್ಲಾ ಜಿಲ್ಲೆಗಳಲ್ಲೂ ಕುರಿ ಕೇಂದ್ರಗಳನ್ನು ತೆರೆಯಬೇಕು. ಇದಕ್ಕಾಗಿ ೩೦೦ ಬಿಕಾನೇರ್ ಟಗರುಗಳನ್ನು ತರಿಸಿಕೊಡಬೇಕು. ಬೆಂಗಳೂರು, ಹಾಸನ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ೧೦೦ ಹೆಸು ಗಳಿರುವ ೩ ಹಾಲಿನ ಕೇಂದ್ರಗಳನ್ನು ಸ್ಥಾಪಿಸಬೇಕು. ಸಂಸ್ಥಾನದಲ್ಲಿ ೨೪ ಜೇನು ಸಾಕುವ ಕೇಂದ್ರಗಳನ್ನು ತೆಗೆಯಬೇಕು. ದನಕರುಗಳ ನೈದ್ಯ ಚಿಕಿತ್ಸೆಗಾಗಿ ಎರಡು ಹೊಬರಗಳಿಗೆ ಒಂದರಂತೆ ಪ್ರತಿವರ್ಷ ೨೧ ಹೊಸದಾಗಿ ನೈದ್ಯಶಾಲೆಗಳನ್ನು ತೆಗೆಯಬೇಕು.

ಭಾರತದ ಆಹಾರದ ಬಗ್ಗೆ ಹೂವರ್‌ರವರ ಅಭಿಪ್ರಾಯ

೨೪ ನೆಯ ತಾರೀಖಿನ ಸಾಯಂಕಾಲ ಬೊಂಬಾಯಿಯ ಸರಕಾರದ ಭವನದಲ್ಲಿ ಕಾಂಗ್ರೆಸ್ ಮಂತ್ರಿಮಂಡಲದವರು ಮಿ॥ ಹೂವರ್‌ರವರನ್ನು ಕಂಡು ಮಾತನಾಡಿದರು. ಭರತಖಂಡವು ಈ ಮಹಾಯುದ್ಧದಲ್ಲಿ ಸೇನೆ ಸಲ್ಲಿಸಿರುವುದಂದ ಜನರಿಗೆ ಹೊಟ್ಟೆತುಂಬ ಆಹಾರವಿಲ್ಲದಿದ್ದರೂ ಕ್ಷಾಮಬಾಧೆಯಿಂದ ಅವರು ನರಳುತ್ತಿರುವಾರದೆಂದು ಕಾಂಗ್ರೆಸ್ ಮಂತ್ರಿ ಮಂಡಲದವರು ಮಿ॥ ಹೂವರ್‌ರವರಿಗೆ ತಿಳಿಸಿದರು.

ಭಾರತವನ್ನು ಪ್ರಸಂಚದ ದೃಷ್ಟಿಯಿಂದ ನೋಡುವುದಾದರೆ ಅದರ ಪರಿಸ್ಥಿತಿಯು ನಿಜವಾಗಿಯೂ ಉತ್ತಮವಾಗಿದೆ. ಯಾಕಂದರೆ, ಭಾರತೀಯರಲ್ಲಿ ಪ್ರತಿಯೊಬ್ಬನಿಗೂ ೧೨ ಔನ್ಸು ಧಾನ್ಯ ದೊರಕುತ್ತದೆ. ಜರ್ಮನಿಯಲ್ಲಾ ದರೋ ೫ ಔನ್ಸು ಮಾತ್ರ ದೊರೆಯುತ್ತದೆ. ಆದಾಗ್ಯೂ ಭಾರತದ ಪರಿಸ್ಥಿಯನ್ನು ಸಹಾನುಭೂತಿಯಿಂದ ನೋಡಲಾಗುವುದು. ಎಂದು ಮಿ॥ ಹೂವರ್‌ರವರು ಭರವಸೆ ಇತ್ತರು.

ಭಾರತದ ಆಹಾರಾಭಾವವ ವಿಷಯದಲ್ಲಿ ಅಮೆರಿಕದ ಧೋರಣೆ

"ಭಾರತದ ಜನಸಾಂದ್ರತೆ ಮಿತಿಮೀರಿರೋಗಿದೆ; ಕೋಟ್ಯಂತರ ಜನರಿರುವ ಅಲ್ಲಿ ಸಹಸ್ರಾರು ಜನ ಕ್ಷಾಮದಿಂದ ಸತ್ತರೆ ಅಂತಹ ವ್ಯಸನವೇನೂ ಆಗುವುದಿಲ್ಲ ಎಂಬುದಾಗಿ ಅಮೇರಿಕದವರು ಭಾವಿಸಿರುವುದು ವಿಷಾದಕರ. ಭಾರತದಲ್ಲಿ ಒಡಗಬಹುದಾದ ಕ್ಷಾಮದ ವಿಷತ್ಸನ್ನು ಹೋಗಲಾಡಿಸಲು ಅಮೆರಿಕನ್ ಅಧಿಕಾರಿಗಳು ಸಕಾಲದಲ್ಲಿ ನೆರವು ನೀಡದೆ ಅಲಕ್ಷ್ಯದಿಂದ ಇದ್ದಾರೆ" ಎಂದು ಭಾರತೀಯ ಆಹಾರ ನಿಯೋಗದ ಸದಸ್ಯ ಸರ್ ಮಣಿಲಾಲ್ ನಾನಾವತಿಯವರು ತಿಲಿಸಿ ಘೋರ್ ಅತೃಪ್ತಿಯಿಂದ ಭಾರತಕ್ಕೆ ಹಿಂತಿರುಗಿದರು ಎಂಬುದಾಗಿ ಅಸೋಸಿಯೇಟೆಡ್ ಪ್ರೆಸ್ ಆಫ್ ಅಮೆರಿಕ ತಿಳಿಸಿದೆ.

ಬ್ರಿ॥ ಮಂತ್ರಿಗಳಿಂದ ನಿಯೋಗದ ಮಾತುಕತೆ

ಬ್ರಿಟಿಷ್ ಮಂತ್ರಿಮಂಡಲದ ನಿಯೋಗದವರು ದೆಹಲಿಯಲ್ಲಿ ಹಲವುನಾಯಕರುಗಳೊಂದಿಗೆ ಮಾತುಕತೆಗಳನ್ನು ಮುಂದುವರೆಸುತ್ತಿದ್ದಾರೆ. ಪ್ರಜಾಪ್ರಭುತ್ವದ ಮೂಲ ತತ್ವವನ್ನು ಭಾರತದಲ್ಲಿ ಆಚರಣೆಗೆ ತರಬೇಕೆಂಬುದನ್ನು ಮರೆತು ನಿಯೋಗದವರು ವಿವಿಧ ಕೋಮಿನವರಲ್ಲಿ ಸರಿಸಮಾನತೆಯ ಕಾಂಕ್ಷೆಯನ್ನು ತರಲು ಯತ್ನಿಸುತ್ತಿದ್ದಾರೆ. ಮುಸ್ಲಿಂ ಲೀಗ್ ಮತ್ತು ಕಾಂಗ್ರೆಸ್ ಒಪ್ಪಂದಕ್ಕೆ ಬರಲು ಮಾತುಕತೆ ನಡೆಸಲು ಲೀಗಿನವರು ಆಜಾದರ ಬದಲು ಗಾಂಧಿಯವರನ್ನು ಇಷ್ಟಪಡುತ್ತಿದ್ದಾರಂತೆ ! ಆದರೂ ರಾಷ್ಟ್ರೀಯ ಸಂಸ್ಥಾವಸ್ಥಾಪನೆಯು ಇನ್ನು ೧೫ ದಿವಸಗಳಲ್ಲಿ ಆಗಬಹುದೆಂದು ನಿರೀಕ್ಷಿಸಲಾಗಿದೆ.

೪॥ ಲಕ್ಷ ಮದುವೆಯಾಗುವ ನಿರೀಕ್ಷೆ

ಆಜಾದ್ ಹಿಂದ್ ಫೌಜಿನ ಸೇನಾಧಿಕಾರಿ ೮॥ ಈ ಸೇನೆಗಾಲು ಇಷ್ಟರಲ್ಲೇ ರೂಪಾಯಿಣಿ ಪಡೆಯ ಸೇನಾನಿ ೮॥ ಈ ಲಕ್ಷ್ಮಿಸ್ವಾಮಿನಾರ್ಥರವರನ್ನು ಮದುವೆ ಮಾಡಿಕೊಳ್ಳುವೆರೆಂದು ಹೇಳಲಾಗಿದೆ.

ಆದರ್ಶ ವಿವಾಹಮಹೋತ್ಸವ

ಚಿಕ್ಕಮಗಳೂರು ತಾಲ್ಲೂಕು, ಕೆಳಗೂರು ಪಾ॥ ಮತ್ತು ಕಾಫೀ ಪ್ಲಾಂಟರು ಮೆ॥ ರಾ॥ ಶ್ರೀ ಕೆ. ವೀರಪ್ಪಗೌಡರ ಪುತ್ರ ಮೆ॥ ರಾ॥ ಶ್ರೀ ಕೆ. ವಿ. ವೇಪಪ್ಪಗೌಡರಿಗೆ, ಬೆಂಗಳೂರು ಜಿಲ್ಲಾ ಧಿಕಾರಿಗಳಾದ ಶ್ರೀಮಾನ್ ಎ. ಸಿ. ನಿರ್ವಾಣಿ ಗೌಡರ ಪುತ್ರಿ ಚಿ॥ ಪಾ ಕುಂ॥ ಶೋಭಾಕ್ಷಿ ಗಂಗಮ್ಮನೆಂಬ ವಧುವನ್ನು ತಂದು ತಾ॥ ೨೧-೪-೪೬ ನೇ ಭಾನುವಾರ ಬೆಂಗಳೂರು ಮಲ್ಲೇಶ್ವರದಲ್ಲಿರುವ ವಧುವಿನ ಸ್ವಗೃಹದಲ್ಲಿ ಅತಿ ವಿಜೃಂಭಣೆಯಿಂದ ವಿವಾಹಮಹೋತ್ಸವವು ನಡೆಯಿತು. ಶ್ರೀಮದ್ಭಾಲಭೂರಿಜಗದ್ಗುರು ಮಹಾಸ್ವಾಮಿಗಳವರಿಂದ ಶ್ರೀಲಮಂತ್ರಿಕ್ಷತಾಶೀರ್ವಾದ ನಿರೂಪವು ದಯಪಾಲಿಸಲ್ಪಟ್ಟಿದ್ದಿತ್ತಲ್ಲದೆ, ವಧೂವರರ ಪರವಾಗಿ ಸಾವಿರಾರು ಆಶೀರ್ವಚನಪುಷ್ಪಗಳಿಂದ ಅಭಿನಂದನ ಸಂದೇಶಗಳು ಕಳುಹಿಸಲ್ಪಟ್ಟಿದ್ದವು. ಈ ಸಮಾರಂಭಕ್ಕೆ ದಿವಾನರ ಪತ್ನಿಯವರೂ, ಮಿಥಿಪ್ಪರು ಗಣಾದಿಯಾಗಿ ಸ್ಥಾನಿಕ ಉನ್ನತ ಹಾಧಿಕಾರಿಗಳಿಲ್ಲರೂ ದಯಮಾಡಿಸಿ ತಮ್ಮ ಸಂತೋಷಾತಿಶಯವನ್ನು ವ್ಯಕ್ತಗೊಳಿಸಿದರು. ಈ ಸಮಾರಂಭದಲ್ಲಿ ಆದರ್ಶನೀಯ ವಾದುದೆಂದರೆ ಎಲ್ಲವೂ ಆಹಾರ ಮಿತವ್ಯಯದ ಕಾನೂನಿಗೊಳಪ್ಪು ನಡೆಸಿದುದು, ಶುಭೋತ್ಸವ ಕಾರ್ಯಗಳನ್ನು ಮಾಡತಕ್ಕ ಸ್ಥಾನಿಗೂ ಅನುಕರಣೀಯವಾಗಿದೆ.

ಒನ್ ವಿವಾಹಮಹೋತ್ಸವಧಾನಿ

ಸ್ವೀಕಾರ

ಚಿಕ್ಕಮಗಳೂರು ತಾಲ್ಲೂಕು ಕೆಳಗೂರು ಮೆ॥ ಪಾ॥ ಮತ್ತು ಕಾಫೀಪ್ಲಾಂಟರು ಶ್ರೀ॥ ಕೆ. ವೀರಪ್ಪಗೌಡರ ಪುತ್ರ ಮೆ॥ ರಾ॥ ಶ್ರೀ॥ ಕೆ. ವಿ. ವೇದಪ್ಪಗೌಡರಿಗೆ ನಿಲ್ಲೂರು ಡಿಪ್ಯುಟಿಕಮಿಷನರ್ ಶ್ರೀಮಾನ್ ಎ. ಸಿ. ನಿರ್ವಾಣಿ ಗೌಡರ ಪುತ್ರಿ ಚಿ॥ ಸೌ॥ ಗಂಗಮ್ಮನೆಂಬ ವಧುವನ್ನು ತಂದು ನಡೆಸಿದ ವಿವಾಹಸಮಾರಂಭದಲ್ಲಿ ಸ್ವಯಾಪೋಷಣಾ ಕ್ಯೋಸ್ಕರ ಮೆ॥ ಶ್ರೀ॥ ಕೆ. ವೀರಪ್ಪಗೌಡರು ಸಮರ್ಪಿಸಿದ 5 ರೂ. ಗಳು ವಸ್ತ್ರದೆ ಪಟೇಲ ಶ್ರೀ॥ ತಾಡೇಗೌಡರ ದ್ವಾರಾ ತಲ್ಪಿರುತ್ತವೆ.

ಗದಗ ಬೆಟಗೇರಿಯಲ್ಲಿರುವ ಮೆ॥ ರಾ॥ ಸೋಮಪ್ಪ ಪೊಟ್ಟಿ ಇವರ ತಮ್ಮನ ಪುತ್ರಿ ಚಿ॥ ಸೌ॥ ಗೌರವ್ವನನ್ನು ಮೆ॥ ರಾ॥ ಮುಂಡ್ಯ ದೇವಣಿ ಇವರ ಪುತ್ರ ಚಿ॥ ಪ್ರಭಣ್ಣನಿಗೆ ಕೊಟ್ಟು ನೆರವೇರಿಸಿದ ವಿಶ್ವಯಹಾರ್ಯದಲ್ಲಿ ವಧೂವರರಿಂದ ಸಮರ್ಪಿಸಲ್ಪಟ್ಟ 2 ರೂ. ಗಳು ಮೆ॥ ರಾ॥ ಬೇರೇರಿ ಮಲ್ಲಿಕಾರ್ಜುನಪ್ಪನವರ ದ್ವಾರಾ ತಲ್ಪಿರುತ್ತವೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಕಾಶಿಯಲ್ಲಿ ಅನಾಹುತ

ಕಾಶಿಯ ಪಟ್ಟಿರ ಇರುವ ಲೋಹಪಾತ್ರೆ ವಿಸರ್ಜನ ಶಿಬಿರದಲ್ಲಿ ಏಪ್ರಿಲ್ ೩೪ನೆಯ ತಾರೀಖು ಸುಧ್ಯಾಸ್ಪ ಸ್ಫೋಟನವಾಗಿ ೮ ಜನ ಸತ್ತರೆಂದೂ ೧೯ ಮಂದಿಗೆ ಗಾಯವಾಗಿದೆಯೆಂದೂ ತಿಳಿಯಬಂದಿದೆ.

ಲಂಚ ತಿಂದ ಐ. ಸಿ. ಎಸ್. ಅಧಿಕಾರಿಗೆ ೩ ವರ್ಷ ಶಿಕ್ಷೆ

ಮಿಡ್ನಾಪುರದ ಅಡಿಷನಲ್ ಜಿಲ್ಲಾ ಮ್ಯಾಜಿಸ್ಟ್ರೇಟ್ ರಾಗಿದ್ದ ಶ್ರೀ ಟಿ. ಎ. ಮೇನರ್ ಐ. ಸಿ. ಎಸ್. ರವರು ಲಂಚ ತೆಗೆದುಕೊಂಡ ಅಪಾದನೆಗಾಗಿ ೩ ವರ್ಷ ಕಠಿಣ ಸಜಾ, ೫೦೦೦ ರೂ. ಜುಲ್ಮಾನೆ ಶಿಕ್ಷೆ ವಿಧಿಸಲ್ಪಟ್ಟಿದ್ದಾರೆ.

ಬೊಂಬಾಯಿ ಪ್ರಾಂತದ ಉಪಾಧ್ಯಾಯರಿಗೆ ರಿಯಾಯಿತಿ

ಬೊಂಬಾಯಿ ಸರಕಾರನವರು ಒಂದು ಪ್ರಕಟನೆಯನ್ನು ಹೊರಡಿಸಿ ಬೊಂಬಾಯಿ ಪ್ರಾಂತದ ಸ್ಥಳೀಯ ಸಂಸ್ಥೆಗಳ ಅಧಿಕಾರ ವ್ಯಾಪ್ತಿಗೆ ಒಳಪಟ್ಟ ಪ್ರಾಥಮಿಕ ಶಾಲಾ ಉಪಾಧ್ಯಾಯರುಗಳಿಗೆ ಸರಕಾರದವರು ಕೊಡುವ ದರದ ಮೇಲೆ ತುಟ್ಟಿಭತ್ಯವನ್ನು ೧೯೪೬ ನೇ ಜೂಲೈ ತಿಂಗಳ ಲಾಗಾಯಿತು ಸೇರಿಸಿ ಕೊಡಬೇಕೆಂದು ಆಜ್ಞೆ ಮಾಡಿದ್ದಾರೆ. ಇದಕ್ಕೆ ತಗಲುವ ವಿಶೇಷ ಖರ್ಚನ್ನು ಸಂಸ್ಥಾರದವರೇ ನಿರ್ವಹಿಸಿಕೊಳ್ಳುವರು. ಮುಂಬೆ ಬರುವ ಬೇಸಿಗೆ ರಜಾಕ್ಕೆ ಬದಲಾಗಿ ಉಪಾಧ್ಯಾಯರು ಮುಷ್ಕರ ಹಿಡಿದಿದ್ದ ಕಾಲವನ್ನು ರಜವನ್ನಾಗಿ ಭಾವಿಸತಕ್ಕದ್ದೆಂದು ಆಜ್ಞೆ ಮಾಡಿದ್ದಾರೆ.

ಮುಸ್ಸೋಲಿನಿಯ ಶವ ಮಾಯವಾದ ಪ್ರಸಂಗ

ಮುಸ್ಸೋಲಿನಿಯ ಶವವನ್ನು ಹೂಳಿದ್ದ ಪ್ರದೇಶದಲ್ಲಿ ಜಪವೆ ನಡೆಸುತ್ತಿದ್ದವರ ಪೈಕಿ ಇಬ್ಬರನ್ನು ಸೆರೆ ಹಿಡಿಯಲಾಗಿದೆ. ತನಿಖೆ ಮುಂದುವರೆಸಲು ಈಗಲೇ ಥಳಕ್ಕೆ ಮುಂಚಾಗಾರಿಯು ಉಪ್ಪೇರಿದಿಂದ ಇನ್ನೊಬ್ಬರ ಹೆಸರನ್ನು ಸ್ಥಳೀಯರು ಬಾಯಿ ಬಿಟ್ಟಿಲ್ಲ ಎಂದು ಒಳಾಡಳಿತ ಮಂತ್ರಿಗಳು ತಿಳಿಸಿದ್ದಾರೆ.

ಜಪಾನ್ ಚಕ್ರವರ್ತಿಗಳು

ಜಪಾನಿ ಚಕ್ರವರ್ತಿ ಹಿರೋಹಿಟೋರವರು ಒಂದು ರೀತಿ ನವ್ಯವರ್ತಿಯಾಗಿರಬೇಕೆಂದು ಜಪಾನಿ ಪ್ರಜೆಗಳು ಜನೇಸ್ಪಿಸುತ್ತಾರೆಂದು ಹೇಳಲಾಗಿದೆ. ಮತ್ತು ಹಿರೋಹಿಟೋರವರು ಜನಸಾಮಾನ್ಯರ ನುಡಿ ಓಡಿಯಾಡುವ ನೆಲವನ್ನೂ ಜನರು ಮೊನ್ನೆ ಒಬ್ಬ ನಾವಿಕನಿಗೆ ತಮ್ಮ ಆಟ್ ಕೆಗೆಮ ನಂದಿಸಿವ್ವನ್ನೂ ಜನರು ನೋಡಿ ಬಹಳ ಆನಂದಿಸಿದರು. ಆದರೆ ಕಮ್ಯುನಿಸ್ಟರು ಮಾತ್ರ ಹಿರೋಹಿಟೋರವರ ಬಗ್ಗೆ ಇನ್ನೂ ವೈರಭಾವನೆಯನ್ನೇ ಇಟ್ಟುಕೊಂಡಿದ್ದಾರೆ. ಜಪಾನ್ ಚಕ್ರವರ್ತಿಯು ಮೊಟ್ಟ ಮೊದಲನೆಯ ಯುದ್ಧ ಖಾತಕೆಯೆಂದು ಅವರ ಮತ.

ಸಿದ್ಧಾಂತ ಶಿಖಾಮಣಿ

ವೀರಶೈವಮತಕವಲ್ಲಿ ಜನ್ಮಧಾರಣಮಾಡಿದ ಶ್ರುತಿಯೊಬ್ಬ ನಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣವಂತಿರುವುದು. ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರುವೀರಾಣಾಚಾರ್ಯರು ಜಗದ್ವಿಖ್ಯಾತರಾದ ಆಗಸ್ತ್ಯಾನುಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶವಾಗಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು ವೀರಶೈವಮತದಲ್ಲಿ ಸಸ್ಕೃತ. ದೊರೆಯತಕ್ಕ ಗ್ರಂಥಗಳೆಲ್ಲೆಲ್ಲ ಇದೇ ಬಹು ಪುರಾತನಗ್ರಂಥವೆಂದು ಹೆಸರಿಸಿಕೊಂಡು ಮೆರೆಯುತ್ತಿರುವುದು. ಈ ಗ್ರಂಥವು ಈಗ್ಗೆ ಸುಮಾರು **೨೫೦೦ವರ** ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವುದು ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭವಾಗಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ. ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥ ಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಈ ಗ್ರಂಥವನ್ನು ಓದಿನೋಡಿದನಂತರ ಸಂದಿತರ ವ್ಯಾಖ್ಯಾನದ ಮಹತ್ವವು ಪಾಠಕರಿಗೆ ಕೈವಲ್ಯವಾಗುವುದು. ಪಾಠಕರ ಆನುಕೂಲ್ಯಕ್ಕಾಗಿ ಬಹು ಶ್ರಮವಹಿಸಿ ಸಿದ್ಧಪಡಿಸಿ ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು ೪೩೩ ಪುಟಗಳಿಂದ ಕೂಡಿದ್ದು, ಸರ್ವಾಂಗ ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರುವೀರಾಣಾಚಾರ್ಯರ ಲೀಲಾತ್ಮಕವಾದ ಮನೋಹರಘಟಾಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. ಕೈಲಕ್ಷಲ್ಪತವಿಸಾತಿಯ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು. **ಬೆಲೆ ೨ ರೂಪಾಯಿ.**

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಸಟ (೩ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೮ನೆಯ ಆವೃತ್ತಿ)	೩ ಆಣೆ
ತ್ರೈಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೩ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೩ನೆಯ ಆವೃತ್ತಿ)	೩ ಆಣೆ
ಬಸವಾದಿಸಿಜಶತಪ್ರದರ್ಶಣ (೪ನೆಯ ಆವೃತ್ತಿ)	೩ ಆಣೆ
ಶ್ರೀರೇಣುಕಾಚಾರ್ಯಶತಕ (೩ನೆಯ ಆವೃತ್ತಿ)	೩ ಆಣೆ
ಶ್ರೀಗುರುಶತಪ್ರಪದಗಳು (೩ನೆಯ ಆವೃತ್ತಿ)	೩ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೩ ಆಣೆ
ಶಿವತತ್ತ್ವವಿಲಾಸ	೩ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಕೈವೋಪನಿಷತ್ಸಂಗ್ರಹ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮನಿಮರ್ಶತತ್ತ್ವಸ್ಪಿರೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ-ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ, ಚಿತ್ರಸಹಿತ)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರೆ (೩ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಸರಿಭಾಷಾ (ಸಂಸ್ಕೃತ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾಗಿರುವ ೩ನೆಯ ಆವೃತ್ತಿ)	೧೫ ರೂ.
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ.
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ.
ಶ್ರೀಕರಭಾಷ್ಯಂ (ಸಂಸ್ಕೃತ)	೧॥ ರೂ.
ಸಚಿತ್ರ ರೇಣುಕವಿಜಯ (೩ನೆಯ ಆವೃತ್ತಿ)	೧॥ ರೂ.
ವೀರಶೈವರತ್ನ (೩ನೆಯ ಆವೃತ್ತಿ, ೩೦ ಮಹತ್ವದ ಸ್ತೋತ್ರಗಳಿರುವುವು)	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೨ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ.
ಶಿವಾಗಮಸಂಗ್ರಹ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ.
A brief life-sketch of Pandit Sri Kashinatha Shastriji (*English*)	**4 As**
The Philosophical Aspect of Virasaivism (*English*) ...	**8 As.**
Speeches by Pandit Shri Kashinatha Shastriji (*English*)	**12 As**
ಲಿಂಗಧಾರಣಚಂದ್ರಿಕಾ (ಸಂಸ್ಕೃತ)	**೩ ಕ.**
ವೀರಶೈವಾಕ್ಷ (ಮರಾಠಿ)	**೧ ಕ.**
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	**೧ ಕ.**
ಸಿದ್ಧಾಂತಶಿಖಾಮಣಿ (ಮೂಲ)	**೮ ಆ.**
ಸಂಧಿಕೌಮುದೀಕಾರಿಕಾ (ಸಂಸ್ಕೃತ)	**೨ ಆ.**

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪ ಚಾಚಾರ್ಯಾನನವಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ . ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೇಶ್ವರರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ ಪಂಚಾಜಾದ್ಯಜಗದ್ಗುರೂತ್ತಮವರರ್ ಪಾಲಿಸ್ಪಶ್ರೀಲೋತಮಂ ॥

ಸ್ಥಳದವರಿಗೆ ೩ ರೂ. ೪ ಆಣೆ. ಪರದೇಶದವರಿಗೆ ೫ ರೂ. ವಿ. ಪಿ. ಖರ್ಚು ಸೇರಿ ೫ ರೂ. ೪ ಆಣೆ

ಸಂಪುಟ ೨೦] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೬ನೇ ಮೇ ೧೯೪೬ [ಸಂಚಿಕೆ ೧

ಮಾಂಸಭಕ್ಷಣೆಯಿಂದುಂಟಾಗುವ ಅನರ್ಥಗಳು

(ಮೈಸೂರಿನಲ್ಲಿರುವ ಆಕ್ಸಿಲಿಯರಿ ಮಿಲಿಟರಿ ಆಫೀಸರ್ ಆಗಿರುವ)
ಶ್ರೀಯುತ ಎಂ. ಎಲ್. ನಾಗಭೂಷಣರವರಿಂದ

ಕೆಲವು ಮತೀಯರಿಗೆ ಮಾಂಸಭಕ್ಷಣೆಯನ್ನು ಮಾಡುವ ಅಭ್ಯಾಸವುಂಟು. ಇದರಿಂದ ಅವರು ಪ್ರಾಣಿಗಳನ್ನು ಹಿಂಸೆಮಾಡಿ ಅದರ ಫಲವಾದ ದುಃಖವನ್ನು ಅನುಭವಿಸುತ್ತಾರೆ. ಆದರೆ, ಮಾಂಸಭಕ್ಷಣೆಯನ್ನು ಮಾಡುವವರಲ್ಲಿ ಕೆಲವರು ತಾನೇ ಪ್ರಾಣಿಗಳನ್ನು ಕೊಲ್ಲದೆ ಇತರರು ಕೊಂದು ಮಾರುವ ಮಾಂಸವನ್ನು ಭಕ್ಷಿಸುತ್ತಿರುವ್ದರಿಂದ ಕೊಂದವರಿಗೆ ಪಾಪ ಉಂಟಾಗುತ್ತದೆಯೇ ಹೊರತು ತಮಗೆ ಪಾಪದ ಸಂಬಂಧವಿಲ್ಲವೆಂದು ಹೇಳುತ್ತಾರೆ. ಅವರು ಹೀಗೆ ಹೇಳುವುದು ಸರಿಯಲ್ಲ. ಎತಕ್ಕೆಂದರೆ, ಒಬ್ಬನು ಕೊಲೆ ಮಾಡಲ್ಪಟ್ಟರೆ ಅವನನ್ನು ಕೊಂದವನಿಗೆ ಎಷ್ಟು ಶಿಕ್ಷೆಯೋ ಕೊಳ್ಳಿಸಿದವನಿಗೂ ಅಷ್ಟು ಶಿಕ್ಷೆಯನ್ನು ನ್ಯಾಯಾಧೀಶರು ವಿಧಿಸುವಂತೆ ಮಾಂಸಭಕ್ಷಣೆಯನ್ನು ಮಾಡುವವರಿಗೂ ಕೊಲ್ಲುತಕ್ಕವರಿಗೆ ಎಷ್ಟು ಪಾಪವು ಬರುತ್ತದೋ ಅಷ್ಟು ಪಾಪವು ಮಾಂಸ ಭಕ್ಷಣೆ ಮಾಡಿದವರಿಗೂ ಉಂಟಾಗುತ್ತದೆ. ಮಾಂಸಭಕ್ಷಕರಿಗೋಸ್ಕರ ಪ್ರಾಣಿಗಳನ್ನು ಕೊಲ್ಲುವವರು ಮಾಂಸಭಕ್ಷಕರಿಲ್ಲದಿದ್ದರೆ ಅವುಗಳನ್ನು ಕೊಲ್ಲುತ್ತಿರಲಿಲ್ಲ. ಮಾಂಸ ಭಕ್ಷಣೆಯನ್ನು ಮಾಡುವವರಲ್ಲಿ ಇನ್ನು ಕೆಲವರು ದೇವರು ಇತರ ಪ್ರಾಣಿಗಳನ್ನು ಮನುಷ್ಯನ ಉಪಯೋಗಕ್ಕೋಸ್ಕರವೇ ಸೃಷ್ಟಿಸಿರುವುದರಿಂದ ಅವುಗಳನ್ನು ಕೊಂದು ಅವುಗಳ ಮಾಂಸವನ್ನು ಭಕ್ಷಿಸುವದರಿಂದ ತಮಗೆ ಯಾವ ಪಾಪವೂ ಉಂಟಾಗುವುದಿಲ್ಲವೆಂದು ಹೇಳುತ್ತಾರೆ. ಮನುಷ್ಯೇತರ ಪ್ರಾಣಿಗಳನ್ನು ಆಯಾವರ ಕರ್ಮಗಳಿಗನುಸಾರ ದೇವರು ಸೃಷ್ಟಿಸಿರುತ್ತಾನೆಯೇ ಹೊರತು ಅವುಗಳನ್ನು ಮನುಷ್ಯರಿಗೋಸ್ಕರ ಸೃಷ್ಟಿಸಿಲ್ಲ. ಮನುಷ್ಯೇತರ ಪ್ರಾಣಿಗಳಲ್ಲಿ ಕೆಲವು ಮನುಷ್ಯರಿಂದ ಉಪಯೋಗಿಸಲ್ಪಡುತ್ತಿರುವದು ನಿಜವಾದರೂ ಮನುಷ್ಯರ ಭಕ್ಷಣೆಗೋಸ್ಕರ ಅವುಗಳನ್ನು ದೇವರು ಸೃಷ್ಟಿಮಾಡಿಲ್ಲ. ಅಂದರೆ, ಹಸು ಮತ್ತು ಎಮ್ಮೆಗಳಿಂದ ಹಾಲಿನ, ಎತ್ತು ಮತ್ತು ಕೋಣಗಳಿಂದ ವ್ಯವಸಾಯದ, ಕುರಿಗಳಿಂದ ತುಬುಟದ, ಕುಳುರೆ, ಒಂಟೆ, ಆನೆ ಇವುಗಳಿಂದ ಪ್ರಯಾಣದ, ಇತರ ಪ್ರಾಣಿಗಳಿಂದ ಇತರ ವಿಧವಾದ ಪ್ರಯೋಜನವನ್ನು ಮನುಷ್ಯರು ಹೊಂದಬಹುದು. ಹಾಗಲ್ಲದೆ, ಮನುಷ್ಯರು ಮಾಂಸಭಕ್ಷಣೆಯನ್ನು ಮಾಡುವದಕ್ಕೋಸ್ಕರವೇ ದೇವರು ಇತರ ಪ್ರಾಣಿಗಳನ್ನು ಸೃಷ್ಟಿಸಿದ್ದಾನೆಂದು ಹೇಳುವ ಪಕ್ಷಕ್ಕೆ ಮನುಷ್ಯರು ಮಾಂಸಾಹಾರಿಗಳಾಗಿಯೇ ಇರಬೇಕಾಗಿತ್ತು. ಆದರೆ, ಈ ಕೆಳಗೆ ಕಂಡ ಕಾರಣಗಳಿಂದ ಮನುಷ್ಯರು ಸಸ್ಯಾಹಾರಿಗಳೇ ಹೊರತು ಮಾಂಸಾಹಾರಿಗಳಲ್ಲವೆಂದು ನಿರ್ವಿವಾದವಾಗಿ ಸ್ಪಷ್ಟವಾಗುವುದು.

ಲೋಕದಲ್ಲಿರತಕ್ಕ ಮನುಷ್ಯೇತರ ಪ್ರಾಣಿಗಳಲ್ಲಿ ಮಾಂಸಾಹಾರಿಗಳು ಮತ್ತು ಸಸ್ಯಾಹಾರಿಗಳು ಎಂಬುದಾಗಿ ಎರಡು ಪಂಗಡಗಳುಂಟು. ಅಂದರೆ, ಹಸು, ಎಮ್ಮೆ, ಕುರಿ, ಕುದುರೆ ಇತ್ಯಾದಿ ಪ್ರಾಣಿಗಳು ಸಸ್ಯಾಹಾರಿಗಳು. ಬೆಕ್ಕು, ನಾಯಿ, ಹುಲಿ, ಕರಡಿ ಇತ್ಯಾದಿ ಪ್ರಾಣಿಗಳು ಮಾಂಸಾಹಾರಿಗಳು. ಸಸ್ಯಾಹಾರವನ್ನು ಮಾಡತಕ್ಕ ಪ್ರಾಣಿಗಳೆಲ್ಲವೂ ನಾಲಿಗೆಯನ್ನು ಒಳಗೆ ಇಟ್ಟುಕೊಂಡು ತುಟಿಯಿಂದ ನೀರನ್ನು ಕುಡಿಯುವುವು. ಮಾಂಸಾಹಾರಮಾಡತಕ್ಕ ಪ್ರಾಣಿಗಳೆಲ್ಲವೂ ನಾಲಿಗೆಯನ್ನು ಹೊರಗೆ ಹಾಕಿ ನಾಲಿಗೆಯಿಂದ ನೀರನ್ನು ಕುಡಿಯುವುವು. ಸಸ್ಯಾಹಾರವನ್ನು ಮಾಡತಕ್ಕ ಪ್ರಾಣಿಗಳು ಆರೋಗ್ಯವಾಗಿರುವಾಗ ಅವುಗಳ ದೇಹವು ಬೆವರುತ್ತದೆ. ಮಾಂಸಾಹಾರವನ್ನು ಮಾಡತಕ್ಕ ಪ್ರಾಣಿಗಳು ಅನಾರೋಗ್ಯವಾಗಿದ್ದಾಗ ಅವುಗಳ ದೇಹವು ಬೆವರುತ್ತದೆ. ಎತ್ತನ್ನಾಗಲೀ ಆಥವಾ ಕುದುರೆಯನ್ನಾಗಲಿ ಸ್ವಲ್ಪದೂರ ಓಡಿಸಿದರೆ ಅವುಗಳ ದೇಹವು ಬೆವರುತ್ತದೆ. ನಾಯನ್ನಾಗಲಿ ಆಥವಾ ಬೆಕ್ಕನ್ನಾಗಲಿ ಎಷ್ಟು ದೂರ ಓಡಿಸಿದರೂ ಅವುಗಳ ದೇಹವು ಬೆವರುವುದಿಲ್ಲ. ನಾಯು ಅಥವಾ ಬೆಕ್ಕಿನ ದೇಹವು ಯಾವಾಗಲಾದರು ಬೆವರಿದರೆ ಅದಕ್ಕೆ ಅನಾರೋಗ್ಯವೆಂಬುದಾಗಿ ತಿಳಿಯಬೇಕು. ಸಸ್ಯಾಹಾರವನ್ನು ಮಾಡತಕ್ಕ ಪ್ರಾಣಿಗಳಿಗೆ ಅಂಧಕಾರದಲ್ಲಿ ಕಣ್ಣುಗಳು ಕಾಣುವುದಿಲ್ಲ. ಮಾಂಸಾಹಾರವನ್ನು ಮಾಡತಕ್ಕ ಪ್ರಾಣಿಗಳಿಗೆ ಅಂಧಕಾರದಲ್ಲಿ ಕಣ್ಣುಗಳು ಕಾಣುತ್ತವೆ. ಮಾಂಸಾಹಾರವನ್ನು ಮಾಡತಕ್ಕ ಪ್ರಾಣಿಗಳಿಗೆ ಕೋರೆಹಲ್ಲಿರುತ್ತದೆ. ಸಸ್ಯಾಹಾರಮಾಡತಕ್ಕ ಪ್ರಾಣಿಗಳಿಗೆ ಕೋರೆಹಲ್ಲಿರುವುದಿಲ್ಲ. ಅದುದರಿಂದ ಮನುಷ್ಯನು ಮಾಂಸಾಹಾರಿಯಲ್ಲನೆಂದು ಮತ್ತು ಅವನ ಆಹಾರಕ್ಕೋಸ್ಕರ ದೇವರು ಇತರ ಪ್ರಾಣಿಗಳನ್ನು ಸೃಷ್ಟಿಸಿಲ್ಲವೆಂದು ನಿರ್ವಿವಾದವಾಗಿ ಸಿದ್ಧವಾಗುವುದು.

ಅಲ್ಲದೆ, "ಅಹಿಂಸಾ ಪರಮೋಧರ್ಮಃ" ಎಂಬಂತೆ ಎಲ್ಲಿ ಹಿಂಸೆ ಇದೆಯೋ ಅಲ್ಲಿ ಅಧರ್ಮವು, ಎಲ್ಲಿ ಅಹಿಂಸೆ ಇದೆಯೋ ಅಲ್ಲಿ ಧರ್ಮವು ಇರುತ್ತದೆ. ಅಂದರೆ, ಸಸ್ಯಾಹಾರವನ್ನು ಮಾಡತಕ್ಕ ಪ್ರಾಣಿಗಳಲ್ಲಿ ಧರ್ಮವು, ಮಾಂಸಾಹಾರವನ್ನು ಮಾಡತಕ್ಕ ಪ್ರಾಣಿಗಳಲ್ಲಿ ಅಧರ್ಮವು ಇರುತ್ತದೆ. ಕುರಿಗಳು ಆರುತಿಂಗಳಿಗೊಂದಾವರ್ತಿ, ಹಸುಗಳು ಎರಡುವರ್ಷಕ್ಕೊಂದಾವರ್ತಿ ಒಂದೊಂದು ಕರುವನ್ನು ಹಾಕಿದರೂ ಮತ್ತು ಅವುಗಳು ಸಹಸ್ರಗಟ್ಟಿ ಕಟುಕರಿಂದ ಕೊಲ್ಲಲ್ಪಟ್ಟರೂ ಅವುಗಳ ವಂಶವು ವರ್ಷೇ ವರ್ಷೇ ವೃದ್ಧಿಯಾಗುತ್ತಲಿವೆ. ನಾಯಿ, ಬೆಕ್ಕು ಮುಂತಾದವುಗಳು ಮೂರು ತಿಂಗಳಗೊಂದಾವರ್ತಿ ೩-೪ ಮರಿಗಳನ್ನು ಹಾಕಿದರೂ ಅವುಗಳ ವಂಶವು ಹೆಚ್ಚದೆ ಮೊದಲು ಎಷ್ಟು ಇದ್ದವೊ ಅದಕ್ಕಿಂತಲೂ ಕಡಿಮೆಯಾಗಿಯೇ ಇವೆ. ಅಂದರೆ, ಸಸ್ಯಾಹಾರಿ ಪ್ರಾಣಿಗಳಲ್ಲಿ ಧರ್ಮವಿರುವುದರಿಂದ ಅವುಗಳಿಗೆ ವೃದ್ಧಿಯೂ, ಮಾಂಸಾಹಾರಿ ಪ್ರಾಣಿಗಳಲ್ಲಿ ಅಧರ್ಮವಿರುವುದರಿಂದ ಅವುಗಳಿಗೆ ನಾಶವು ಆಗುತ್ತದೆ. ಇಷ್ಟೇ ಅಲ್ಲದೆ, ನಾವು ಆರೋಗ್ಯವಾಗಿರಬೇಕಾದರೆ ಶುಚಿಯಾಗಿಯೂ, ದೇಹಕ್ಕೆ ಪುಷ್ಟಿಯನ್ನು ಕೊಡತಕ್ಕದ್ದಾಗಿಯೂ ಇರುವ ಸಪಾರ್ಥಗಳನ್ನೇ ಸೇವಿಸಬೇಕು. ಮಾಂಸವು ನೋಡುವದಕ್ಕೇನೇ ಅಸಹ್ಯವಾಗಿರುವದಲ್ಲದೆ ದುರ್ಗಂಧವುಳ್ಳದ್ದಾಗಿಯೂ, ಮಲ, ಮೂತ್ರ, ಕ್ರಿಮಿಯುಕ್ತವಾಗಿ ಅಶುಚಿಯಾಗಿಯೂ ಇರುವುದರಿಂದ ಅದನ್ನು ಸೇವಿಸಿದವರಿಗೆ ಅನಾರೋಗ್ಯವು ಪ್ರಾಪ್ತವಾಗುವುದು. ಸಾಮಾನ್ಯವಾಗಿ ಸಾಂಕ್ರಾಮಿಕರೋಗಗಳು ಮಾಂಸಾಹಾರವನ್ನು ಮಾಡತಕ್ಕವರಲ್ಲೇ ಸ್ಫುರಿಭವಾಗುತ್ತದೆ. ನನ್ನ ದೇಹವು ಪುಷ್ಟಿಯಾಗಬೇಕಾದರೆ ಇವರಲ್ಲಿ ಮಾಂಸವು ವೃದ್ಧಿಯಾಗಬೇಕು. ಸಸ್ಯವನ್ನು ನಾವು ಆಹಾರ ಮಾಡಿದರೆ ಅದು ಮಾಂಸವಾಗಿ ಪರಿಣಮಿಸಿ ನನ್ನ ದೇಹಕ್ಕೆ ಪುಷ್ಟಿಯನ್ನುಂಟುಮಾಡುವುದು. ಮಾಂಸಾಹಾರ ಮಾಡಿದರೆ ಅದು ಜಠರದಲ್ಲಿ ಜೀರ್ಣಿಸಿಹೋಗುವದರಿಂದ ಅದು ಪುನಃ ಮಾಂಸವಾಗುತ್ತದೆಂಬ ನಿಯಮವಿಲ್ಲ. ಆದುದರಿಂದ ದೇಹ ಪುಷ್ಟಿಗೆ ಮಾಂಸಾಹಾರಕ್ಕಿಂತ ಸಸ್ಯಾಹಾರವೆ ಉತ್ತಮವಾದದ್ದು. ಈ ಕಾರಣಗಳಿಂದಲೇ ಜೀವನವಿನ ಕೆಲವಿನಿಗಳು ತಮ್ಮ ಅನುಭವದಿಂದ ಮಾಂಸಾಹಾರಿ ಪ್ರಾಣಿಗಳ ಆಯಸ್ಸಿನ ಸಸ್ಯಾಹಾರಿ ಪ್ರಾಣಿಗಳ ಆಯಸ್ಸಿಗಿಂತಲು ಕಡಿಮೆಯಾದದ್ದೆಂದು ಸಿದ್ಧಪಡಿಸಿದ್ದಾರೆ. ಇದು ನಮಗೆ ಹೇಳಿನಂತೆ ಮಾಂಸಭಕ್ಷಣೆಯಿಂದ ಪಾಪಸಂಘಟನೆಯು, ಅನಾರೋಗ್ಯವು, ಆಯುಃಕ್ಷೀಣವು, ವಂಶಕ್ಷಯವು ಆಗುವದರಿಂದ ನೋಕ್ಷವನ್ನು ಅಪೇಕ್ಷಿಸುವವರು ಸರ್ವಥಾ ಇದನ್ನು ನಿರಾಕರಿಸಶಕ್ಯದ್ದು.

ಕೆಲವರು ಮಾರಿ, ಮಸಣಿ ಮುಂತಾದ ಸ್ತ್ರೀದೇವತೆಗಳ ಅನುಗ್ರಹವನ್ನು ಸಂಪಾದಿಸುವದಕ್ಕೋಸ್ಕರ ಅವರುಗಳ ಪ್ರೀತ್ಯರ್ಥವಾಗಿ ಕೋಳಿ, ಕುರಿ, ಕೋಣ ಮುಂತಾದ ಪ್ರಾಣಿಗಳನ್ನು ಬಲಿಯಾಗಿ ಕೊಡುತ್ತಾರೆ. ಆ ದೇವತೆಗಳಿಗೆ ಮೇಲ್ಕಂಡ ಪ್ರಾಣಿಗಳ ಕೊಲೆಯು ಇಷ್ಟವಾಗಿದ್ದರೆ ತಾವಾಗಿಯೇ ಎಷ್ಟು ಪ್ರಾಣಿಗಳನ್ನಾದರೂ ಕೊಂಡು ಸಂತೋಷಪಡಬಹುದು. ಆ ದೇವತೆಗಳಿಗೆ ಹಾಗೆ ಮಾಡಲು ಶಕ್ತಿಯಿಲ್ಲದೇ ಇರುವದರಿಂದ ಮನುಷ್ಯರೇ ಆ ಪ್ರಾಣಿಗಳನ್ನು ಬಲಿಯನ್ನಾಗಿ ಕೊಡಬೇಕೆಂದು ಹೇಳಿದರೆ ಪ್ರಾಣಿಗಳನ್ನು ಕೊಲ್ಲುವ ಶಕ್ತಿಯಿಲ್ಲದ ದೇವತೆಗಳಿಗೆ ಮನುಷ್ಯರಿಗೆ ನಿಗ್ರಹವನ್ನಾಗಲಿ ಅಥವಾ ಅನುಗ್ರಹವನ್ನಾಗಲಿ ಮಾಡತಕ್ಕ ಶಕ್ತಿಯು ಇದೆ ಎಂಬುದಾಗಿ ಹೇಳುವದಕ್ಕಾಗುವುದಿಲ್ಲ. ಇದರ ನಿಜಾಂಶವೇನೆಂದರೆ ಪ್ರಾರಂಭದಲ್ಲಿ ಈ ದೇವತೆಗಳ ಭಕ್ತರುಗಳು ಈ ದೇವತೆಗಳ ಪ್ರೀತ್ಯರ್ಥವಾಗಿ ತಾವು ಊಟ ಮಾಡತಕ್ಕ ಆಹಾರವನ್ನೇ ಅರ್ಪಿಸುತ್ತಿದ್ದರು. ಅಂದರೆ, ಮಾಂಸಾಹಾರವನ್ನು ಮಾಡತಕ್ಕವರೇ ಹೆಚ್ಚಾಗಿ ಈ ದೇವತೆಗಳ ಭಕ್ತರುಗಳಾಗಿದ್ದವ್ದರಿಂದ ಈ ದೇವತೆಗಳಿಗೆ

(೭ನೆಯ ಪುಟವನ್ನು ನೋಡಿ)

ಚಂದಾದಾರರಲ್ಲಿ ವಿಜ್ಞಾಪನೆ

ಈ ಪತ್ರಿಕೆಯು ಜನ್ಮವೆತ್ತಿ ವೈಶಾಖ ಶು। ಪಂಚಮಿಗೆ ೧೯ ವರ್ಷಗಳು ತುಂಬಿ ೨೦ ನೆಯ ವರ್ಷವು ಪ್ರಾರಂಭವಾಗಿರುವುದು ವರ್ಷಾರಂಭದಿಂದೆ ಚಂದಾದಾರರಾಗಿರುವ ಸರ್ವರಿಗೂ ಇನ್ನು ಮುಂದೆ ಪತ್ರಿಕೆಯನ್ನು ವಿ.ಪಿ. ಮಾಡಬೇಕಾಗುತ್ತದೆ ವಿ. ಪಿ ಮಾಡುವುದರಿಂದ ಸಮಯ ತಿಂದರೆಯಾಗುವುದು ಹಾಗೂ ಚಂದಾದಾರರಿಗೂ ೫ ಆಣೆ ಹೆಚ್ಚಿಗೆ ಬೀಳುವುದು ಆದುದರಿಂದ ಚಂದಾದಾರರೆಲ್ಲರೂ ಕೂಡಲೆ ೩ ರೂ ಗಳನ್ನು ಮನಿಯಾರ್ಡರ್ ದ್ವಾರಾ ಕಳುಹಿಸಬೇಕು ಯಾವ ಗ್ರಾಮದಲ್ಲಿ ವಿಶೇಷ ಚಂದಾದಾರರಿರುವರೋ ಆ ಗ್ರಾಮದಲ್ಲಿರುವ ಅಭಿಮಾನಿಗಳು ಚಂದಾದಾರರ ಪಣವನ್ನೆಲ್ಲ ಒಟ್ಟು ಕೂಡಿಸಿ ಒಂದೇ ಸಾರಿ ಮನಿಯಾರ್ಡರ್ ಮಾಡಿಸಬೇಕು ಹೀಗೆ ಮಾಡುವುದರಿಂದ ಸರ್ವರಿಗೂ ಹಿತವಾಗುತ್ತದೆ ಮನಿಯಾರ್ಡರ್ ಮಾಡುವ ಚಂದಾದಾರರು ತಮ್ಮ ಹೆಸರಿನ ಪಕ್ಕದಲ್ಲಿರುವ ನಂಬರನ್ನು ಮಾತ್ರ ದಯವಿಟ್ಟು ಮರೆಯದೆ ತಿಳಿಸಬೇಕು

—ಮ್ಯಾ

ಈ ರೀತಿಯಾಗಿ ಈ ಪತ್ರಿಕೆಯು ತಾನು ಜನ್ಮವೆತ್ತಿ ದಂದಿನಿಂದ ಇಲ್ಲಿಯವರೆಗೆ ಸನಾತನದರ್ಮೋದ್ಧಾರ ಕಾರ್ಯಗಳನ್ನು ಮಾಡುತ್ತ ಸಮಸ್ತ ಸನಾತನಸನುತಾನು ಯಾಯಿಗಳ ಸರವನ್ನೇನಕ್ಕೆ ಕಾರಣವಾಗಿರುವುದು ಮಹೋದ್ಧಾರಕ್ಕಾಗಿ ಮತಾಚಾರ್ಯರ ಪವಿತ್ರಾಭಿಧಾನದಿಂದ ಪ್ರಕಾಶಿಸುತ್ತಿರುವ ಈ ಪತ್ರಿಕೆಯು ಚಿರಕಾಲ ಬಾಳಲೆಂಬ ಸಮುದ್ದೇಶದಿಂದ ಅನೇಕ ಜನ ಗುರುಭಕ್ತೆ ದುರೀಣರು ಈ ಪತ್ರಿಕೆಯ ಅಭಿವೃದ್ಧಿಗಾಗಿ ಲಿಂಗ ಧಾರಣ, ದೀಕ್ಷಾ ವಿವಾಹಾದಿ ಶುಭಕಾರ್ಯಗಳಲ್ಲಿ ತಮ್ಮ ತಮ್ಮ ಶಕ್ತ್ಯನುಸಾರವಾಗಿ ದ್ರವ್ಯವನ್ನು ಸಮರ್ಪಿಸುತ್ತಿರುವುದು ಪ್ರತ್ಯಕ್ಷಾಭ್ಯರಿಗೂ ತಿಳಿದ ವಿಷಯವಾಗಿದೆ ಇದೇ ರೀತಿಯಾಗಿ ಸಮಸ್ತ ಗುರುಭಕ್ತರೂ ಈ ಪತ್ರಿಕೆಯ ಅಭಿವೃದ್ಧಿವಿಷಯವಲ್ಲಿ ಕಾಯವಾಙ್ಮನಸ್ಸುಗಳಿಂದ ಸಹಾಯಮಾಡಿ ಶ್ರೀಜಗದ್ಗುರಾಚಾರ್ಯರ ಕೃಪಾಕಟಾಕ್ಷಕ್ಕೆ ಪಾತ್ರರಾಗಬೇಕೆಂದಾಶಿಸುತ್ತೇನೆ ಶ್ರೀಜಗದ್ಗುರಾಚಾರ್ಯರು ಸದಾ ತಮ್ಮ ಸೇವೆಯಲ್ಲೇ ನಿರತವಾಗಿರುವ ಈ ಪತ್ರಿಕೆಗೆ ಜಯಾಶೀರ್ವಾದಗಳನ್ನು ಅನುಗ್ರಹಿಸಿ ಇದರ ವೈಭವನು ಸರ್ವತ್ರ ವ್ಯಾಪಿಸುವಂತೆ ಮಾಡಲೆಂದು ಆ ಪೂಜ್ಯ ಪಾದರನ್ನು ಅನನ್ಯಸಾಧಾರಣವಾದ ಭಕ್ತಿಭಾವದಿಂದ ಭಜಿಸುತ್ತೇನೆ

ಪಂಚಾಚಾರ್ಯಪ್ರಭಾ.

೧೯೪೬ ನೆಯ ಮೇ ತಾ।। ೬ನೇ ಸೋಮವಾರ

೨೦ ನೆಯ ವರ್ಷದ ಪ್ರಾರಂಭ

ಸನಾತನ ಮತಾನುಯಾಯಿಗಳಿಗೆ ಸರನಿಮಾನ್ಯಗಳಾದ ಅರವತ್ತು ಸಂವತ್ಸರಗಳಲ್ಲಿ ಸ್ವಧರ್ಮನಿರತಿಯಿಂದ ಪ್ರಭವನಾಮಸಂವತ್ಸರದ ವೈಶಾಖ ಶುದ್ಧ ೫ ದಿನದ ಪ್ರಾತ್ಯಹ್ನವಾಗುವ ಶ್ರೀಜಗದ್ಗುರು ಪಾರುಲ ಜಗದ್ಗುರು ಜಯಂತೀರೂಪವಾದ ಪುಣ್ಯದಿವಸದಲ್ಲಿ ಲೋಕ ಮಹೋದ್ಧಾರಕ್ಕಾಗಿ ಎತ್ತರದೇಶ್ಯರುವ ಸಂಚಾ ಚಾರ್ಯಪ್ರಭಾನಾಮಕವಾದ ಪತ್ರಿಕೆಗೆ ನಾಂದಿಯಾಗಿ ತಂಬಿ ಈ ದಿವಸ ೨೦ನೆಯ ವರ್ಷವು ಪ್ರಾರಂಭವಾಗಿರುವುದು

ಶ್ರೀಜಗದ್ಗುರು ಪೂರ್ಣಾವತಾರ ಚತುರ್ಮುಖರೂಪವಾಗಿರುವೀಪತ್ರಿಕೆಯು, ಅತುಲಶಕ್ತಿಯ ಪ್ರಭುತ್ವಬಲ ದಿಂದ ಲೋಕದಲ್ಲಿ ಹೊಂದರಿಯೂ ಇಲ್ಲದ ಅವಿಚ್ಛಿನ್ನವಾಗಿ ಪ್ರಕಾಶವಾಗುತ್ತಿರುವುದನ್ನು ಕಂಡು ಭಗವತ್ಪಾದರಿಗೂ ಸಮಸ್ತ ಗುರುಭಕ್ತರಿಗೂ ಆನಂದೋದ್ಗಾರವನ್ನು ಮಾಡುವ ಪ್ರಸಂಗವು ಪ್ರಾಪ್ತವಾಗಿದೆ

ಜಗದ್ವಿಖ್ಯಾತರಾದ ಶ್ರೀಜಗದ್ಗುರು ಪಂಚಾಚಾರ್ಯರ ನಾಮಸಂಕೀರ್ತನೆಯು, ನಾಸ್ತಿಕನೊಬ್ಬನಾದ ಈ ಕಾಲದಲ್ಲಿ ಲುಪ್ತಪ್ರಾಯವಾಗಿದ್ದುದನ್ನು ಕಂಡು ಅವರ ಪವಿತ್ರಾಭಿಧಾನದಿಂದ ಪ್ರಕಾಶಿಸುತ್ತಿರುವೀಪತ್ರಿಕೆಯು ತನ್ನ ಅತ್ಯುಜ್ವಲಲೇಖನಗಳ ದ್ವಾರಾ ಆ ನಿರ್ಮಲ ಪವಿತ್ರನಾಮಸಂಕೀರ್ತನವನ್ನು ವರದಿಕ್ಯಗಳಲ್ಲಿ ಹರಡುವಂತೆ ಮಾಡಿತು ಜಾತಿಸಾಂಕರ್ಯ ಪ್ರಭಾತದಿಂದ ಜರ್ಝರಿತವಾ ತ್ತಿರುವ ಸನಾತನಧರ್ಮದ ರಕ್ಷಣೆಯ ವಿಷಯದಲ್ಲಿ ಅನೇಕಾನೇಕ ಲೇಖನಗಳನ್ನು ಪ್ರಕಟಮಾಡಿ ಜಾತಿಸಾಂಕರ್ಯವಾದಿಗಳ ಮರುಬಿಪ್ರಾಯ್ಯಗಳನ್ನು ಆಮೂಲಾಗ್ರವಾಗಿ ಖಂಡಿಸಿ ನಮ್ಮೀ ಭರತಭೂಮಿಯಲ್ಲಿ ವರ್ಣಾಶ್ರಮಧರ್ಮಗಳು ಅನಾದಿಕಾಲದಿಂದಲೂ ರೂಢಿ ಮೂಲವಾಗಿರುವೆಂಬ ತಥ್ಯಾಂಶವನ್ನು ನಿರೂಪಿಸಿ ಮಾಡಿ ಪ್ರಮಾಣಗಳ ವ್ಯಾಖ್ಯಾ ಬೋಧಿಸಿ ಮನಾಜನ ಗಳ ಮನಸ್ಸನ್ನು ಸನಾತನಧರ್ಮದ ವಿಷಯದಲ್ಲಿ ಪ್ರೇಮ ಭರಿತವಾದುದನ್ನಾಗಿಮಾಡಿತು ಪ್ರತಿಯೊಬ್ಬರ ಹೃದಯ ಭೂಮಿಯಲ್ಲಿ ಗುರುದೇವಭಕ್ತಿರೂಪವಾದ ಬೀಜ ವನ್ನು ಬಿತ್ತಿ, ಅಂಕುರಿಸಿ, ಪಲ್ಲವಿಸಿ, ಫಲಿಸುವಂತೆ ಮಾಡಿತು ಅತ್ಯಂತ ಕಠಿನವಾಗಿರುವ ವೀರಶೈವ ಸಿದ್ಧಾಂತರಹಸ್ಯವನ್ನು ಸರ್ವರಿಗೂ ತಿಳಿಯುವಂತಹ ಸುಗಮವಾದ ಭಾಷಾಶೈಲಿಯಿಂದ ಬೋಧಿಸಿ ಅನೇಕ ರನ್ನು ಸ್ವಸಿದ್ಧಾಂತಕಟ್ಟಳೆಗಳನ್ನಾಗಿಮಾಡಿತು

ವರ್ತಮಾನಸಂಗ್ರಹ

ಜಪಾನಿನಲ್ಲಿ ಮೇ ದಿನಾಚರಣೆಯು ಯಾವ ಗಲಭೆಯೂ ಆಗದೆ ನಡೆಯಿತು ೨ ಲಕ್ಷ ಜನಗಳು ಚಕ್ರವರ್ತಿಗಳ ಭವನದ ಮುಂದೆ ನಿಂತು, ದಿನಾಚರಣೆಯನ್ನು ಆಚರಿಸಿದರು ಆದರೆ ಯೋಷಾವಾದಲ್ಲಿ ಮಾತ್ರ ೧ ಸಾವಿರ ಜನರು ಆಕ್ಟಿ ಕೊಡಿ ಎಂದು ಪ್ರದರ್ಶನ ನಡೆಸಿದರು

ಬಾಕ್ಸ್ ಎಂಬಲಿ ಡಕೋಟಾ ವಿಮಾನವು ಅಸಫಾತಕ್ಕೆ ಒ ಗಿ ಆರ್ ಎ ಎಸ್ ನ ಇಬ್ಬರು ಎಂದಿ ನಿಗಳು ಭಾರತದ ಮೂಲಕ ಇಂಗ್ಲೆಂಡ್ ತಲುಪಿ ನ ಮುಂಚಿ ಭಾರತೀಯ ಅಧಿಕಾರಿಗಳೂ ತುರುವರು

ಭಾರತಕ್ಕೆ ಆಹಾರ ಯೋಜನೆ

ದೂರಪ್ರಾಚ್ಯದ ಕಮಿಸ್ಸನ್ನಿನ ಸಲಹೆಯಂತೆ ೧೯೪ ಜಪಾನಿಗೆ ಸಾಗರ ಟ್ಟ ತಾರಾ ಫ್ರಾನ್ಸಿಗನ್ನು ಮೇ ತಿಂಗಳಲ್ಲಿ ಕೊಡಲು ಎನಿಸಿಕೆ ಬ್ಬಿದೆ ಆದರೆ ಇದರಿಂದ ಜಪಾನಿಕ್ಕೆ ನೇ ತಿಂಗಳಿಗೆ ಬರಬೇಕಾಗಿದ್ದ ೫೦ ಲಕ್ಷ ಟ್ ಗೋಧಿಗೆ ಜೋತಾ ಬೀಳಲಿದೆ

ಶ್ರೀಮತಿ ಪಂಡಿತರನ್ನು ಅಮೇರಿಕಾಕ್ಕೆ ಕಳುಹಿಸಿ

ದಕ್ಷಿಣ ಆಫ್ರಿಕದ ಭಾರತೀಯರ ಸ್ಥಿತಿಯನ್ನು ವಿಶ್ವದ ಸಕ್ಯಾಂಟ್ ಕೌನ್ಸಿಲ್ಲಿನ ಮುಂದೆ ಇಡಲು ಸಂಯುಕ್ತ ಸ್ಥಾಂತವ ಸಚಿವರಾದ ಶ್ರೀಮತಿ ವಿಜಯ ಲಕ್ಷ್ಮಿಪಂಡಿತರು ಅಮೆರಿಕಾಕ್ಕೆ ಹೋಗಬೇಕೆಂಗು ದಕ್ಷಿಣ ಆಫ್ರಿಕದ ಭಾರತೀಯ ನಿಯೋಗದ ನಾಯಕರಾದ ಮಿ। ಸಡೋಜ ರುನ್ಸುಂಜರವರು ಸೂಚಿಸಿದ್ದಾರೆ

ಹಾಂಕಾಂಗಿನಲ್ಲಿ ಪ್ರಜಾಪ್ರಭುತ್ವ ಸರ್ಕಾರ

ಹಾಂಕಾಂಗಿನ ಜನಗಳೇ ತಮ್ಮ ಸರ್ಕಾರವನ್ನು ನಡೆಸಿಕೊಂಡು ಬರುವಂತೆ ಕಾಲೋನಿಯ ರಾಜ್ಯಾಂಗ ರಚನೆಯನ್ನು ಕೂಡಲೇ ಬದಲಾಯಿಸಲಾಗುವುದೆಂದು ಅಲ್ಲಿಯ ಗವರ್ನರಾದ ಸರ್ ಮಾರ್ಕ್ಯಾಂಗ್‌ರವರು ಒಂದು ಘೋಷಣೆ ಹೊರಡಿಸಿದ್ದಾರೆ ಹಾಂಕಾಂಗ್ ಮತ್ತು ಇತರ ಬ್ರಿಟಿಷ್ ಕಾಲೋನಿಗಳಿಗೆ ಸ್ವಾತಂತ್ರ್ಯ ಲಭಿಸುವಂತೆ ಬ್ರಿಟಿಷ್ ಸರ್ಕಾರದವರು ತಳ್ಳಿ ಕಾರ್ಯ ಕ್ರಮಗಳನ್ನು ಕೂಡಲೇ ತೆಗೆದುಕೊಳ್ಳುವರೆಂದು ಗವರ್ನರು ತಿಳಿಸಿದ್ದಾರೆ

ಈಜಿಪ್ಟ್‌ನಿಂದ ಬ್ರಿಟಿಷ್ ಸೈನ್ಯ ವಾಪಸು

ಈಜಿಪ್ಟ್‌ನಿಂದ ತನ್ನ ಸೈನ್ಯವನ್ನು ವಾಪಸುಮಾಡಲು ಬ್ರಿಟನ್ ಒಪ್ಪಿದ ಕೈರೋದಲ್ಲಿ ಈಜಿಪ್ಟ್ ಮತ್ತು ಬ್ರಿಟನ್ ಕೌಲಿನ ಸಂಬಂಧದಲ್ಲಿ ನಡೆಯುತ್ತಿರುವ ಮಾತುಕತೆ ಮುಗಿದನಂತರ, ಮೇಲ್ಕಂಡ ನಿರ್ಧಾರವನ್ನು ಹೊರಗೆಡಲಾಗುವುದಂತೆ

ದಾನೋದರ ಅಣೆಕಟ್ಟು

ದಾನೋದರ ನದಿಯ ಪ್ರವಾಹವನ್ನು ತಡೆಗಟ್ಟಿ, ಅಲ್ಲಿ ೨೫ ಕೋಟಿ ರೂ ಗಳ ಖರ್ಚಿನಿಂದ ಒ ಅಣೆಕಟ್ಟುಗಳನ್ನು ನಿರ್ಮಿಸುವ ಯೋಜನೆಯ ನೆಗ್ಟಿನೊದಲನೆ ಕಾರ್ಯಕ್ರಮವು ಬಲಿಯ ಸಮೀಪದಲ್ಲಿ ಅಣೆಕಟ್ಟನ್ನು ನಿರ್ಮಿಸಬೇಕೆಂದು ದಹಲಿಯಲ್ಲಿ ನಡೆದ ಕೇಂದ್ರ, ಒಂಗಾಳ ಮತ್ತು ಬಿಹಾರ ಸರ್ಕಾರಗಳ ಸಮ್ಮೇಳನದಲ್ಲಿ ನಿರ್ಧರಿಸಲಾಯಿತು ಈ ಒ ಅಣೆಕಟ್ಟಿನ ಯೋಜನೆಯಿಂದ ೨೬ ಲಕ್ಷ ಎಕರೆ ಜಮೀನು ನೀರುಳಿಗೆ ಬರುವುದು ಇದರಿಂದ ೪೦ ಲಕ್ಷ ಜನಗಳಿಗೆ ಉಪಯೋಗವಾಗುವುದು

ಸ್ಟೆಫ್ಸರನ್ನು ಸದೆಬಡಿಯಲು ಭಾರತ ಸೈನ್ಯ

ಸಾರತಪಲ್ಲಿ ರಾಷ್ಟ್ರೀಯಸರ್ಕಾರ ಸ್ಥಾಪನೆಯಾದ ಕೂಡಲೇ, ದಕ್ಷಿಣ ಆಫ್ರಿಕಾಕ್ಕೆ ಭಾರತೀಯ ಸೈನ್ಯವನ್ನು ಕಳುಹಿಸಿ, ಅಲ್ಲಿ ಸ್ಟೆಫ್ಸ್ ಸರ್ಕಾರವನ್ನು ಸದೆಬಡಿಯಬೇಕೆಂದು ಕೇಂದ್ರ ಸರ್ಕಾರದ ಕಾರ್ಯದರ್ಶಿ ಶಾ। ಖಾರೆಯವರು ಹೊಂಬಾಯಿ ಸತ್ಯಾಗ್ರಹ ಕೂಟದ ವರಿಷ್ಠ ವಿಕಿಸ್ಟಾರರ ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರ ಹಕ್ಕುಬಾಧ್ಯತೆಗೆ ಚ್ಯುತಿಯುಂಟಾಗಿರುವ ವಿಷಯವನ್ನು ವಿಶ್ವದ ಸಕ್ಯಾಂಟ್ ಕೌನ್ಸಿಲ್ಲಿನ ಮುಂದೆ ಇಡಿಸುವಂಗಲಿ ತದವಾ ನೆಹರೂರವರಾಗಲಿ ಹೋಗಿರುವ ವಿಷಯಕೇಂದು ದಕ್ಷಿಣ ಆಫ್ರಿಕಾದ ಭಾರತೀಯ ನಿಯೋಗದ ಮಿ। ಕ್ರಿಸ್ಟಫರ್‌ರನರು ತಥಿಪ್ರಾಯ ಪಟ್ಟಿ ಸ್ಥರ

ದೀರ್ಘಕಾಲ ಬದುಕುವ ನೂತನ ಇಂಜೆಕ್ಷನ್

ರಷ್ಯಾ ದೇಶವು ಸರ್ವವಿದದಲ್ಲಿಯೂ ಮುಂಮವರಿದಿದ ಸ್ಟಾಲಿನ್ ೨ ದೇಶದ ಸರ್ವಾಧಿಕಾರಿಯಾದಮೇಲೆ ರಷ್ಯಾದಿಂದ ಸೋಜಿಗದ ಸುದ್ದಿ ಬರುತ್ತಲೇ ಇರುತ್ತವೆ ಇಗೊಂದು ಮೊನ ಬಂದಿದೆ ಅಲ್ಲಿ ಒಂದು ಔಷಧಿಯನ್ನು ಕಂಡುಹಿಡಿದಿರುವರಂತೆ! ಅದನ್ನು ಮನುಷ್ಯನ ಚರ್ಮಕ್ಕೆ ಇಂಜೆಕ್ಷನ್ ಮಾಡಿದರೆ, ಅವನು ಸೂರಿಪ್ಪತ್ತು ನರ್ಷಸ ನರೆಗೂ ಬದುಕಬಹುದಂತೆ!

ಮುದಿತನ ಏಕೆ ಬರುತ್ತದೆ? ಸಿಕ್ಕಸಿಕ್ಕ ಆಹಾರ ತಿನ್ನುವುದು, ಶಕ್ತಿಮೀರಿ ವಿಶ್ರಾಂತಿ ಇಲ್ಲದಿರುವದು, ಈ ಕಾರಣಗಳಿಂದ ವೈಯ ಒಂದು ಒಳ ಸತ್ವ ನವೆಯುತ್ತದೆ ಈ ರನೌಷಧಿಯಿಂದ ಆ ಒಳ ಸತ್ವ ಮತ್ತೆ ಜೀತರಿಸಿಕೊಳ್ಳಲು ಅವಕಾಶ ಆಗುತ್ತದೆ ಇದನ್ನು ಕಂಡುಹಿಡಿದಾತನಿಗೆ ಅರನತ್ತು ವರ್ಷ, ಆತನ ಚಟುವಟಿಕೆ ನೋಡಿದರೆ ಹರೆಯವನ್ನೆ ನಾಚಿಸುವುದಂತೆ! ಆರೋಗ್ಯ ವೃದ್ಧಿಕಾರಕವಾದ ಹರೆಯದನ್ನು ಯಾರಾದರೂ ಸತ್ವರೆ, ಕೂಡಲೆ ಅವನ ನೈಯಿಂದ ಒಂದುರಿಪಾವ ರಸನನ್ನು ತೆಗೆಯುತ್ತಾತಿ. ಅದರಿಂದ ಈ ಔಷಧ ತಯಾರು ಮಾಡುತ್ತಾರಂತೆ!

ಪ್ಯಾಲಸ್ತೈನನ್ನು ಟ್ರಸ್ಟಿಷಿಪ್ಪಿಗೆ ಒಳಪಡಿಸಬೇಕು

ಯೆಹೂದಿಗಳ ಸ್ವತಿಗತಿ ಪರಿಶೀಲಿಸಿ ವರದಿಮಾಡಲು ನೇಮಕವಾದ ಆಂಗ್ಲೋ-ಅಮೆರಿಕನ್ ಸಮಿತಿಯು ತನ್ನ ವರದಿಯನ್ನು ಒಪ್ಪಿಸಿ ಈ ಹತ್ತು ಶಿಲಹೆಗಳನ್ನು ಮಾಡಿದೆ —

೧ ಯಾವ ಮಕಗಳಲ್ಲಿಯೂ ಅಲೆಯುತ್ತಿರುವ ಜನರಿಗೆ

ಜಾತಿ, ಧರ್ಮ, ವರ್ಣಗಳ ಭೇದವಿಲ್ಲದೆ ಬಿಟನ್ ಮತ್ತು ಅಮೆರಿಕಗಳ ಇತರ ದೇಶಗಳ ಸಹಕಾರ ಸಡೆದು ಮನೆ ಮಕ್ಕಳನ್ನೊಲ್ಲದಿನಸೇಕು

೨ ಚಿತ್ರ ಹಂಸಿಗೆ ಗುರಿಯಾದ ಯೆಹೂದಿಗಳ ಸೈಕಿ ಕನಿಷ್ಠಪಕ್ಷ ಒಂದು ಲಕ್ಷ ಜನಕ್ಕಾದರೂ ಪ್ಯಾಲಸ್ಟೈನಿಗೆ ವಲಸೆ ಹೋಗಲು ತಕ್ಷಣ ಸರ್ಟಿಸಿಕೇಟುಗಳನ್ನು ಕೊಡ ತಕ್ಕದ್ದು ಇದು ೧೯೪೬ರ ರೊಳಗಾಗಿ ಇದೆಯಾತಕ್ಕದ್ದು ೨ಡಪಟ್ಟು ಜಾಗ್ರತೆಯಾಗಿ ಇನ್ನೂ ಹೆಚ್ಚು ಜನರಿಗೆ ವಲಸೆ ಹೋಗಲು ಅವಕಾಶ ಕೊಡಬೇಕು

೩ ಅರಬ್ಬರು ಯೆಹೂದಿಗಳಿಮೆಲುಗಲಿಲ್ಲ ಯಹೂದಿಗಳು ಅರಬ್ಬರಮೇಲುಗಾಲಿಲ ಪ್ರಭುತ್ವ ನಡಸಲೇಕೂಡದು ಪ್ಯಾಲಸ್ಟೈನು ಯೆಹೂದಿಗಳ ಅಥವಾ ಅರಬ್ಬರ ಸ್ವತ್ತು ಬಾಸದು ಕ್ರೈಸ್ತಿಯನ್, ಮುಸ್ಲಂ ಮತ್ತು ಯಿಹೂದಿ ಮತಧರ್ಮಗಳನ್ನು ರಕ್ಷಿಸುವಂತಹ ಸರ್ಕಾರ ಏರ್ಪಡಿಸ ಬೇಕು ಈ ಸರ್ಕಾರ ಅರಬ್ಬರಿಗೂ ಯೆಹೂದಿಗರಿಗೂ ಈಗ ಇರುವ ಕೆಲಸ ನಿಂಪು ಸೌಕಾಪ್ಯ ಏರ್ಪಡಿಸುವ ವರಿಗೆ ಮುಂದುವರಿಯತಕ್ಕದ್ದು

೪ ಈ ಸರ್ಕಾರ ಸಂಯುಕ್ತ ರಾಷ್ಟ್ರಗಳ ಟ್ರಸ್ಟಿಷಿಪ್ಪಿಗೆ ಒಪ್ಪಬೇಕು ಈ ರೀತಿ ಒಳಪಡುವ ತನಕ ಮ್ಯಾಂಡೇಟ್ ಪದ್ಧತಿ ರೀತ್ಯಾ ಪ್ರಭುತ್ವ ನಡಿಸಬೇಕು

೫ ಮ್ಯಾಂಡೇಟರಿ ಪ್ರಭುತ್ವ ಅಥವಾ ಟ್ರಸ್ಟಿಷಿಪ್ ಎಲ್ಲಿಸ್ಯಾನಿನಲ್ಲಿ ಅರಬ್ಬರ ಲಘಿಕ, ವಿದ್ಯ ಮತ್ತು ರಿಜ ಕೀಯ ಪ್ರಗತಿಯನ್ನು ಸಾಧಿಸಲು ಎಷ್ಟು ಸ್ವಾಮಿಮ್ಯತೆ ಕೊಡಿಸಲಾಗುತ್ತದೆಯೋ ಅಷ್ಟೇ ಸ್ವಾಮಿಮ್ಯತೆಯನ್ನು ಯಹೂದಿಗಳಿಗೂ ಪ್ರಗತಿಗೂ ಕೊಡಲಾಗುತ್ತದೆ ಯೆಹೂದಿಗಳಿಂತ ಕೀಳುಜಡೆಯಲ್ಲಿರುವ ಅರಬ್ಬರ ಜೀವನ ಮಟ್ಟವನ್ನು ಇನ್ನೂ ಉತ್ತಮಗೊಳಿಸಿ ಸರಿಸಮಾನ ಮಟ್ಟಕ್ಕೆ ಏರಿಸಲು ತಕ್ಷಣ ಕಾರ್ಯಕ್ರಮ ಕೈಗೊಳ್ಳ ಬೇಕು ಎಂದು ಈಗಲೇ ಘೋಷಿಸಬೇಕು

೬ ಟ್ರಸ್ಟಿಷಿಪ್ ಏರ್ಪಡುವವರೆಗೆ ಮ್ಯಾಂಡೇಟ್ ಪ್ರಭುತ್ವದವರು ಇತರ ಜನಾಂಗಗಳ ಸೌಲಭ್ಯ ನೋಡಿ ಕೊಳ್ಳುವುದು ಹೊರತಾಗಿ ಪ್ಯಾಲಸ್ಟೈನಿನಲ್ಲಿ ಎಸುಕೂಲ ಸರಿಸ್ಥಿತಿ ಒದಗಿ ದಂತಿಲ್ಲ್ಲ ಯೆಹೂದಿಗಳು ವಲಸೆ ಬರಲು ಅವಕಾಶ ಕೊಡಬೇಕು

೭ ಯೆಹೂದಿಗಳು ಜಪಾನನ್ನು ಕೊಳ್ಳಲು ಅಡ್ಡಿ ಯಾಗಿರುವ ೧೯೩೦ ನೆಯ ಶಾಸನವನ್ನು ತಿದ್ದುಪಡಿ ಮಾಡಬೇಕು ನಾನಾ ಮತಗಳಿಗೆ ಪವಿತ್ರವಾದ ಸ್ಥಳ ಗಳನ್ನು ಸರ್ಕಾರದವರೇ ರಕ್ಷಿಸಬೇಕು

೮ ದೇಶದ ವ್ಯವಸಾಯ ಮತ್ತು ಕೈಗಾರಿಕಾಭ್ಯುದ ಯಕ್ಕೆ ತಕ್ಕ ಯೋಜನೆಗಳನ್ನು ಯೆಹೂದಿ ವಿಜ್ಞಾನಿ ಗಳನ್ನು ಸಲಹೆದಾರರು ಎರಿಪ್ ರಾಷ್ಟ್ರಗಳು ಸಲಹೆ ಇಡೆಯು ಕೈಗೊಳ್ಳತಕ್ಕದ್ದು ಇದರಿಂದ ಜೀವನ ಮಟ್ಟವು ಎತ್ತರುಗೊಳ್ಳುವುದು ಸಾಧ್ಯ

೯ ಎಲ್ಲಾ ಸ್ಯಾನಿನ ಈ ಸ ಸದ್ಧತಿಯಲ್ಲಿ ಸಾಕ್ಷ ವಾದ ಸಾಸಾರಾಟು ಮಾಡುವುದರ ಹೊತೆಗೆ, ಶಿರಿಸ್ಥ ತವಿರೋಧಿಗಳಾಗಿ ಒತ್ತಾಯ ಪ್ರಾಥಮಿಕ ಶಿಕ್ಷಣ ಜಾರಿಗೆ ತರಬೇಕು

೧೦ ಈ ಸಲಹೆಗಳನ್ನು ಜಾರಿಗೆ ತರುವುದರಲ್ಲಿ ಯಾರಾದರೂ ಅಡ್ಡಿ ಮಾಡಿದರೆ ಅವರನ್ನು ಮಟ್ಟುಹಾಕ ಲಾಗುತ್ತದೆಂದು ಯೆಹೂದಿಗಳಿಗೂ ಅರಬ್ಬರಿಗೂ ಈಗಲೇ ಸೂಚನೆ ಕೊಡಬೇಕು ಯೆಹೂದಿಗಳು ಪುಂಡುಪೋಕರಿ ಗಳಾಟಿ ತಡೆಹಟ್ಟಲು ಸಹಕಾರ ನೀಡಬೇಕು

ಪ್ಯಾಲಸ್ಟೈನು ಪವಿತ್ರಭೂಮಿ, ಯೆಹೂದಿಗಳಿಗೆ, ಕ್ರೈಸ್ತಿಯನ್ನರಿಗೆ ಅರಬ್ಬರಿಗೆ ಅದು ಯಾತ್ರಾಸ್ಥಳ ಅದು ದಂದಿ ಅವನ್ನು ಯಾವುದಾನರೊಂದು ಜನಾಂಗದವೆ ಅಧ್ಯಾಸಿಸಿಕೊಳ್ಳುವುದು ಸಾಧ್ಯವೇ ಇಲ್ಲ ಎಂದು ನರವಿ ಯಲ್ಲಿ ತಿಳಿಸಲಾಗಿದೆ

ಹೆಕ್ಕಿಯನ್ನೊ ಮಾನನ್ನೊ ಹಿಡಿಯುವ ಜೇಡರಹುಳು

ಜೇಡರಹುಳುವು ತನ್ನ ಬಲಿಯನ್ನು ಹಾಸಿ ನೊಣ ಇರುವೆ ಮುಂತಾದುವನ್ನು ಹಿಡಿಯುವುದನ್ನು ಎಲ್ಲರೂ ಒಬ್ಬರು ಅದರೆ ದಕ್ಷಿಣ ಅಮೆರಿಕಾದಲ್ಲಿ ಒಂದು ಜಾತಿಯ ರಾಕ್ಷಸ ಜೇಡರಹುಳಗಳಿವೆ ಇವು ಬಲಿಯನ್ನು ಹಾಸು ವುದೇ ಇಲ್ಲ ನೆಲದ ಮೇಲೂ ಮರದಮೇಲೂ ಗುಬ್ಬಚ್ಚಿಯಂಥ ಚಿಕ್ಕ ಚಿಕ್ಕ ಹಕ್ಕಿಗಳು ಕುಳಿತಿದ್ದರೆ ಅವುಗಳನ್ನು ಅಟ್ಟಿಸಿಕೊಂಡು ಹೋಗಿ ಸೆರೆ ಹಿಡಿದು ಬಾಯಿಗೆ ಹಾಕಿಕೊಳ್ಳುತ್ತವಂತೆ!

ಹಗಲೆಲ್ಲ ಈ ಜೇಡ ಯಾವುದಾದರೂ ಪೊಟರೆಯಲ್ಲಿ ಒಚ್ಚಿಟ್ಟುಕೊಂಡು ನಿದ್ದೆಮಾಡುತ್ತಿರುತ್ತದೆ ಇಟ್ಟು ಹಕ್ಕಿ ಗಳು ಎಲ್ಲಿ ಗೂಡುಕಟ್ಟಿವೆ ಎಂಬುದನ್ನು ತಿಳಿದುಕೊಂಡು ರಾತ್ರಿಯು ಹೊತ್ತು ಅಲ್ಲಿಗೆ ಮುತ್ತಿಗೆ ಹಾಕುತ್ತದೆ ತಾಯಿ ಸಿಕ್ಕಿದರೂ ಸರಿಯೆ, ಮರಿಗಳು ಸಿಕ್ಕಿದರೂ ಸರಿಯೆ! ಆ ಹಕ್ಕಿಯನ್ನು ಕಚ್ಚಿ ಜೇಡವು ತನ್ನ ವಿಷ ನನ್ನು ಅದರೊಳಗೆ ಬಿಟ್ಟು ಅದನ್ನು ಕೊಂದು ಅಮೇಲೆ ಸಾವಕಾಶವಾಗಿ ತಿನ್ನುತ್ತದೆ

ಮಾನನ್ನು ಬೇಟೆಯಾಡುವ ಜೇಡ ಆಸ್ಟ್ರೇಲಿಯಾ ದೇಶದಲ್ಲಿದೆ ಇದು ನೀರಿನ ಪಕ್ಕದಲ್ಲೇ ಕಾಯ್ದುಕೊಂ ಡಿರುತ್ತದೆ ಏರಡು ಕಾಲುಗಳನ್ನು ಕುಳತುಕೊಳ್ಳುವ ದಕ್ಕೆ ಉಪಯೋಗಿಸಿ ಇನ್ನೂ ಆರು ಕಾಲುಗಳನ್ನು ಎತ್ತಿ ಹಿಡಿದು ನೀರಿಂದಿರುತ್ತದೆ ಯಾವುದಾದರೂ ಸಣ್ಣ ಮಾನು ಹತ್ತಿರಕ್ಕೆ ಬಂದು ಒಂದರೆ ಘಟ್ಟನೆ ನೀರಿಗಿಳಿಯುತ್ತದೆ ಎನ್ನಲು ಬೇಗ ನೀರಿನೊಳಕ್ಕೆ ಧುಮುಕುತ್ತದೆಯೆಂದರೆ ಈಜಿಕೊಂಡು ಹೊಗುತ್ತಿರುವ ಮಾನು ಕೂಡ ಈ ಜೇಡದ ಬಿಡಿತವನ್ನು ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ ಕೂಡಲೆ ವಿಸವನ್ನು ಕುಟುಕಿ ಮಾನಿನ ಹೆಣವನ್ನು ಪಡಕ್ಕೆ ಎಳೆದುಕೊಂಡು ಒಂದು ತಡಮಾಡದೆ ತಿಂದು ಬಿಡುತ್ತದೆ

ಆಸ್ಟ್ರೇರಿಯಾ ದೇಶದಲ್ಲಿ ಇನ್ನೊಂದು ಜಾತಿಯ ಜೇಡ ವಿದೆ ಅದರ ಹೆಸರು ತೋಳಜೇಡ ಎಂದಾಗಿ ನೆಲದ ಮೇಲೆ ತಟ್ಟಿಕೊಂಡು ಹುಲುಗಳನ್ನು ಬೇಟೆಯಾಡುವು ದಕ್ಕೇ ಅಲ್ಲ ಪೊದೆಗಳ ಮೇಲೆ ಹೆಂಣುಕಾಯು ತ್ತಿದ್ದು, ಹೊಕ್ಕಿರಿಕ ಕಡಿಸಿಯಂಥಾದ ಹುಳವೋ ಹುಟ್ಟಿಟಿ ಯೋ ಕೆಳಗಡೆ ಒಂದರೆ ಪರಕ್ಕನೆ ಎಂದರ ಮೇಲೆ ಧುಮುಕಿ ನುಂಗಿಬಿಡುತ್ತದೆ

[ಸೆಸುಳ್ಳಿಸಿದ್ದಿದೆ ಮುಂದ ವರೆದ ದು]

ಮಾಂಸವನ್ನೇ ಆರಿಸುವ ಸದ್ಧತಿಯು ಉಂಟಾಯಿತು ಭಕ್ಷ್ಯರಲ್ಲಿ ಅನೇಕರು ನಿರೋಗವಾಗಿ ಕುರಿ, ಕೋಣಗಳ ಮಾಂಸವನ್ನು ಅನ್ನ ಬೇಕೆಂಬ ಇಚ್ಛೆಯಿಂದ ದನಗಳಿಗಳ ಹೆಸರಿನಿಂದ ಇತ್ತುಗಳನ್ನು ಕೊಂಡು ತಿನ್ನುವದಕ್ಕೆ ಪ್ರಾರಂಭಿಸಿದರು ಈ ವಿಷಯಾಗಿ ಒಲಿಯನ್ನು ಕೆಗ್ಗುತ್ತಿರೆ ವೇತತೆಗಳಲ್ಲಿ ತೃಪ್ತಿಯಾಗಿ ಒನರಿಂದ ಯಾವ ವಿಧವಾದ ತೊಂದರೆಯು ತಮಗೆ ಉಂಟಾಗುವದಿಲ್ಲವೆಂಬ ನಂಬಿ ಕೆಯು ಜನಗಳ ಮನಸ್ಸಿನಲ್ಲಿ ನಿಂತಿತು ತದುರಿಂದ ವೇನತೆಗಳೇ ಸ್ಪಾಡಿಗಳ ಒಲಿಯನ್ನು ಎಂಜಲಿದೆ ಜನ ಗಳೇ ತಮ್ಮ ಇಚ್ಛಾನುಸಾರ ಮಾಡುತ್ತಾ ಬಂದರು ಎಂಬುವುದು ನಿಷ್ಕಾಮಾಯ ಈ ಕಾರಣದಿಂದ ದೇವತೆ ಗಳ ಹೆಸರಿನಲ್ಲಿ ಪ್ರಾಣಿಹಿಂಸೆಯನ್ನು ಮಾಡಿದರೆ ವಾಸ ಸಂಭವನೀಯ ಆಗಿ ಮಾಡಿದನರು ಸುವಿನನ್ನು ಅನು ಸರಿಸುವುದರಲ್ಲಿ ಸಂದೇಹವಿಲ್ಲ

ವೇದವು ಯಜ್ಞಗಳಲ್ಲಿ ಸಶುಗ-ನ್ನು ವಧಿಸಿ ದೇವತೆ ಗಳನ್ನು ತೃಪ್ತಿಪಡಿಸತಕ್ಕದ್ದೆಂದು ಹೇಳಿರುವುದರಿಂದ ದೇವತೆಗಳನ್ನು ತೃಪ್ತಿಪಡಿಸುವುದಕ್ಕೋಸ್ಕರ ಪ್ರಾಣಿಗಳ ಹಿಂಸೆಯನ್ನು ಮಾಡಬಹುದೆಂದು ಕೆಲವರು ಹೇಳ ಬಹುದು ಆದರೆ, 'ತೇ ಮೇ ಮತಮವಿಜ್ಞಾಯ ಪರೋವ್ತಂ ವಿಷಯಾತ್ಮಕಾಃ ! ಹಿಂಸಾಯಾಂ ಯದಿ ರಾಗಸ್ತಾತ ಯಜ್ಞ ಏನ ನ ಚೋದನಾ ॥ ನೈವಾ ಪಶೂನಾ ವಿಂಸಂತಿ ಹಿಂಸ್ಯ ತೇ ಪ್ರೇತ್ಯಚೈಸ್ತು ತೇ ।। ಹಿಂಸಾವಿಹಾರಾಹ್ಯಾಲ್ಲಭ್ಯೆ ಪಶುಭಿ ಸ್ಸುರಯೇಚ್ಛ್ಯಯಾಗಿ। ಯಜಂತೀ ದೇವತಾ ಯಜ್ಞೈಃ ಸಿತೃಭೂತಪತೀನ್ ಖಲಃ ॥' ಎಂಬ ಶ್ರೀಮದ್ಭಾಗವತದ ವಚನದಂತೆ ವೇದಕರ್ತೃವಾದ ಈಶ್ವರನ ಅಭಿಪ್ರಾಯವನ್ನು ತಿಲಯ ನೇಗೆ ಪಶುಗಳ ಮಾಂಸವನ್ನು ತಿನ್ನುವ ಮತ್ತು ಸ್ವರ್ಗ ಲೋಕದ ಭೋಗವನ್ನು ತನಭವಿಸುವ ಇಚ್ಛೆಯುಳ್ಳ ದುಷ್ಟರು ತಮ್ಮ ಸುಖಕ್ಕೋಸ್ಕರ ಪಶುಗಳನ್ನು ಕೊಂದು ಯಜ್ಞಗಳಿಂದ ದೇವತೆಗಳನ್ನು ಪೂಜಿಸುತ್ತಾರೆ ಸತ್ಯಂ ವದ (ನಿಜವನ್ನೇ ಹೇಳು), ಧರ್ಮಂಚರ (ಧರ್ಮ ದಿಂದ ನಡಿ), ಸರಿದಾಸಾಕ್ಷ್ಯ ನಿಗಚ್ಛೇತ್ (ಪರಸ್ತ್ರೀಗಮನವ ನ್ನು ಮಾಡಬೇಡ) ಎಂಬುವಾಗಿ ವೇದವು ವಿಧಿನಿರು ವಂತೆ ಅಂದಿರೆ ಅಚ್ಛೆಮಾಡಿರುವಂತೆ ಪಶುಗಳನ್ನು ಕೊಂದು ಯಜ್ಞವನ್ನು ಮಾಡು ಎಂದು ವೇದವು ವಿಧಿ ನಿಸ್ಸಲ ಯಾರಿಗೆ ಪಶುವಧೆಯಲ್ಲಿ ತಸಕ್ತಿಯಿದ್ದು ಪಶುವಧೆ ಯನ್ನು ಮಾಡದೇ ಇರುವದಕ್ಕಾಗುವದಿಲ್ಲವೊ ಅಂಥ ವರಿಗೆ ಯಜ್ಞಕಾಲದಲ್ಲಿ ಮಾತ್ರ ಪಶುವಧೆಯನ್ನು ಮಾಡತಕ್ಕುದೆಂದು ವೇದವು ಹೇಳಿದೆ ಯಜ್ಞಾಗ ನಿಷ್ಠಯಿಳಲಪ್ರದಗಳಾದ್ದರಿಂದ ಅವುಗಳನ್ನು ಬಿಟ್ಟು ನಿತ್ಯ ಫಲಪ್ರದವಾದ ಮೋಕ್ಷವನ್ನು ಸಂಪಾದಿಸಬೇಕೆಂದು ವೇದದ ಜ್ಞಾನಕಾಂಡದಲ್ಲಿ ಹೇಳಿರುವದರಿಂದ ಪಶುವಧೆ ಯನ್ನು ಮಾಡುವುದು ವೇದದ ಉದ್ದೇಶವಾಗಿರದೆ ಸ್ವೇಚ್ಛೆಯಾಗಿ ಮಾಂಸಾಹಾರವನಾಡುವವನನ್ನು ನಿಲ್ಲಿಸು ವುದೇ ಅದರ ಮುಖ್ಯೋದ್ದೇಶವಾಗಿದೆ

ಯಜ್ಞಕಾಲದಲ್ಲಾದರೂ ಪಶುವಧೆಯನ್ನು ಮಾಡ ಬಹುದೆಂದು ನೆವವು ಹೇಳಿದ್ದರೂ ಆತ ಪ್ರಾಣಿಹಿಂಸೆ ಯಾಗುವುದಿಲ್ಲವೇ ಎಂಬವಾಗಿ ಕೆಲವರು ಶಂಕಿಸ ಬಹುದು ಆದರೆ, ನಾವು ದ್ವೇಷಬುದ್ಧಿಯಿಂದಲೋ ಅಥವಾ ಕೇವಲ ಸ್ವಾರ್ಥತೆಯಿಂದಲೋ ಇನ್ನೊಂದು ಪ್ರಾಣಿಯ ನ್ನು ಹಿಂಸೆಮಾಡಿದರೆ ಅದು ಹಿಂಸೆಯಾಗು ತ್ತದೆಯೇ ಹೊರತು ಹಿಂಸೆಮಾಡುವುದರಿಂದ ಆ ಪ್ರಾಣಿಗೆ ಹಿತವಾದರೆ ಅದು ಹಿಂಸೆಯಾಗುವುದಿಲ್ಲ ಹೇಗೆಂದರೆ, ಒಂದು ಹಸುವಾಗಲಿ ಅಥವಾ ಎಮ್ಮೆಗಾಗಲಿ ರೋಗವು ಪ್ರಾಪ್ತವಾದರೆ ಅದಕ್ಕೆ ಒಳಿಯನ್ನು ಹಾಕುತ್ತಾರೆ ನುತ್ತು ಕಿವಿಯನ್ನು ಕುಯ್ಯುತ್ತಾರೆ ಒಬ್ಬ ಮನುಷ್ಯನಿಗ ಒಂದು ರೋಗವು ಪ್ರಾಪ್ತವಾಗಿ ಅದು ಶಸ್ತ್ರಚಿಕಿತ್ಸೆಯನಿಸಿ ಪರಿ ಹಾರವಾಗದೇ ಇದ್ದರೆ ಅವನ ದೇಹದಲ್ಲಿ ರೋಗಗ್ರಸ್ತ ವಾಗಿರುವ ಭಾಗವನ್ನು ನೈಪುರು ಶಸ್ತ್ರದಿಂದ ಕುಯ್ಯು ತ್ತಾರೆ ಈ ಚಿಕಿತ್ಸೆಗಳನ್ನು ಹೊಂದಿದವರಿಗೆ ಹಿಂಸೆ ಯಾದರೂ ಒನರುಗಳ ಹಿತಕ್ಕೋಸ್ಕರವೇ ಶಸ್ತ್ರಚಿಕಿತ್ಸೆ ಲ ನ್ನು ಮಾಡುವದರಿಂದ ಹಾಗೆ ಮಾಡುವುದು ಹಿಂಸೆ ಆಗದೆ ಅಹಿಂಸೆಯೇ ಆಗಿರುತ್ತದೆ ಇದರಿಂತೆಯೇ ಯಜ್ಞಗಳಲ್ಲಿ ಪಶುಗಳು ಮಂತ್ರಗಳ ಸಂಸ್ಕಾರದಿಂದ ವಧಿಸಲ್ಪಟ್ಟುವುದರಿಂದ ಅವುಗ-ಗೆ ಪಶುಜನ್ಮವು ಹೋಗಿ ವೇತತಾಜನ್ಮವು ಬರುತ್ತದೆ ಒಂದುವೇಳೆ ಪಶುಗಳು ಯಜ್ಞನಲ್ಲಿ ವಧಿಸಲ್ಪಡದೆ ಇದ್ದರೆ ಅವುಗಳಿಗೆ ಪಶುಜನ್ಮವು ಹೋಗಿ ವೇತತಾಜನ್ಮವನ್ನು ಹೊಂದುವುದು ಉತ್ತಮವಾದುದಲ್ಲ ತ್ರಿದೆ ಅಮರದಿಂದ ಯಜ್ಞಗಳಲ್ಲಿ ಪಶುಗಳ ನಧೆಯು ಹಿಂಸೆಯಾಗದೆ ಅಹಿಂಸೆಯೇ ಆಗಿರುತ್ತದೆ ಇದಕ್ಕೋಸ್ಕರ ಯಜ್ಞಕ್ಕೆ 'ಅಧ್ವರ' ಎಂಬ ದೆಸರು 'ಧ್ವರ' ಎಂದರೆ ಹಿಂಸೆ ಅಧ್ವರ ಎಂದರೆ ಹಿಂಸೆ ಇಲ್ಲದ್ದು ಯಜ್ಞವು ಹಿಂಸೆ ಎಂಬುದಾಗಿ ಕರೆಯಲ್ಪಡುತ್ತದೆ ಒಂದುವೇಳೆ ಪಶುವು ಯಜ್ಞದಲ್ಲಿ ವಧಿಸಲ್ಪಡುವುದಂದ ತದಕ್ಕೆ ಉತ್ತಮಜನ್ಮವು ಪ್ರಾಪ್ತವಾಗುತ್ತದೆಂಬ ದೃಷ್ಟಿ ಯನ್ನಿಡದ ಸ್ವರ್ಗಲೋಕದಲ್ಲಿ ತನಗೆ ಭೋಗವಾಗ ಬೇಕೆಂಬ ದೃಷ್ಟಿಯಿಂದಲೇನೇ ಯಜ್ಞದಲ್ಲಿ ಪಶುವನ್ನು ಯಾರಾದರು ವಧಿಸಿದರೆ ಶ್ರೇಯಸ್ಕಾಗವೆಂದಲ್ಲಿ ಹೇಳಿ ದಂತೆ ಅದು ಹಿಂಸೆಯೇ ಆಗಿ ಯಜ್ಞವನ್ನು ಮಾಡಿದವ ರಿಗೆ ದುಃಖವನುಭವಿಸುತ್ತದ

ಸ್ವೀಕಾರ

ಹುಬ್ಬಳ್ಳಿ ಟವನ್ನಿನಲ್ಲಿರುವ ಸೌ॥ ಲಿಂಗವ್ವ ಶಿವ ಲಿಂಗಯ್ಯ ಸುರಾಣಿಕಮಠ ಇವರು ೧೪೨ ನೆಯ ಇಸವಿ ಟ್ರೇನಿಂಗ್ ಕಾಲೇಜ್ ಪರೀಕ್ಷೆಯಲ್ಲಿ ಉತ್ತೀರ್ಣರಾದ ಸಂತೋಷಕ್ಕಾಗಿ ಪ್ರಭಾಪೋಷಣಕ್ಕೋಸ್ಕರ ಸನ್ ೧೯ ಸಿವ ೬ ರೂ ಗಳು ನೇ॥ ಜಿ ವಿ ಸಿಂದೀಕೇಶ್ವರಮಠ ಹುಬ್ಬಳ್ಳಿ ಇವರ ದ್ವಾರಾ ತಲ್ಪಿರುತ್ತವೆ

ಬಳ್ಳಾರಿ ಡಿಗ್ರಿ ಕೊಟ್ಟೂರು ಗ್ರಾಮವಲ್ಲಿರುವ ಉಪ್ಪಾರಿ ಗೆಟ್ಟಿ ಮರದ ಗಂಗಮ್ಮನಹಳ್ಳಿ ಕಂತಮ್ಮಯ್ಯನವರ ಪುತ್ರ ಚಿ॥ ಸಿ.ಗಂಗಯ್ಯನಿಗೆ ರಾಣೇಬೆನ್ನೂರು ಯೋಗಿ ಮರದ ಚನ್ನಬಸವನ್ನುನವರ ಪುತ್ರಿ ಚಿ॥ ಸೌ॥ ಚನ್ನಮ್ಮನನ್ನು ಕೊಟ್ಟು ನೆರವೇರಿಸಿದ ವಿವಾಹ ಸನುಯವಲ್ಲಿ ವರನ ಕಡೆಯಿಂದ ತೆಗೆಯಿಸಿದ] ರೂಾ ಯಿಯು ವೇ॥ ಬಿ ಎಂ ರುದ್ರಮುನಿಸಿಯಯ್ಯನವರ ದ್ವಾರಾ ತಲ್ಪಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆಲ್ಲ ಶ್ರೀಷಾರವರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಸಿದ್ಧಾಂತಶಿಖಾಮಣಿ

ವೀರಶೈವಮತಸ್ಥರಿಗೆ ಜನ್ಮಸ್ಥಾನವಾದ ಶ್ರೀಶೈಲ ಪ್ರಾಂತದಲ್ಲಿ ಸಿದ್ಧಾಂತಶಿಖಾಮಣಿ ಎಂಬ ಪ್ರಾಚೀನವಾದ ಈ ಮಹಾಗ್ರಂಥವನ್ನು ಶ್ರೀಮದ್ವಿರ ರೇಣುಕಾಚಾರ್ಯರು ಸಂಸ್ಕೃತಭಾಷೆಯಲ್ಲಿ ಆಗಮಸಮ್ಮತವಾಗಿ ಬರೆದಿರುತ್ತಾರೆ. ಈ ಗ್ರಂಥದಲ್ಲಿ ಶಿವಪಾರ್ವತಿಯರ ಸಂವಾದರೂಪವಾಗಿ ಶಿವತತ್ವ, ಜೀವತತ್ವ, ಮೋಕ್ಷತತ್ವ, ಪಂಚಾಚಾರ, ಷಟ್‌ಸ್ಥಲ, ಅಷ್ಟಾವರಣ, ಪಂಚಮುದ್ರೆ, ಪಂಚಾಕ್ಷರಿ, ಷಡಕ್ಷರಿ, ಶಿವಪೂಜಾವಿಧಿ, ಲಿಂಗಧಾರಣವಿಧಿ, ಶಿವದೀಕ್ಷಾವಿಧಿ, ಶಿವಯೋಗಸಾಧನೆ, ಶಿವಾಗಮಸಂಗ್ರಹ, ಶಿವಾದ್ವೈತಸಿದ್ಧಾಂತ, ಶಿವಾದ್ವೈತಮಂಜರಿ ಮುಂತಾದ ಅನೇಕ ವಿಷಯಗಳನ್ನು ಬಹಳ ವಿಸ್ತಾರವಾಗಿ ಅತಿ ಪ್ರಾಮಾಣಿಕವಾಗಿ ಬರೆದಿರುತ್ತಾರೆ. ಅವರ ಪ್ರಾಮಾಣ್ಯಕ್ಕೆ ಸಂಸ್ಕೃತ ವೇದಾಗಮಪುರಾಣಗಳೇ ಸಾಕ್ಷಿಯಾಗಿವೆ. ಇಂಥ ಮಹಾಗ್ರಂಥವನ್ನು ಕನ್ನಡಭಾಷೆಗೆ ಭಾಷಾಂತರಿಸಿ ಪ್ರಕಟಿಸಿದ ಶ್ರೀಮದ್ವೀರಶೈವಧರ್ಮಪ್ರಚಾರಕ ಶ್ರೀಮದ್ರೇಣುಕಾಚಾರ್ಯ ಪೀಠಾಧಿಪತಿಗಳಾದ ಜಗದ್ಗುರು ಶ್ರೀ ಶ್ರೀ ಶ್ರೀ ೧೦೮ ಶ್ರೀ ಸೋಮನಾಥ ಶಿವಾಚಾರ್ಯ ಮಹಾಸ್ವಾಮಿಗಳವರ ಆಜ್ಞೆಯಂತೆ ಈ ಗ್ರಂಥವನ್ನು ಕನ್ನಡಭಾಷೆಗೆ ಭಾಷಾಂತರಿಸಿ ಪ್ರಕಟಿಸಲಾಗಿದೆ. ಈ ಗ್ರಂಥವನ್ನು ಓದಿ ಮನನಮಾಡಿಕೊಂಡವರಿಗೆ ಶಿವತತ್ವ ಜೀವತತ್ವ ಮೋಕ್ಷತತ್ವಗಳ ಸಾಕ್ಷಾತ್ಕಾರವಾಗಿ ಶಿವಾದ್ವೈತಸಿದ್ಧಾಂತ ಸಿದ್ಧಿಸುವುದು. ಆದ್ದರಿಂದ ಪ್ರತಿಯೊಬ್ಬ ವೀರಶೈವರೂ ಈ ಗ್ರಂಥವನ್ನು ಕೊಂಡು ಓದಿ ಮನನಮಾಡಿಕೊಳ್ಳಬೇಕೆಂದು ಪ್ರಾರ್ಥಿಸುತ್ತೇವೆ.

ಬೆಲೆ ಅಂಚೆಖರ್ಚು ಸೇರಿ ಅಂಚೆಯಲ್ಲಿ ಕಳುಹಿಸಿದರೆ ಒಂದು ಪ್ರತಿಗೆ ೧೦ ರೂಪಾಯಿ ಮಾತ್ರ.

ಮ್ಯಾನೇಜರು—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಸಾಮಾನ್ಯವಾದ ಫೋಟೋಗಳು.

ಜಗದ್ಗುರು ಶ್ರೀ ಶ್ರೀ ಶ್ರೀ ೧೦೮ ಶ್ರೀ ಸೋಮನಾಥ ಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ ಸೈಜು ೧೪×೧೦ ಬೆಲೆ	೦—೬—೦
ಶ್ರೀ ಶ್ರೀ ಶ್ರೀ ೧೦೮ ಜಗದ್ಗುರು ರೇಣುಕಾಚಾರ್ಯ ಸಿಂಹಾಸನಾರೂಢರಾಗಿರುವ ಫೋಟೋ ಸೈಜು ೧೪×೧೦ ಬೆಲೆ	೦—೬—೦
ಶ್ರೀ ಶ್ರೀ ಶ್ರೀ ೧೦೮ ಜಗದ್ಗುರು ರೇಣುಕಾಚಾರ್ಯ ಸಿಂಹಾಸನಾರೂಢರಾಗಿರುವ ಫೋಟೋ ಸೈಜು ೧೪×೧೦ ಬೆಲೆ	೦—೨

REGISTERED No M 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾವನಪಂಕಜಾತಜನಿತೆರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋಧಕರ್ । ಪಂಚಾಚಾರ್ಯಜಗದ್ಗುರೂತ್ತಮವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ ೪ ಆಣೆ ಪರಸ್ಥಳದವರಿಗೆ ೩ ರೂ ವಿ ಪಿ. ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೨೦] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೩ನೇ ಮೇ ೧೯೪೬ [ಸಂಚಿಕೆ ೨

ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತೀಮಹೋತ್ಸವಗಳು

—

ಹರೇಹರಕುಣಿ

ಧಾರವಾಡ ಜಿ॥ ಶಿಗ್ಗಾವಿ ತಾ॥ ಹರೇಹರಕುಣಿ ಗ್ರಾಮದಲ್ಲಿ ಪದ್ಧತಿ ಪ್ರಕಾರ ಗ್ರಾಮದ ಎಲ್ಲ ಜನರ ಸಹಾಯದಿಂದ ಹರೇಮಠದಲ್ಲಿ ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತೀಮಹೋತ್ಸವವು ತಾ॥ ೬-೫ ೧೯೪೬ ನೇ ಸೋಮವಾರ ದಿನಸ ಒಳ್ಳೇ ವೈಭವದಿಂದ ಜರಗಿತು ಈ ಉತ್ಸವಕ್ಕೆ ಕುಂದಗೋಳ ಗ್ರಾಮದ ಪಂಚಗೃಹ ಹರೇಮಠದ ಶ್ರೀ॥ ಪ॥ ಬ್ರ॥ ಚರಮೂರ್ತಿಸ್ವಾಮಿಗಳವರು ಮತ್ತು ಕೋಳಿವಾಡ ಮಹಾದೇವಪ್ಪನವರು ಮತ್ತು ಪಾನಪ್ಪನವರು ಆಗಮಿಸಿದ್ದರು ತರ್ಜಫಳಿಪ್ಪಿದ ಮತ್ತು ಸ್ವಗ್ರಾಮದ ಜನರ ಸಂಘದವರು ಉತ್ಸವದಲ್ಲಿ ಭಾಗವಹಿಸಿದ್ದರು

ಈ ಮಹೋತ್ಸವವು ಸಿಂಗಾರಿಸಿದ ಅಡ್ಡಪಲ್ಲಕ್ಕಿಯಲ್ಲಿ ಮೂರ್ತಿಗೊಳಿಸಲ್ಪಟ್ಟ ಶ್ರೀ ಜಗದ್ಗುರುಗಳ ಭಾವಪಟದಿಂದಲೂ ನಂದಿಗೋತ್ರಾಧಿಕಾರಿ ಎಂಬ ಅಭಿಧಾನವನ್ನು ಸಾರ್ಥಗೊಳಿಸಲೆನ್ನೋ ಎಂಬಂತೆ ೩೦ ಜೋಡು ಹಿಂಗಿರಿಸಲ್ಪಟ್ಟ ಎತ್ತುಗಳಿಂದಲೂ ಬ್ಯಾಂಡ ಮೊದಲಾದ ನಾನಾವಿಧ ವಾದ್ಯಗಳಿಂದಲೂ ಕೂಡಿದ್ದಲ್ಲದೆ ಎಡಒಲ ಹಳ್ಳಿಗಳಿಂದ ಬಂದ ಅನೇಕ ಜನರಿಂದ ಕೂಡಿ ಒಂದು ದೊಡ್ಡ ಜಾತ್ರೆಯು ನೆರವೇರಿದಂತೆ ಕಂಗೊಳಿಸಿತು ಉತ್ಸವದ ಸೋಮವಾರದಲ್ಲಿ ೩ ದಿವಸಗಳ ವರೆಗೆ ಜಗದ್ಗುರುಗಳ ಮಹಿಮೆಯ ಬಗ್ಗೆ ನುಡಿದಲ್ಲಿ ಭಾಷಣ ಪ್ರವಚನ ಕೀರ್ತನ ಮುಂತಾದವು ನಡೆದಿದ್ದವು

ಮಹೋತ್ಸವವು ಸಾಯಂಕಾಲ ೪ ಘಂಟೆಗೆ ಸಮಾಪ್ತಿಯಾದಮೇಲೆ ಹರೇಮಠದ ಮುಂದಿನ ಪಟಾಂಗಣದಲ್ಲಿ ಶ್ರೀ॥ ಪ॥ ಬ್ರ॥ ಚರಮೂರ್ತಿಸ್ವಾಮಿಗಳು ಕುಂದಗೋಳ ಇವರ ಅಧ್ಯಕ್ಷತೆಯಲ್ಲಿ ಸಭೆಯು ನೆರವೇರಿತು ನೊಡಲು ಪಿ ಆರ್. ಹರೇಮಠ ವಕೀಲ ಇವರು ಪ್ರಸ್ತಾವಿಕ ಭಾಷಣ ಮಾಡಿದಮೇಲೆ ಅವರ ಪುತ್ರ ದಾರುಕ ಸ್ವಾಮಿಯು ಮತ್ತು ಗದಗಿನ ಮುತ್ಸದ್ದಿಕೇಡಿ ಮಠದ ಚೆನ್ನವೀರಸ್ವಾಮಿ ಈ ಇಬ್ಬರು ಚಿಕ್ಕ ಬಾಲಕರು ವೀರ ಶೈವ ಧರ್ಮ ಮತ್ತು ಜಗದ್ಗುರು ಪಂಚಾಚಾರ್ಯರು ಎಂಬ ವಿಷಯದ ಮೇಲೆ ಪರಿಣಾಮಕಾರಕ ಭಾಷಣ ಮಾಡಿದರು ಆಮೇಲೆ ಗ್ರಾಮದ ಹರೇಮಠದ ಶಿಷ್ಯ ಪ್ರಮುಖರಾದ ಸಿದ್ದನಗೌಡ್ರು ಪಾಟೀಲ ಇವರು ಜಗದ್ಗುರುಗಳ ಸನಾತನತ್ವ ಮತ್ತು ವ್ಯಾಪಕತ್ವದ ಬಗ್ಗೆ ಉತ್ತಮವಾದ ಭಾಷಣ ಮಾಡಿದರು ಪಿ ಆರ್ ಹರೇಮಠ ವಕೀಲರು ಪುನಃ ಜಗದ್ಗುರುಗಳ ವ್ಯಾಪಕ ಧರ್ಮದ ಮೇಲೆ ಕೆಲವು ವಿಷಯಗಳನ್ನು ತಿಳಿಸಿದ ಮೇಲೆ ನೇ॥ ಪ್ರವಚನಪಟು ಸಿದ್ಧಲಿಂಗದೇವರು (ಹರೇಹರಕುಣಿ) ಇವರು ತಮ್ಮ ಅಪ್ರತಿಮವಾಣಿಯಿಂದ ನೆರೆ ಜನರಿಗೂ ಬೋಧಮಾಗುವಂತೆ ಜಗದ್ಗುರುಗಳ ಮಹತ್ವದ ಬಗ್ಗೆ ಮತ್ತು ಅವರ ತತ್ವದ ಬಗ್ಗೆ ಸರಳ ಭಾಷೆಯಲ್ಲಿ ತಿಳಿಸಿದರು ಆವರ ವಾಗ್ಝರಿಯಿಂದ ಹೊರಟ ಪಂಂಯಿಂದು ಶಬ್ದವೂ ಶ್ರೋತೃಗಳ ಹೃದಯ ದಲ್ಲಿ ನಡುತ್ತಿದ್ದಾಗ್ಗೆ, ಪಂಚಾಚಾರ್ಯರ ಪ್ರಭೆಯ ವೆಬ್ಬಳಿಯೇ ಈಗ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳ ರೂಪದಿಂದ ಹೊರಬಿದ್ದು ಗುರುವರ್ಯದೆ ಉದ್ಧಾರ ಮಾಡಿರುವ ವಿಷಯವನ್ನೂ, ಬ್ರಾಹ್ಮಣ ವಾಡಿಗೆರ ನಡುವೆ ಸಂಬಂಧವೆಲೆಸಿ ಸಾಂಕರ್ಯಮಾಡಲು ಹೋಗಿ ಭಗ್ನಮನೋರಥನಾಗಿ ಕೂಡಲಸಂಗಮದ ತೊಳಿಗೆ ಹೋಗಿ ಆಷಗಿದ ಬಸವನ ವಿಷಯವನ್ನೂ ಒಳ್ಳೇ ಸ್ಫುಟಿಕ ಯಿಂದ ಭಾಷಣಮಾಡಿದಾಗ್ಗೆ ಕೂಡಿದ ಜನರಲ್ಲಿ ಈವರೆಗೆ ಹಬ್ಬಿದ ಭ್ರಮೆಯ ಪರಿಯು ಹರಿದು ಎಲ್ಲರೂ ಜಗದ್ಗುರು ಪಂಚಾಚಾರ್ಯರ ಜಯಘೋಷವನ್ನು ಮಾಡುತ್ತಾ ಆನಂದ ಭರಿತರಾಗಿದ್ದರು ಇಂಥ ಮಹೋತ್ಸವವು ಈ ಗ್ರಾಮದಲ್ಲಿ ಎಂದೂ ಆಗಿದ್ದಿಲ್ಲ ಇಂಥ ಅಭೂತಪೂರ್ವ ವಾದ ಮಹೋತ್ಸವವನ್ನು ಯಶಸ್ವಿಯಾಗಿ ಮಾಡಲಿಕ್ಕೆ ಗ್ರಾಮದ ಹರೇಮಠದ ಅಧಿಕಾರಿಗಳಲ್ಲೊಬ್ಬರಾದ ರುದ್ರಯ್ಯಸ್ವಾಮಿಯವರ ಸಾಹಸ ಗ್ರಾಮದ ತರುಣ ಶಿಷ್ಯರ ಸಹಾಯ ಇನೇ ಮುಖ್ಯವಾಗಿದೆ

ಜಗದಾಚಾರ್ಯರ ಪ್ರಭೆಯು ಇದೇ ರೀತಿಯಾಗಿ ಭರತಖಂಡದ ಮೂಲೆಮೂಲೆಯೂ ಪ್ರವೇಶಿಸಿ ವೀರಶೈವ ಸನಾತನ ತತ್ವಗಳನ್ನು ಬೆಳಕಿಗೆ ತರಲೆಂದು ಈ ಸನಾತನ ವೀರಶೈವ ಧರ್ಮಾನಲಂಬಿಯ ಹಿರಿಯಾಶೆ

ಪ್ರತ್ಯಕ್ಷದರ್ಶಿ

—

ರಾಂಪುರ

ಯಾವ ಮಹಾತ್ಮರು ಭರತಖಂಡದಲ್ಲಿರತಕ್ಕ ಸಮಸ್ತ ಪವಿತ್ರಕ್ಷೇತ್ರ ಮಸ್ತಕ ಮಣೀಭೂತಗಳಾದ ಶ್ರೀ ಧ್ಯಾಕ್ಷಿ ರಾಮ ಉಜ್ಜಯಿನಿ ಕ್ಷೇತ್ರಗಳಲ್ಲಿ ವಿರಾಜಿಸುವ ಶ್ರೀ ಭೀಮನಾಥ ಸಿದ್ಧೇಶ್ವರ ಮಹಾಲಿಂಗಗಳಿಂದವತರಿಸಿ ಪರಮಪವಿತ್ರವಾದ ವೀರಶೈವ ಸಿದ್ಧಾಂತವನ್ನು ಭೂಮಂಡಲದಲ್ಲಿ ನೆಲೆಗೊಳಿಸಿ ವ್ಯಾಸ, ದಧೀಚಿ, ಮೊದಲಾದ ಅನಂತಜನ ಮಹರ್ಷಿಗಳನ್ನೂ ಗೌತಮೇಂದ್ರ ದೇವ ನಂದನ ಮೊದಲಾದ ಚಕ್ರವರ್ತಿಗಳನ್ನೂ ಶಿವಸಿದ್ಧಾಂ ತೋಪದೇಶದ್ವಾರಾ ಉದ್ಧರಿಸಿ ಲೋಕಪೂಜ್ಯರಾಗಿರುವ ಪರೋ ಅಂತಹ ಜಗದ್ಗುರು ಏಕೋರಾಮಾರಾಧ್ಯರ ಹಾಗೂ ದಾರುಕಾಚಾರ್ಯರ ಜಯಂತಿಗಳನ್ನು ಶಿವಮೊಗ್ಗ ದಿ॥ ಹೊನ್ನಾಳಿ ತಾ॥ ರಾಂಪುರದಲ್ಲಿ ಶ್ರೀ ಗುರುಪಾಲ ಸ್ವಾಮಿಗಳವರ ಅಪ್ಪಣೆಯ ಮೇರೆಗೆ ಆ ಊರಿನ ಪ್ರಮು ಖರೂ ರಾಂಪುರದಲ್ಲಿ ಸ್ಥಾಪಿತವಾಗಿರುವ ಶ್ರೀ ಜಗದ್ಗುರು ಪಂಚಾಚಾರ್ಯ ಭಜನೀ ಸಂಘದವರೂ ಆಯಾ ತಿಥಿಗಳಲ್ಲಿ ನೆರೆವೇರಿಸಿದರು ಉತ್ಸವವು ಬೆಳ್ಳಿಯ ಸಾಮಾಪಿನಿಂದ ಶೃಂಗರಿಸಿ ಪಂಚಕಲಶದಿಂದ ಕೂಡಿದ ಶ್ರೀ ಪಾಲಸ್ವಾಮಿ ಗಳವರ ಪಲ್ಲಕ್ಕಿಯಲ್ಲಿ ಶ್ರೀ ಜಗದಾಚಾರ್ಯರ ಲಿಂಗೋ ದ್ಭವ ಭಾವಚಿತ್ರಪಟವನ್ನು ಮೂರ್ತಗೊಳಿಸಿ ವಾದ್ಯ ವೈಭವದಿಂದಲೂ, ಭಜನಾಸಂಘದವರ ವೈತ್ಯಗಾನಗಳಂ ದಲೂ, ವೇ॥ ಬಸವಾಪಟ್ಟಣದ ಅಮಗೋಡುಮಠದ ಸಂಗಪ್ಪಯ್ಯನವರ ಮಕ್ಕಳು ಎ ಎಂ ಹಾಲಸಿದ್ಧಯ್ಯ ನವರ ಜಗದಾಚಾರ್ಯರ ಲೀಲಾಭಜನೆಯಿಂದಲೂ, ಹೊರಟು ಊರಿನ ಮುಖ್ಯ ಮುಖ್ಯ ಬೀದಿಗಳಲ್ಲಿ ಹಾಯ್ದು ರಾತ್ರಿ ೧೧ ಘಂಟೆಗೆ ಶ್ರೀ ಸ್ವಾಮಿಯಕಳ್ಳು ಮಠಕ್ಕೆ ಒಂದು ತಲಪಿತು ಶ್ರೀ ಹಾಲಸ್ವಾಮಿಗಳವರು ತಮ್ಮ ಅಮೃತವಾಣಿಯಿಂದ ಶ್ರೀ ಜಗದಾಚಾರ್ಯರ ಅವತಾರ, ಶ್ರೀ ಗುರುಸಪ್ತ(ಗ)ತ್ಕಮತ್ಕೃ, ವೀರಶೈವ ಮತತತ್ತ್ವ ಜಯಂತಿ ವಿಜಾರ ಇವುಗಳನ್ನು ಕುರಿತು ಒಂದು ಘಂಟೆಕಾಲ ಭಾಷಣಮಾಡಿ ಇನ್ನು ಮುಂದೆ ಒರ ತಕ್ಕ ಜಗದಾಚಾರ್ಯರ ಜಯಂತಿಯನ್ನೂ ಮಾಡಬೇ ಕೆಂದು ತಿಳಿಸಿದರು ಆಮೇಲೆ ಉಯ್ಯಘೋಷಣೆಯಿಂದ ಸಭೆಯು ಮುಕ್ತಾಯವಾಯಿತು ಈ ಮಹಾಕಾರ್ಯಕ್ಕೆ ಅಂಕಿತಬದ್ಧರಾದ ಶ್ರೀ ಪಾಲಸ್ವಾಮಿಮಠದ ವೇ॥ ಮುರಿಗ ಪ್ಪಯ್ಯ, ಪಾಲಪ್ಪಯ್ಯನವರೂ ಪೆಜ್ಜಾಸ್ವರ್ರಾದ ವೇ॥ ಗುರು.ದೇವರ ಹಾಲಪ್ಪಯ್ಯನವರೂ, ರಾಂಪುರಮಠದ ವೇ॥ ಪಾಲಪ್ಪಯ್ಯ, ಸಣ್ಣಪಾಲಪ್ಪಯ್ಯನವರೂ ವೇ॥ ಶಿರಿ ಗೆರೆಮಠದ ಹಾಲಪ್ಪಯ್ಯ ಇವರ ಮಕ್ಕಳು ಪಾಲಸಿದ್ಧ ಪ್ಪಯ್ಯನವರೂ ವೇ॥ ಕೆ ಎಂ ಬಸಪ್ಪಯ್ಯನವರೂ ಮಿ॥ ರಾ॥ ಪಟೇಲ್ ದೊಡ್ಡಪಾಲಪ್ಪ, ಸಣ್ಣಪಾಲಪ್ಪ ಮಿ॥ ರಾ॥ ಗೌಡ್ರುತಿರುಕಪ್ಪ, ರಾಮಪ್ಪ, ಕಾಯಕಪ್ಪ ಬಸಪ್ಪ, ಆರ್ ಜಿ ರುದ್ರಪ್ಪ, ಮಿಡಲ್‌ಸ್ಕೂಲ್ ಮಾಸ್ಟರ್ ಮಿ॥ ರಾ॥ ಆರ್ ಎಸ್ ಬಸಪ್ಪ, ರುದ್ರಪ್ಪ, ಮಿ॥ ರಾ॥ ಆರ್ ಜಿ ಚನ್ನಪ್ಪ ಸ್ಕೂಲ್‌ಮಾಸ್ಟರು ಉದ್ಧಾತಿಮ್ಮಣ್ಣನವರ ಹಾಲಪ್ಪ ಮಿ॥ ರಾ॥ ಗಿರಿಯಪ್ಪ ಹೊಟ್ಟಣ್ಣನವರ ಹಾಲಪ್ಪ ಮೊದಲಾದ ಭಕ್ತಾದಿಗಳಿಗೆ ಶ್ರೀ ಜಗದಾಚಾರ್ಯರು ಆಯುರಾರೋಗ್ಯಭಾಗ್ಯವನ್ನು ಕೊಡಲೆಂದು ಪ್ರಾರ್ಥಿಸುತ್ತೇನೆ

ಎ ಎಂ ಹಾಲಸಿದ್ಧಯ್ಯ ಬಸವಾಪಟ್ಟಣ.

—

ಸಮಾಜವು ಇಷ್ಟುಮೇಲಾದರೂ ಕಣ್ಣೆರೆಯುವುದೆ ?

—

ಮಂಗಲಗಳಿಗೆ ಮಂದಿರವೆನಿಸಿರುವ ವೀರಶೈವ ಮತವು ವೇದಾಗಮೇತಿಹಾಸಸ್ಮೃತಿಪಾಪ್ಯವಾದದ್ದು ಪುರಾತನ ಕಾಲದಿಂದಲೂ ಸರ್ವತೋಮುಖವಾಗಿ ಅಭಿವೃದ್ಧಿ ಯನ್ನು ಪಡೆದು ಕಂಗೊಳಿಸಿದ ವಿಷಯವು ಸುಜ್ಞರಿಗೆ ತಿಳಿದುದಾಗಿದೆ ಶ್ರೀಮತ್ಸಕ್ಷರೇತಿನೆ ಪಂಚಮುಖಕಮಲ ಗಳಿಂದ ಆವತರಿಸಿದ ಶ್ರೀರೇಣುಕಪಾರುಕಾಚ್ಯಾಜಾ ರ್ಯರು ಭೂಲೋಕದಲ್ಲಿ ಸೋಮೇಶ್ವರಾದಿಲಿಂಗಗಳಿಂದ ಕೋರಿ ವೀರಶೈವ ಮತವನ್ನು ನೆಲೆಗೊಳಿಸಿ ಆವರ ಪರಿವಾಲನೆಗಾಗಿ ಪಂಚಪೀಠಗಳನ್ನು ರಂಭಾಪುರಿ, ಉಜ್ಜಯಿನಿ, ಕೇದಾರ, ಶ್ರೀಶೈಲ, ವಾರಾಣಸಿ ಈ ಐದು ಪವಿತ್ರಸ್ಥಳಗಳಲ್ಲಿ ಸ್ಥಾಪಿಸಿದ್ದು ಜಗದ್ವಿದಿತವಾಗಿರುತ್ತದೆ. ಈ ಮತದ ತತ್ವಗಳು ತೇಜೋಮಯವಾಗಿದ್ದು ಉದಾತ್ತವಾಗಿರುವವು ಪೂರ್ವದಲ್ಲಿ ಅಪ್ರತಿಹತ

(೩ನೆಯ ಪುಟವನ್ನು ನೋಡಿ)

ಗೋಮೇಧದ ನಿಜವಾದ ಅರ್ಥ

(ಲೇ—ಶ್ರೀ ಚಕ್ಷಕವಿ, ಸೂರತ್‌ಗೀಡ)

ಆರ್ಯರ ವೈದಿಕಯಜ್ಞವಲ್ಲಿ ಪಶುಬಾಚಕ ರಬ್ದವು ಬರುತ್ತಿದೆ ಆದ್ದರಿಂದ ವೇದವಜ್ಞಾನಾತ್ಮಕ ತೈಲಿಯಿಂದ ಕೆಲವುಜನ ಜಾಸ್ತಾನಭಿಜ್ಞರು ಆ ಪಶುವನ್ನು ಗೋಮೇಧ ವೆನ್ನಾಗಿ ತಿಳಿಯುತ್ತಾರೆ ಆದರೆ ಇದು ಅವರ ಬ್ರಮೆ ಯಾಗಿದೆ ಏಕೆಂದರೆ—

ಪುಷ್ಟಿಂ ಪಶೂನಾಂ ಪರಿಜಗ್ರಭಾಹಂ ಚತುಷ್ಪದಾಂ ದ್ವಿಪದಾಂ ಯಜ್ಞೆ ಧಾನ್ಯಂ। ಪಶ್ಯಃ ಪಶೂನಾಂ ರಸಮೌಷಧೀನಾಂ ಬೃಹಸ್ಪತಿಃ ಸವಿತಾ ನೋ ನಿಯಚ್ಛಾತ್ ॥

ಆಥರ ವೆ ದರ್ಭ ೪೧೪

ಇದರ ಅರ್ಥ—ನಾನು ಪಶುಗಳಿಂದ ಬಲವನ್ನು ತೆಗೆದುಕೊಳ್ಳುತ್ತೇನೆ ಎರಡು ಕಾಲುಗಳಿಂದಲೂ ಬಲವನ್ನೂ ಮತ್ತು ಧಾನ್ಯವನ್ನೂ ತೆಗೆದುಕೊಳ್ಳುತ್ತೇನೆ ಪಶುಗಳಿಂದ ಪಾಲನ್ನೂ ಔಷಧಿಗಳಿಂದ ರಸವನ್ನೂ ಪ್ರಿಜಸ್ಪತಿಯಾದ ಸವಿತೃದೇವನು ನನಗೆ ಕೊಟ್ಟನು

ಇದರಿಂದ ಪಶುಮಾಂಸವು ಹೇಳ್ಬರಲಿಲ್ಲ ಕೆಂತು ಹಾಲನ್ನು ತೆಗೆದುಕೊಳ್ಳಿರೆಂದು ಮಾತ್ರ ಹೇಳಿದ್ದಾಗಿದ

(೧) ಆಹರಾಮಿ ಗವಾಂ ಕ್ಷೀರಮಹಾರ್ಷ್ಯಂ ಧಾನ್ಯಂ ರಸಂ। ಆಥರ ೪ ೬೪

(೨) ಸಂಪಿಣಾಮಿ ಗವಾಂ ಕ್ಷೀರಂ ಸವಿತ್ರಾಹಂನ ಬಲಂ ರಸಂ। ಆಥರ ೪ ೬೪

(೩) ಇಹ ಪುಷ್ಟಿರಿಹ ರಸಃ। ಆಥರ ೪ ೬೪

ಅರ್ಥ—(೧) ನಾನು ಗೋವಿನಿಂದ ಹಾಲನ್ನು ತೆಗೆದುಕೊಳ್ಳುತ್ತೇನೆ ಭೂಮಿಯಿಂದ ಧಾನ್ಯವನ್ನೂ ಔಷಧಿಗಳಿಂದ ರಸವನ್ನೂ ತೆಗೆದು ತಿನ್ನುತ್ತೇನೆ (೨) ನಾನು ಆಕಳ ಹಾಲಿನಿಂದ ಸಂಪಡಿಸುತ್ತೇನೆ ಮತ್ತು ತುಪ್ಪದಿಂದ ಬಲವರ್ಧಕವಾದ ರಸವನ್ನು ತೆಗೆದು ಸೃತ್ತೇನ (೩) ಆಕಳಿನಲ್ಲಿ ಪುಷ್ಟಿಯಿದೆ, ರಸವಿದೆ

ವೇದಗಳ ಈ ವಾಸ್ತವಿಕಾರ್ಥವನ್ನು ವ್ಯಾಸದೆಲ್ಲಲ್ಲು ಕೊಂಡು ಮಂತ್ರಾರ್ಥವನ್ನು ಸಾಧಕಬಾಧಕಪ್ರಮಾಣಗಳಿಂದ ಅರ್ಥಮಾಡುವುದು ಸುಜ್ಞರ ಮೂತಾಗಿದೆ ಇಲ್ಲವಾದರ ಅನರ್ಥವನ್ನುಂಟುಮಾಡುತ್ತದೆ ಯಾವುದು ವಾಸ್ತವಿಕಾರ್ಥವನ್ನು ಮಾಡದೆ ಪಶುಗಳ ಅಂಗಗಳಿಂದ ಹವನ ಮಾಡುತ್ತಾನೆಯೋ ಅವನಿಗೆ ವೇದವು ಅಜ್ಞಾನೆಂದು ಹೇಳುತ್ತದೆ ಇದೇ ಅರ್ಥವು ಕೆಳಗಿನ ಮಂತ್ರದಲ್ಲಿ ಹೇಳಲ್ಪಟ್ಟದೆ.

ಮುಗ್ಧಾ ದೇವಾ ಉ ಪಶವಾ ಯಜಂತೋತ ಗೌರಂಗ್ಯೈಃ ಪುರುಧಾ ಯಜಂತೆ। ಆಥರ ೬-೫ ॥

ವಿಚಾರಮಾಡಿದ್ದಾದರೆ ಗೋವಿಗೆ ವೈದಿಕವಾಙ್ಮಯದಲ್ಲಿ ಅಘ್ನ್ಯೆ (ಅವಧ್ಯ) ಮತ್ತು ಯಜ್ಞಾರ್ಹೆ ಅಧ್ವರೆ (ಹಿಂಸಾರಹಿತವಾದ ಕರ್ಮ) ಎಂದು ಹೇಳಿದೆ ಈ ಮಂತ್ರದ ಪ್ರಿಯೂ ಗೋಮಾಂಸಭಕ್ಷಕ ಯಾಜಕರಿಗೆ ನುಂಡಯಾ ಜಳರೆಂದು ಹೇಳುವವರಿಂದ ಗೋಮೇಧದಲ್ಲಿ ಗೋಹಿಂಸೆಯಾಗಲಿ, ಗೋಮಾಂಸಹವನವಾಗಲಿ ಎಷ್ಟೂ ಸಂಬಂಧಿಸುವುದಿಲ್ಲ ಶಾಸ್ತ್ರವಿಹಿತ ವೈದಿಕಯಜ್ಞದಲ್ಲಿ ಗೋಮಾಂಸಪ್ರಯೋಗವು ಎಲ್ಲಿಯೂ ಸಿಗುವದಿಲ್ಲ ಇದಕ್ಕೆ ಅನೇಕ ಪ್ರಮಾಣಗಳು ನಾಲ್ಕು ವೇದಗಳಲ್ಲಿಯೂ ಸಿಗುತ್ತವೆ ಗೋಮೇಧವಿಷಯಕವಾದ ಎರಡು ಸೂತ್ರಗಳು ಅಥರ್ವವೇದದಲ್ಲಿ ಸಿಗುತ್ತವೆ ಅವುಗಳ ಅರ್ಥವನ್ನು ಗೋಮಾಂಸಾಹಾರಿಗಳಾದ ವಿದ್ವಾಂಸರು ಗೋಮಾಂಸಭಕ್ಷಣಕ್ಕೆ ಪೋಷಣವನ್ನಾಗಿ ಮಾಡುತ್ತಾರೆ ಅವುಗಳ ಅರ್ಥ ವಿವರಣೆಯನ್ನು ಈ ಲೇಖದಲ್ಲಿ ವಿಮರ್ಶಿಸಿದ್ದಾಗಿದೆ.

ಅಥರ್ವವೇದಾಂತರ್ಗತ ಗೋಮೇಧದ ಪ್ರಥಮ ಸೂತ್ರಗಳು, ಅಥರ್ವಣವೇದದ ೧೦ ನೆಯ ಕಾಂಡದ ೯-೧೦ ಸೂತ್ರಗಳು ಗೋಮೇಧದ ವಿಷಯಕಗಳಾಗಿದೆ ಅವುಗಳಲ್ಲಿ ಪ್ರಥಮತಃ ೯ ನೆಯ ಸೂತ್ರದ ಮಂತ್ರಗಳನ್ನು ಅರ್ಥಸಹಿತವಾಗಿ ಮುಂದೆ ಕೊಟ್ಟಿದೆ

ಅಥಾಯತಾಮುಪಿ ನಹ್ಯಾಮುಷ್ಯಾಯಿ ಸಪತ್ನೇಷು ನಜ್ರಮಪರ್ಯೆಂ। ಇಂದ್ರೇಣ ದತ್ತಾ ಪ್ರಥಮಾ ಶತೌದನಾ ಬ್ರಾಹ್ಮಣೇನ್ಯೇ ಯಜಮಾನಸ್ಯ ಗಾತುಃ ॥೧॥

ಹಾನವನ್ನು ಮಾಡುವವರ ಮುಖವನ್ನು ಒಂದು ನೂಡಿ ವ್ಯರಿಗಳ ಮೇಲೆ ಆ ರಬ್ಬವನ್ನು ಹೂಡಿರಿ ಯಜಮಾನನಿಗೆ ಯಶಸ್ಸನ್ನು ಕೊಡುವ ಮತ್ತು ಶತ್ರುಗಳನ್ನು ನಾಶಮಾಡುವ ಶತೌದನಯನ್ನು ಇಂದ್ರನು ನೊದಲು ಕೊಟ್ಟನು (ಶತೌದನೆಯೆಂದರೆ ನೂರು ಮನುಷ್ಯರ ಭೋಜನಕ್ಕೆ ಸಾಕಾಗ ಸಷ್ಟು ಅಂಲನ್ನು ಕೊಡುವ ಆಕಳವು ಹೆಸರು)

ವೇದಿಷ್ಟೆ ಚರ್ಮ ಭನತು ಬರ್ಹಿರ್ಲೋಮಾನಿ ಯಾನಿ ತೆ। ಏಷಾ ತ್ವಾ ರಸನಾಗ್ರಹೀತ್ ಗ್ರಾವಾ ತ್ವೈಷೋತಧಿನೃತ್ಯತು ॥೩॥

ಓ ಆಕುತ್ತೇ, ನಿನ್ನ ಚರ್ಮವು ಕಜ್ಜೆಯಾಗಲಿ ಕೂಡಲ ಗಲು ಬರ್ಹಿದರ್ಭೆಯ ಸ್ಪಾನದ ಮೇಲೆ ಇರಲಿ ಈ ಪಗ್ಗವು ನಿನ್ನನ್ನು ಉತ್ತನು ರೀತಿಯಿಂದ ಧಾರಣ ಮಾಡಲಿ ಈ ಉಜ್ಜುಗಲ್ಲು ನಿನ್ನ ಮೇಲೆ ನೃತ್ಯ ವನ್ನು ಮಾಡಲಿ

ಜಾಲಾತ್ತೇ ಪ್ರೋಕ್ಷಣೇ ಸಂತು ಜೆಹ್ಯಾ ಸಂ ನಾಪ್ಪರ್ಣಶ್ಚೈಷ್ಟೇ ಶುದ್ಧಾ ತ್ವಂ ಯಜ್ಞೀಯಾ ಭೂತ್ವಾ ದಿವಂ ಪ್ರೇಹಿ ಶತೌದನೇ ॥೩॥

ನಿನ್ನ ಬಾಲವನ್ನು ಪವಿತ್ರ ಲನ ಸ್ಥಾನದ ಮೇಲೆ ಇರಲಿ ಎಲೆಗೆ ಕೊಲಿಲೆ ಅಯೋಗ್ಯವಾದ ಆಕಳ ನೇ ನಿನ್ನ ನಾರಿಗೆ ನಿನ್ನನು ಸ್ಪರ್ಶವನ್ನಾಗಿ ಮಾಡಲ ಎಲೂ ಶತೌದನಯೇ ನೀನು ಶುದ್ಧ ಯಜ್ಞೀಯವಾಗಿ ಸ್ವರ್ಗಕ್ಕೆ ಹೋಗು

ಯಃ ಶತೌದನಾಂ ಪಚತಿ ಕಾಮಪ್ರೇಣ ಸಕಲ್ಪತೇ ಪ್ರೀತ್ಯಾ ಹ್ಯಸ್ಯಕ್ಕಿರ್ದಜಃ ಸರ್ವೇ ಯಂತಿ ಯಥಾಯಥಂ ॥೪॥

ಯಾವಾತನು ಶತೌದನೆಯನ್ನು ಪಾಲನಪೋಷಣದಿಂದ ಪುಷ್ಟಿಯನ್ನಾಗಿ ಸಾಧಾತ್ಪಾನರೆಯೇ ತವನ ಇಚ್ಛೆಯು ಪೂರ್ಣವಾಗುತ್ತದೆ ಅವನ ಸರ್ವ ಮಿತ್ರರು ಸಂತುಷ್ಟರಾಗಿ ಅವನ ಇಚ್ಛೆಯು ಎಲ್ಲಿ ಆಗುತ್ತೆದೆಯೋ ಅಲ್ಲಿಗೆ ಹೋಗುತ್ತಾರೆ

ವರ್ತಮಾನಸಂಗ್ರಹ

ಬ್ರಿಟಿನ್ನಿನಲ್ಲಿ ಆಣು ಬಾಂಬಿನ ಸಂಶೋಧನೆ ನಡೆಸಲು ೧,೯೧೦೦೦ ಪೌಂಡುಗಳನ್ನು ಬ್ರಿಟಿಷ್ ಸರ್ಕಾರ ಕೊಡಲಿದೆ

ಭಾರತವಲ್ಲಿ ಯಾವ ರಾಜಕೀಯ ಬದಲಾವಣೆ ಆದರೂ ಬ್ರಿಟಿಷ್ ವ್ಯಾಪಾರ ಸಂಸ್ಥೆಯವರ ಹಣ್ಣನ್ನು ಕಾಯಲಾಗುವುದೆಂದು ಭರವಸೆ ಕೊಡಲಾಗಿದೆಯೆಂತೆ

ಜೊಂಪಾಯ ಪ್ರಾಂತ್ಯದಲ್ಲಿ ಬ್ಲಾಕ್‌ಮಾರ್ಕೆಟ್ ಮತ್ತು ಲಂಚ ನಿರ್ಮೂಲ ಮಾಡಲು ಒಂದು ಪ್ರತ್ಯೇಕ ಇಲಾಖೆಯನ್ನು ಸ್ಥಾಪಿಸಲಿದ್ದಾರೆ

ಈಜಿಪ್ಟಿನ ಸೈನ್ಯ ಮತ್ತು ಈಜಿಪ್ಟಿನ ಮೂಲಕ ಸೈನ್ಯ ಹೋಗುವ ಅಧಿಕಾರವನ್ನು ವಿಶ್ವದ ಶಾಂತಿಪಡೆಗೆ ನೆಹರು ಸಲಕ್ಯಾಂಟ್ ಕೌನ್ಸಿಲಿನಲ್ಲಿ ಒಂದು ವಿಶೇಷ ಒಪ್ಪಂದಕ್ಕೆ ಬರಲಾಗುವುದೆಂದು ಈಜಿಪ್ಟಿನ ಪ್ರಧಾನಿಯನು ಪಾರ್ಲಿಮೆಂಟಿನಲ್ಲಿ ತಿಳಿಸಿದ್ದಾರೆ

ಫ್ರಾನ್ಸ್, ಜರ್ಮನಿ ಪ್ರಬಲವಾಗುತ್ತವೆಂಬ ಭೀತಿ

ಪ್ಯಾರಿಸ್ಸಿನ ವಿದೇಶ ಮಂತ್ರಿಗಳ ಸಮ್ಮೇಳನವು ಆಯ ಕಸ್ಮಿಯಾದ ಬಗ್ಗೆ ಯೂರೋಪ್ ಇಜ್ಜಾಗವಾಗಿ ಸೋವಿಯೆಟ್ ಮತ್ತು ಪಶ್ಚಿಮ ಭಾಗಗಳಾಗಿ ವಿಂಗಡನಾಗುವ ಹೆದರಿಕೆ ಈಗ ವಿಶೇಷವಾಗಿ ಹೆಚ್ಚುತ್ತಿದೆ ಜರ್ಮನಿಯನ್ನು ೪೦ ವರ್ಷಗಳ ಕಾಲ ಅಧಿಕಾರದಲ್ಲಿ ಇಟ್ಟು ಕೆಲ್ಸಬೇಕೆಂದು ಅಮೆರಿಕದ ಪ್ರತಿನಿಧಿಯಾದ ಜೇಮ್ಸ್ ಬೈರ್ನ್ಸ್‌ರವರು ಒಂದು ಸೂಚನೆ ತಯಾರಿಸಿದ್ದಾರೆ ಇದಕ್ಕೆ ಇತರ ರಾಷ್ಟ್ರಗಳು ಒಪ್ಪಿದಲ್ಲಿ ಈಗ ಉಂಟಾಗಿರುವ ಒಡಕು ಸರಿಹೋಗಬಹುದೆಂದು ರಾಜಕೀಯ ತಜ್ಞರು ಅಭಿಪ್ರಾಯಪಡುತ್ತಾರೆ ನೊದಲು ಈ ಸೂಚನೆಗೆ ಬ್ರಿಟಿಷ್ ಪ್ರತಿನಿಧಿಯಾದ ಬೆವಿನ್‌ರವರು ಒಪ್ಪಲಿಲ್ಲ ನೆಂದೂ ಅವನತರ ಆದಕ್ಕೆ ಸಮ್ಮತಿ ಕೊಟ್ಟರೆಂದೂ ತಿಳಿಯಬಂದಿದೆ ಚರ್ಚುಗಳು ಒಂದು ಕಡಾರು ಮಾಡಿಕೊಂಡು ಆದರಲ್ಲಿ ಜರ್ಮನಿಯನ್ನು ಶಾಂತಿಯುತವಾಗಿ ಟ್ಯುಕೊಳ್ಳಲು ೫೫ ವರ್ಷ ತನ್ನು ಪರ್ಚೆಟಿಯಲ್ಲಿರಬೇಕೆಂದು ತಿಳಿಸಲಾಗಿದ ಯೂರೋಪಿನಲ್ಲಿ ಶಾಂತಿ ನೆಲೆಸಲು ಮಾಡುವ ಪ್ರಯತ್ನಗಳು ಸಫಲವಾದಲ್ಲಿ ಮೇಲ್ಕಂಡ ಸೂಚನೆಯನ್ನು ಸ್ಯಾಂಸ್ ಸಮ್ಮೇಳನದಲ್ಲಿ ಅಂಗೀಕರಿಸಬೇಕೆಂದು ಬೈರ್ನ್ಸ್‌ರವರು ಪ್ಯಾರಿಸ್ಸಿಗೆ ತೆಗೆದುಕೊಂಡು ಹೋಗಿದ್ದರು ಜರ್ಮನಿಯು ಯಾವ ರಾಜಕೀಯವಲ್ಲೂ ಕೈಯಾಕದಂತೆ ಚರಾರಾಷ್ಟ್ರಗಳು ನೋಡಿಕೊಳ್ಳುವುದೇ ಈ ಸೂಚನೆಯ ಉದ್ದೇಶವಾಗಿದೆ ಆದರೆ ರಷ್ಯದರು ಈ ಸೂಚನೆಯನ್ನು ತೀವ್ರವಾಗಿ ಪ್ರತಿಭಟಿಸಿ ತಿರಸ್ಕರಿಸಿದರು ಈ ಕಾರಣದಿಂದ ಉಂಟಾದ ಒಡಕಿನಿಂದ ಪಶ್ಚಿಮ ಯೂರೋಪಿನಲ್ಲಿ ಫ್ರಾನ್ಸ್ ಮತ್ತ ಜರ್ಮನಿಗಳು ಪ್ರಬಲ ನಾಗುವನೆಂಬ ಭೀತಿಯು ಅಮೆರಿಕಾಕ್ಕೆ ಇದೆ. ಕನ್ಯೂಸಿಸ್ಸ್ ಪ್ರಭಾವಕ್ಕೆ ಜರ್ಮನಿ ಒಳಗಾಗುತ್ತವೆಂದು ಫ್ರೆಂಚಿಗೆ ಹೆದರಿಕೆಯುಂಟಾಗಿದೆ ಅಲ್ಲದೆ ಬ್ರಿಟಿಷರು ಸಹ ಜರ್ಮನಿಯು ರಷ್ಯದ ಪ್ರಭಾವದ ಸುಳಿಯೊಳಗ ಸಿಕ್ಕ ದಂತೆ ಪ್ರಯತ್ನಿಸುತ್ತಿದ್ದಾರೆ ಬ್ರಿಟಿಷ್ ಆಧಿಕಾರವಿರುವ ಜರು ನ್ ಪ್ರದೇಶದಲ್ಲಿ ಪ್ರಭಾವಯುತವಾದ ನವ ಜರ್ಮನಿಯೊಂದು ತಲೆಯೆತ್ತುತ್ತಿದೆಯೆಂದು ರಷ್ಯದರು ಬ್ರಿಟಿಷರನ್ನು ದೂರುತ್ತಿದ್ದಾರೆ

ನಿರೋಪ್ಯ ಸಂಯುಕ್ತಸಂಸ್ಥಾನ ರಚಿಸಬೇಕು

ವಿಶ್ವಸಂಸ್ಥೆಯ ಆಶ್ರಯದಲ್ಲಿ ಯೂರೋಪಿನ ಪೂರ್ವ ಮತ್ತು ಪಶ್ಚಿಮ ರಾಷ್ಟ್ರಗಳೆಲ್ಲ ಸಹಕರಿಸಿ ಯೂರೋಪಿನ ಸಂಯುಕ್ತಸಂಸ್ಥಾನಗಳನ್ನು" ಏರ್ಪಡಿಸಿದ್ದೇ ಆದರೆ, ಅವರಿಂದ ಈ ಖಂಡದಲ್ಲಿ ವಿಳಿಗೆಯುಂಟಾಗುತ್ತದೆ, ನ್ಯಾಯ ದೊರಕಿ ಚಿರಶಾಂತಿ ಏರ್ಪಡುತ್ತದೆ ಹೀಗೆಂದು ಬ್ರಿಟನ್ನಿನ ಟೋರಿ ಪಕ್ಷದ ನಾಯಕ ಚರ್ಚಿಲ್‌ರು ಸರ್ಜಾರ್ಲಿಮೆಂಟಿನ ಅಧಿವೇಶನದಲ್ಲಿ ಸೂಚಿಸಿದರು ಇದರಿಂದ ವಿಶ್ವರಕ್ಷಣೆಗೂ ಕೂಡ ಸಹಾಯವಾಗುತ್ತೆಂದು ಹೇಳಿದರು 'ಬ್ರಿಟನ್ ಮತ್ತು ಅಮೆರಿಕಾಗಳು ನಿಕಟ ಸ್ನೇಹ ಪಡೆದಿವೆ ಆ ಸ್ನೇಹವನ್ನು ವಿಶ್ವಶ್ಯೇ ಕ್ಷೇಮ ಅಪೇಕ್ಷಿಸಿ ರಷ್ಯದೊಡನೆ ಅಗಿರುವ ೨೦ ವರ್ಷದ ಕರಾರು ಕೂಡ ವಿಶ್ವಶಾಂತಿ ಸಾಲನೆಗೆ ಮತ್ತು ಭದ್ರತೆಗೆ ಒಂದು ಭರವಸೆಯಂತಿದೆ ಎಂದರು ರರ್ಜ್ ಪಾರ್ಲಿಮೆಂಟ್ ಸಭಿಕರು ಸೊದಲಿಂದ ಕೊನೆಯವರೆಗೂ ಚರ್ಚಿಲರನ್ನೇ ಹೊಗಳುತ್ತಿದ್ದರು ವಿರೋಧ್ಯ ಸಂಯುಕ್ತ ಸಂಸ್ಥಾನಗಳ ಸ್ಥೇರ್ಪಡಿಸಬೇಕು ಎಂದು ಚರ್ಚಿಲ್ ಹೇಳಿದಾಗ ಸದಸ್ಯರು ಸಂತೋಷ ವ್ಯಕ್ತಪಡಿಸಿದರು

ಈಜಿಪ್ಟಿನಿಂದ ಬ್ರಿಟಿಷ್ ಸೈನ್ಯ ಹೋಗಬೇಕು

ಈಜಿಪ್ಟಿನಿಂದ ಬ್ರಿಟಿಷ್ ಸೈನ್ಯವನ್ನು ವಾಪಸ್ ಕರೆಸಿಕೊಳ್ಳಲು ಕರಿನಿಪ್ಪಕ್ಷ ಒಂದು ವರುಷವಾದರೂ ಬೇಕು ಎಂದು ಬ್ರಿಟನ್ ಕೇಳುತ್ತಿದೆ, ಆದರೆ ಈಜಿಪ್ಟ್ ಒಂದು ವರ್ಷ ಅವಕಾಶ ಕೊಡಲು ಸಾಧ್ಯವಿಲ್ಲವೆಂದೂ ಆರುತಿಂಗಳಿಗಾಗಿಯೇ ಸೈನ್ಯವನ್ನು ವಾಪಸ್ ಕರೆಸಿಕೊಳ್ಳಬೇಕೆಂದೂ ಒತ್ತಾಯ ಪಡಿಸುತ್ತಿದೆ

ಕಳೆದ ಗುರುವಾರ ಈಜಿಪ್ಟ್ ಕರಾರಿನ ತಿದ್ದುಪಡಿ ಬಗ್ಗೆ ಸಂಧಾನ ಪ್ರಾರಂಭವಾಯಿತು ಸಿದ್ಧಿಕಿ ಪಾಷಾರವರು ನೈಲ್‌ಕ್ರದೇಶದ ಸ್ವಾತಂತ್ರ್ಯ ಕುರಿತುಚರ್ಚೆ ಪ್ರಾರಂಭಿಸಿದರು ಮೊದಲು ಅವರು ಯುದ್ಧದಿಂದ ಆಗಿರುವ ಹಣಾ

ಮವನ್ನು ವಿನಂತಿ ಪ್ರತಿಯೊಬ್ಬರೂ ಅವರವರ ದೇಶದಲ್ಲಿ ಸ್ವತಂತ್ರರಾಗಲು ಹೆಚ್ಚುಳಿವರಾಗಿದ್ದಾರೆ ಆ ಹಕ್ಕನ್ನು ಕಾಪಾಡಿಕೊಂಡು ಬರುವುದೇ ಎಲ್ಲದೇಶಗಳ ಕರ್ತವ್ಯ ಎಂದು ತಿಳಿಸಿದರು

ನಮಗೆ ಈ ದ್ವಿತೀಯ ಸಂಗ್ರಾಮದಲ್ಲಿ ಜಯಗಳಿಸಿ ಕೊಟ್ಟ ಬಿಲಿಟಿರಿ ಸೌಖ್ಯವನ್ನು ಉಳಿಸಿಕೊಂಡು ಒರು ಮದೇ ನಮ್ಮ ಮುಖ್ಯೋದ್ದೇಶ! ಮುಂದೆ ನಾವು ಯಾವ ರೀತಿ ವರ್ತಿಸಬೇಕೆಂಬುದನ್ನು ನಿರ್ಧರಿಸುವುದೇ ಇಂದಿನ ಸಂಘಾನದಲ್ಲಿ ಮುಖ್ಯ ಈಗಿನ ಸಂಘಾನದಿಂದ ಹೊರ ಬೀಳ್ವ ಒಕ್ಕೂದ ಮುಂದೆ ಈಜಿಪ್ಟ್ ಮತ್ತು ಪ್ರಿಟ್ಗಳ ಮಧ್ಯರ ಬಾಧ್ಯವ್ಯಕ್ಕೆ ತಳಹದಿಯಾಗುತ್ತೆಂದು ಭಾವಿಸಿದ್ದೇನೆ ಎಂದು ಪ್ರಿಟಿಷ್ ನಿಯೋಗದ ನಾಯಕ ಲಾರ್ಡ್ ಸ್ಯಾನ್ಸ್‌ಗೆಟಿರವರು ತಿಳಿಸಿದರು

ಈಜಿಪ್ಟ್ ವಿದೇಶಾಂಗ ಕಛೇರಿಯಲ್ಲೇ ಸಂಧಾನ ಪ್ರಾರಂಭವಾದದ್ದು, ಪತ್ರಿಕಾ ಪ್ರತಿನಿಧಿಗಳು ಮತ್ತು ಅಧಿಕಾರಿಗಳ ವಿನಾ ಮತ್ತಾರಿಗೂ ಪ್ರವೇಶವಿರಲಿಲ್ಲ ಸುತ್ತಲೂ ಪೋಲೀಸ್ ಪಹರೆ ವಿಶೇಷವಾಗಿತ್ತು ಪ್ರಿಟಿಷ್ ಸಲಹೆಗಾರರಾದ ಸರ್ ಕೆನ್ನಾನ್ ಕಾಸ್ಟ್ ವಾಲ್ಸರವರು ಆನಾರೋಗ್ಯದ ನಿಮಿತ್ತ ಸಂಧಾನದಲ್ಲಿ ಭಾಗವಹಿಸಿರಲಿಲ್ಲ

ಬಿಲಿಟರಿ ಪಡೆಗಳನ್ನೂ ಇತರ ಸೌಲಭ್ಯಗಳನ್ನೂ ಸಂಯುಕ್ತ ರಾಷ್ಟ್ರಗಳ ಸಂಸ್ಥೆಯ ಸಹಾಯಕ್ಕೆ ಕೊಡುವು ವಾಗಿ ಈಜಿಪ್ಟ್ ಪ್ರಧಾನಿ ಹೇಳಿದಬಗ್ಗೆ ಎ ಪಿ ಎ ಪ್ರತಿನಿಧಿ ಪ್ರಶ್ನಿಸಿದಾಗ ಸಚಿವರ ವಿಶ್ಲೇಷಕೊಬ್ಬರು "ಅಮಿ ಈಜಿಪ್ಟ್ ಸರಕಾರದ ಉದ್ದೇಶವೇ ಹೊರತು. ಈಗ ನಡೆಯುತ್ತಿರುವ ಸಂಧಾನಕ್ಕೆ ಪರಕ್ಕಿಲ್ಲ" ಎಂದು ಉತ್ತರವಿತ್ತರು ಲಾರ್ಡ್ ಸ್ಯಾನ್ಸ್ ಗೇಟ್ ರವರೂ ಕೂಡ ಆ ವಿಶ್ಲೇಷಕರ ಅಭಿಪ್ರಾಯವನ್ನೇ ಸಮರ್ಥಿಸಿದರು

ಸಿದ್ಧೀಕಿ ವಾಹಾರವರು ಈ ತಿಂಗಳು ೧೨ ನೆಯ. ತಾ॥ ಮತ್ತೆ ಈಜಿಪ್ಟ್ ಪ್ರತಿನಿಧಿಗಳ ಸಭೆ ಸೇರಿಸಿ ಚರ್ಚೆ ಮುತ್ತಾರೆ, ಅಂದೇ ಪ್ರಿಟಿಷ್ ಮತ್ತು ಈಜಿಪ್ಟ್ ಪ್ರತಿನಿಧಿಗಳು ಸೈನ್ಯ ನಾಪಸಾಗಬೇಕಾದ ಅವಧಿಯನ್ನು ನಿಶ್ಚಯಿಸುವ ನಿರೀಕ್ಷೆ ಇದೆ

ನೆಹರೂರವರಿಗೆ ಅಧ್ಯಕ್ಷ ಪಟ್ಟ

ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷರಾಗಿ ನೆಹರೂರವರು ಪ್ರತಿಷ್ಠಿತ್ತಿ ಇಪ್ಪತ್ತು ಚಿನಾಯತರಾಗಿದ್ದಾರೆ ಅಧ್ಯಕ್ಷ ಸ್ಥಾನಕ್ಕೆ ಸೂಚಿಸಲಾಗಿದ್ದ ಶ್ರೀ ಕೃಪಾಲಿನಿ ಮತ್ತು ಸರ್ವಾರ ಸಚಿವರು ತಮ್ಮ ಅಮೇದುವಾರಿಕೆಗಳನ್ನು ವಾಪಸು ತೆಗೆದುಕೊಂಡಿದ್ದರಿಂದ ನೆಹರೂರವರೇ ಮುಂದಿನ ಕಾಂಗ್ರೆಸ್ ಅಧ್ಯಕ್ಷರಾಗಿ ಚುನಾಯತರಾಗಿದ್ದಾರೆಂದು ಜನರಲ್ ಸೆಕ್ರೆಟರಿಗಳಾದ ಶ್ರೀ ಕೃಪಾಲಿನಿಯವರು ತಿಳಿಸಿದ್ದಾರೆ

೧೫ ಲಕ್ಷ ರೂ. ಪರಿಹಾರ ದ್ರವ್ಯ

ತುಮಕೂರು ಜಿಲ್ಲೆಯ ಮಧುಗಿರಿ, ಕೊರಟಗೆರೆ, ಪಿಡಾ, ಗುಬ್ಬಿ, ತುರುವೇಕೆರೆ ಮತ್ತು ಚಿಕ್ಕನಾಯಕನಹಳ್ಳಿ ತಾಲ್ಲೂಕುಗಳು ೨೧ ನಾಮಗಳಲ್ಲಿ ಪರಿಹಾರ ಕಾರ್ಯಗಳನ್ನು ಕೈಗೊಳ್ಳಲು ಸರ್ಕಾರದವರು ೧,೨೫೦೦ ರೂ ಗಳನ್ನು ಮಂಜೂರು ಮಾಡಿದ್ದಾರೆ

ನೃವಸಾಯ ಕಾಲೇಜು

ನೈಸೂರು ವಿಶ್ವವಿದ್ಯಾನಿಲಯದ ಅಶ್ರಯದಲ್ಲಿ ಜೂಲೈ ೨೮ ನೇ ತಾ॥ ನಿಂದ ನೃವಸಾಯ ಕಾಲೇಜನ್ನು ಹೆಬ್ಬಾಳ್ಳ ನಲ್ಲಿ ತೆರೆಯಲು ಸರ್ಕಾರದವರು ಅಜ್ಞೆ ಮಾಡಿದ್ದಾರೆ ಪ್ರಾರಂಭದಲ್ಲಿ ಮಿಲಿಟರಿಯವರಿಂದ ಕೊಂಡ ನಿರೀಕ್ಷಣ ಗುಡಿಸಲುಗಳಲ್ಲಿ ತರಗತಿಗಳನ್ನು ನಡೆಸಲಾಗುವುದು. ಮತ್ತು ಸಂಶೋಧನೆ ಕೆಲಸವನ್ನು ಸೆಂಟ್ರಲ್ ಕಾಲೇಜು ಮತ್ತು ನೃವಸಾಯ ಇಲಾಖೆಯ ಲ್ಯಾಬರೇಟರಿಗಳಲ್ಲಿ ನಡೆಸಲಾಗುವುದು ಮೊದಲನೆಯ ವರ್ಷದಲ್ಲಿ ಈ ಕಾಲೇಜಿಗೆ ೧ ಲಕ್ಷ ರೂ. ಗಳು ವೆಚ್ಚವಾಗುವುದು

(ನಿನೆಹು ಪುಟದಿಂದ ಮುಂದುವರೆಯುವು)

ಆಚಾರ್ಯರೂ, ಮಹಾರಾಜರೂ, ಮಹಾಜನಾನಿಗಳೂ, ಕವಿಪುಂಗವರೂ, ಸತ್ಯತೀರ್ಥರಾದ ನಾರಿಯರೂ, ಕಲಾವಿದರೂ, ಈ ಮಹತ್ಕಲ್ಪ ಜನ್ಮವೆತ್ತಿ ತಮ್ಮ ಅಗಾಧ ಕಾರ್ಯಗಳಿಂದ ನೆಮ್ಮ ಧರ್ಮವನ್ನು ವಿರಾಜಿಸುವಂತೆ ಮಾಡಿದರು, ಹೂವು ಮಾಡದ ಬೀದಿಯಲ್ಲಿ ಹುಲ್ಲು ಮಾಂತೆಂಬಂತೆ ಇಂದಿನ ನೆಮ್ಮ ಸಮಾಜದ ಪರಿಸ್ಥಿತಿಯು ಅಗಿರುತ್ತದೆಂದು ಹೇಳಲು ಮನ ಉಡುಗಿ ಕೈ ನಡಗುವುದು ಎಲ್ಲಿ ನೋಡಿದರೂ ಸತ್ಯಸಂಗತಿಗಳ ಅವಹೇಳನ ವಿಕಾರ ವಿಚಾರಗಳ ನುಳ್ಳು ಕೃತಿಗಳ ಪ್ರಚಾರವೂ ಹೆಚ್ಚಾಗಿರುವುದು ತಿಲವನೆರೆಂಬ. ಹೆಮ್ಮೆಯಿಂದ ಎದೆತಟ್ಟಿಕೊಳ್ಳುವ ಎಷ್ಟೋ ಮಹಾನೀಯರು ಕೂಪಮಂಡೂಕಕ್ಕಾಯದಂತೆ ಸಂಕುಚಿತ ದೃಷ್ಟಿಯುಳ್ಳವರಾಗಿರುವರು ವೈದಿಕಪದ್ಧತಿಯು ದಿನೇ ದಿನೇ ಕ್ಷಾಸವಾಗತೊಡಗಿದೆ ಮಹತ ಮತ್ತು ನಾಡನುಡಿಗಳ ದಿವ್ಯ ಸೃಷ್ಟಿರ್ಯ ಅನುಭವವು ನಮಗೆ ಇಂದು ಇಲ್ಲದಾಗಿದೆ ಲೋಕೋಪಕಾರದ ಒತ್ತಡಕ್ಕೆ ಸಿಲ್ಕಿ ನರಳು ತ್ತಿರುವರ ಎಣಿಕೆಯು ಹೆಚ್ಚುತ್ತಿರುವುದು ಹೀಗಾದರೆ ನೆಮ್ಮ ಸಮಾಜವು ಮುಂದುವರಿಯುವುದು ಎಂದು? ಹಕ್ಕಿಗೆ ಹಾರಾಡಲು ಎರಡು ರೆಕ್ಕೆಗಳು ಬೇಕಾಗುವಂತೆ ಗುರುವರ್ಗ ಭಕ್ತವರ್ಗಗಳು ಒಂದಾಗಿ ಒಮ್ಮನಸ್ಸಿನಿಂದ ಸಮಾಜದ ಹಿತಕ್ಕೆ ಕಾರ್ಯಮಾಡಿದ ಹೊರತು ಬೇರೆ ಗತಿ ಇಲ್ಲ ಮಹಾಭಿಮಾನಿಗಳಾದ ಮಹಾರಾಜರ ಬೆಂಬಲವು ಈಗಂತೂ ಕಣ್ಮರೆಯಾಗಿದೆ ಸ್ವಾವಲಂಬನದ ನಾಹನಿಯು ನಮ್ಮ ರಕ್ತದ ನಾಡಿಗಳಲ್ಲಿ ತುಂಬಿ ಹರಿಯದ ಹೊರತು ನಮಗಿಂದು ಮಾನವತ್ವವು ಸಿಕ್ಕಲಾರದು ಸ್ವಾವಲಂಬನದ ತತ್ವಗಳ ಮೇಲೆ ಕಟ್ಟಿದ್ದ ನೆಮ್ಮ ಮಹಮಂದಿರವು ಇಂದು ಕುಸಿದುಬಿದ್ದಿದೆ ಎಲ್ಲಿಯವರೆಗೆ ಗುರುಗಳೂ ಭಕ್ತರೂ ಸ್ವಾವಲಂಬಿಗಳಾಗುವದಿಲ್ಲವೋ ಅಲ್ಲಿಯವರೆಗೆ ಈ ಅಪ್ರಮಾದ್ಯವೂ ನಮ್ಮನ್ನು ಬಿಡಲಾರದು ವೈರಾಗ್ಯವೃತ್ತಿಯಿಂದ ತಪೋನಿಷ್ಠರಾಗಿ ವೈದಿಕಾದ್ಯಾಪಕರಾಗಿ ನಾಡಿನಲ್ಲೆಲ್ಲ ಗುಡುಗಾಡುವ ಗುರುಗಳು ಇಂದು ಚಿಕ್ಕಂದಿನಿಂದ ತಮ್ಮ ಮರಮಂದಿರಗಳಲ್ಲಿ ಸಂಪ್ರತಿಯೆ ಸರಿಯೆ ಇಲ್ಲದೆ ಲೋಲಾಡುತ್ತಿರುವರು ಗುರುನಿರ್ಗವು ಸಮಾಜ ಪುರುಷನ ಹೃದಯವಾಗಿರುವದು ಹೃದಯವು ಕೆಟ್ಟರೆ ನುಸುನ್ನಯು ಒದುಕಲಾರದು ಶಾರೀರೇ ಗುರುನಿರ್ನವು ಕೀಳು ಮಟ್ಟಕ್ಕೆ ಒಂದರೆ ಸಮಾಜ ಪುರುಷನ ಗತಿಯಾದರೂ ಕೀಳಾಗುವುದು ನೆಮ್ಮ ಸಮಾಜಸ ಶಾರೀರಕ್ಕೆ ಇಂದಿನ ಗುರುಗಳ ಜಾಗೃತಿಯ ಅಕ್ಯತ್ಯಕತೆಯಾಗಿರುತ್ತದೆ ಕೈಬಿರಿಕೆಯಿಲ್ಲದೆ ಒಬ್ಬಿಬ್ಬ ರಿಗಳು ಸಮಾಜದ ಕಲ್ಯಾಣಕ್ಕೆ ಯತ್ನಿಸಿದರೆ ಆಗದು ಅವಕ್ಕೆ ಒಂದೆ ವಿಶಿಷ್ಟ ಸ್ಥರೂಪವು ಬರಬೇಕಾದರೆ ಅದರ ಪುನರ್ನಿರನೆಯಾಗಬೇಕು ಶಿಸ್ತು ನೆಲೆಗೊಳ್ಳಬೇಕು ಇಲ್ಲವಾದರೆ ಅದು ತನ್ನ ಸ್ವಾನಮಾನವನ್ನು ಸಹ ಕಳೆದುಕೊಳ್ಳುವದು ಇಂದು ನೆನ್ನುಳ್ಳಿ ವಿಂಧ್ಯೆಂಥ ಬೃಹಾಚಾರ ದುರಭ್ಯಾಸಗಳು ನೆಲೆಸಿವೆ ಎಂಬುದನ್ನು ಹೇಳಲಸದಳವಾಗಿದೆ ಹೀಗಿದ್ದು ಗುರುವರ್ಗವು ವೈಮನಿರುವದನ್ನು ನೋಡಿದರೆ ಪರಮಾಶ್ಚರ್ಯವಾಗದಿರದು ಸಮಾಜದ ಮುಂದಾಳುಗಳು ಈ ವಿಷಯವನ್ನು ಮನಸ್ಸಿನ ಮೇಲೆ ತೆಗೆದುಕೊಳ್ಳಬೇಕು ತಮ್ಮ ತಮ್ಮಲ್ಲಿಯ ಒಡಕುಗಳನ್ನು ಸರಿಪಡಿಸಿಕೊಳ್ಳಬೇಕು ಗುರುಗಳು ನೀತಿವಂತರಾಗಿ ವೇದವಿದ್ಯಾಪರಿಣತರಾಗಿ ಬ್ರಹ್ಮಜಿಜ್ಞಾಸರಾದರೆ ಭಕ್ತರು ಅವರ ಹಿಂದೆಯೇ ಬರುತ್ತಾರೆ ಇವೆಲ್ಲಾ ವಿಷಯಗಳನ್ನು ಪೂಜ್ಯ ಗುರುವರ್ಗವೂ ಸಮಾಜ ಪ್ರಮುಖರೂ ಸತ್ಯಾ ಲೋಚಿಸಿ ಕಾರ್ಯತತ್ಪರರಾಗುವದು ಒಳ್ಳೆಯದು. ಈಗ ಕಾಲುಕತ್ತಲೆಯೆಂಬೆ ಹಬ್ಬುರುನ ವಿಷನು ನಾಡಾ ನರಣವು ಜಗದ್ವಿಕಸ ಕೃಪೆಯಿಂದ ಅಳಿಯಿ ಹೋಗಿ ಎಲ್ಲೆಡೆಯಲ್ಲಿಯೂ ಧರ್ಮದ ಬೆಳಕು ಹೊರಹೊಮ್ಮಲಿ

ಪದ್ಮತಗೌಡ ಶಂಕರಗೌಡ ಪಾಟೀಲ, ಯರಡಾಲ

ಸಭೋತ್ಸವ ಬಿಜ್ಞಾಪನೆ

ರಾಯಚೂರು ಡಿ॥ ಬಿಜ್ಞಾಪಿಸುವುದೇನೆಂದರೆ ಚನ್ನ ವೀರ ಶಿವಾಚಾರ್ಯಸ್ವಾಮಿಗಳವರ ಮಠದಲ್ಲಿ ಪ್ರತಿವರ್ಷ ಪದ್ಧತಿಯಂತೆ ವೈಯಸಂವತ್ಸರದ ಜೈತ್ರ ಬ॥ ೫ ರವಿವಾರ ಪರಮಶಪೋಜನಿಧಿ ಶ್ರೀ ಮಹಾಂತೇಶ್ವರಸ್ವಾಮಿಯವರ ರಥೋತ್ಸವವು ಆ॥ ವಿಜ್ಯಂಭನೆಯಿಂದ ಜರುಗಿತು ಇದೇ ಸ್ವಾಮಿದ ಶ್ರೀಯುಷ್ಮತ ಮಾಲಿಪಾಟೀಲ ಬಸವನಗೌಡರು ಪೋ॥ ವಾ॥ ವೀರನಗೌಡರು ಒಡೂರ ಹಾಗರಡ್ಡಿ ಗೌಡರು ಜಾತ್ರೆಗಾಗಿ ನೆರೆದ ಜನಸಂದಣಿಗೆಲ್ಲ ಯಥೋಚಿತವಾಗಿ ಭೋಜನದ ವ್ಯವಸ್ಥೆಯನ್ನೇರ್ಪಡಿಸಿದ್ದರು ಇದುವರೆಗಿದ್ದ ಶ್ರೀಗಳವರ ಮೇಲಿನ ವ್ಯಯಭಾರವೆನ್ನು ತೊಲಗಿಸಿದ ಈ ಧರ್ಮಾತ್ಮರು ಸದಮಪುಣ್ಯಾ ಭಾಗಿಗಳೆಂದು ಪಿಲ್ಲಲು ಅತ್ಯಾನಂದವೆನಿಸುತ್ತದೆ ದಿನ ಪ್ರತಿಯ ಕಾರ್ಯಕ್ರಮವೆಲ್ಲವೂ ಸಾಂಗವಾಗಿ ಜರುಗಿ ಸೋಮವಾರ ಉದಯ ೬ ಘಂಟೆಗೆ ಶ್ರೀಗಳವರ ಅಧ್ಯಕ್ಷತೆಯಲ್ಲಿ ಸಭೆ ಜರುಗಿ ಸುಪ್ರಸಿದ್ಧ ಗಾಯಕರ ಸುಶ್ರಾವ್ಯ ಸಂಗೀತವೂ ಪಂ॥ ದಿನ್ನಿ ಸೂಗನವೀರಶರ್ಮರ ಸಾಮಾಜಿಕ ಕೋಪನ್ಯಾಸವೂ ಸಭಿಕರಿಗೆ ಸಂತೋಷವನ್ನುಂಟು ಮಾಡಿದವು ಒಳಿ ಶ್ರೀಗಳವರ ಧರ್ಮೋಪದೇಶವು ಜರುಗಿ ಆಚಾರ್ಯರ ಜಯಘೋಷದೊಡನೆ ಸಭೆಯು ಸಮಾಪ್ತಿಗೊಂಡಿತು ಓರ್ವ ಉತ್ಸವಭಾಗಿ

ಶ್ರೀ. ಆ. ವಿ. ಪಿ. ಕಣ್ಣಿನ ಹಾಸ್ಪೆಟಲ್ ಖಾಸಬಾಗ, ಬೆಳಗಾವ

ಇಲ್ಲಿಯ ತಜ್ಞ ನರ್ಜನರಾದ ಡಾ॥ ಎಮ್. ಸಿ. ಮೋದಿಯವರು ಇತ್ತರ ಹಿಂದೂಸ್ಥಾನ ಸಂಚಾರ ಮತ್ತು ರಾಜಪುತಾನದಲ್ಲಿ ಕಣ್ಣಿನ ಎಷ್ಟೋ ವಿಶೇಷ ಜ್ಞಾನವನ್ನು ಸಂಪಾದಿಸಿ ತಿರುಗಿ ಬೆಳಗಾವಿಗೆ ಬಂದು ತಮ್ಮ ಕೆಲಸದ ಮೇಲೆ ಹಾಜರಾಗಿದ್ದಾರೆ ಆದ್ದರಿಂದ ಎಲ್ಲ ಕಣ್ಣಿನ ರೋಗಿಗಳೂ ಅವರ ಜ್ಞಾನದ ಲಾಭವನ್ನು ಹೊಂದಬಹುದು

ಸೇಕ್ರೆಟರಿ,
ಶ್ರೀ ಆ ವಿ ಪಿ ಖಾಸಬಾಗ, ಬೆಳಗಾವ

ಸ್ವೀಕಾರ

ಧಾರವಾಡ ಡಿ॥ ಗದಗ ಸಿಟಿಯಲ್ಲಿರುವ ಮಂ॥ ರಾ॥ ಮಲಕಸ್ಪ ಚಿಕ್ಕಗೌರಿ ಇವರ ಪುತ್ರ ಚಿ॥ ಸೋಮಪ್ಪನಿಗೆ ಗದಗಬೆಟಗೇರಿಯಲ್ಲಿರುವ ಮಂ॥ ರಾ॥ ಚನ್ನ ಬಸಪ್ಪಾ ಚಿಕ್ಕಗೌರಿ ಇವರ ಪುತ್ರಿ ಚಿ॥ ನೌ॥ ಸಾವಿತ್ರವ್ವನನ್ನು ಕೊಟ್ಟು ನಿಶ್ಚ ಯಮಾಡಿದ ಸಮಯದಲ್ಲಿ ಪ್ರಭಾಪೋಷಣ ಕ್ಕೋಸ್ಕರ ವರನ ಕಡೆಯಿಂದ ತೆಗೆಯಿಸಿದ 2 ರೂಪಾಯಿ ನಧಾನದ ಕಡೆಯಿಂದ ತೆಗೆಯಿಸಿದ 1 ರೂಪಾಯಿ ಒಟ್ಟು 3 ರೂಪಾಯಿಗಳು ಮಂ॥ ರಾ॥ ಬಸಪ್ಪ ಜಂಬಣ್ಣಾ ನೇಟಿ ಗದಗ ಬೆಟಗೇರಿ ಇವರ ದ್ವಾರಾ ತಲ್ಪಿರುತ್ತದೆ

ರಾಯಚೂರು ಡಿ॥ ಬಿಜ್ಞಾಪಿ ಗ್ರಾಮದಲ್ಲಿ ಶ್ರೀ ಮಹಾಂತೇಶ್ವರಸ್ವಾಮಿಯ ರಥೋತ್ಸವವು ನೆರವೇರಿದ ಸಮಯದಲ್ಲಿ ಸವರಿ ಮಾಹಿಸತಿಗಳಾದ ಶ್ರೀ॥ ಹಿ॥ ಬ್ರ॥ ಚನ್ನವೀರಶಿವಾಚಾರ್ಯಸ್ವಾಮಿಗಳವರು ಪ್ರಭಾಪೋಷಣ ಕ್ಕೋಸ್ಕರ 2 ರೂಪಾಯಿಗಳನ್ನು ತೆಗೆಯಿಸಿ ಕಳುಹಿಸಿದ್ದಾರೆ

ತೀರ್ಥಹಳ್ಳಿ ತಾ॥ ಮಳಲಿಮಠದ ಶ್ರೀ ಗುರುನಾಗಾರ್ಜುನಿವಾಚಾರ್ಯಸ್ವಾಮಿಗಳವರು, ತಮ್ಮ ಉತ್ತರಾಧಿಕಾರಕ್ಕೋಸ್ಕರ ತಾ॥ 28 4 46ನೆಯ ದಿವಸ ತರೀಕೆರೆ ತಾ॥ ಗೆಜ್ಜೆಗೊಂಡನಹಳ್ಳಿ ಅಜ್ಜೆಮಠದ ವೇ॥ ಕಂಚಯ್ಯ ನವರ ಪುತ್ರ ಚಿ॥ ಪಂಚಾಕ್ಷರಶಾಸ್ತ್ರಿಗಳನ್ನು ನೇಮಿಸಿ ಕೊಂಡ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 2 ರೂಪಾಯಿಗಳನ್ನು ಕಳುಹಿಸಿದ್ದಾರೆ

ಅರಸೀಕೆರೆ ತಾ॥ ಜಾಗವೇದಿಗ್ರಾಮದಲ್ಲಿರುವ ವೇ॥ ವೀರಸಂಗಶಾಸ್ತ್ರಿಗಳವರು ಹೊಸತ ಗೃಹಪ್ರವೇಶ ಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾ ಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂಪಾಯಿಯು ವೇ॥ ರಾಂಪುರದ ಸಿದ್ಧಾಂತಿ ಆರ್ ಎಸ್ ಮಹಾವೇನ ಶಾಸ್ತ್ರಿಗಳ ದ್ವಾರಾ ತಲ್ಪಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಸಂಜಾತಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇನೆ

ಸಿದ್ಧಾಂತ ಶಿಖಾಮಣಿ

ವೀರಶೈವಮತವು ಜಗತ್ಪ್ರಸಿದ್ಧವಾಗಿರುವ ಪ್ರಾಚೀನವೂ ಶ್ರೇಷ್ಠವೂ ಆದ ಮತವಾಗಿದೆ. ಈ ಮತವನ್ನು ಪ್ರಚಾರಮಾಡಿದ ಪ್ರತಿಯೊಬ್ಬ ಪೂಜ್ಯ ಆಚಾರ್ಯರೂ ಈ ಮತದ ಸಿದ್ಧಾಂತಗಳನ್ನು ಪ್ರತಿಪಾದಿಸಿ ಅನೇಕ ಗ್ರಂಥಗಳನ್ನು ರಚಿಸಿರುವರು. ಆದರೆ ಈ ಮತದ ಸಿದ್ಧಾಂತಗಳನ್ನು ಸಂಗ್ರಹವಾಗಿ ಒಂದೇ ಗ್ರಂಥದಲ್ಲಿ ಕಾಣಬೇಕೆಂದು ಅಪೇಕ್ಷಿಸುವವರಿಗೆ ಇಲ್ಲಿಯವರೆಗೂ ಯಾವ ಗ್ರಂಥವೂ ಇರಲಿಲ್ಲ. ಈ ಕೊರತೆಯನ್ನು ಪರಿಹರಿಸಲು ಈಗ ಸುಮಾರು **೨೫ವರ್ಷ**ಗಳ ಹಿಂದೆ ಪೂಜ್ಯ ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರವರು ಈ ಗ್ರಂಥವನ್ನು ರಚಿಸಿದರು. ಈ ಗ್ರಂಥವು ಸಂಸ್ಕೃತ ಭಾಷೆಯಲ್ಲಿ ಪದ್ಯರೂಪದಲ್ಲಿ ಇರುವುದರಿಂದ ಸಾಮಾನ್ಯರಿಗೆ ಇದರ ಅರ್ಥವು ಸುಲಭವಾಗಿ ತಿಳಿಯುವುದಿಲ್ಲ. ಆದ್ದರಿಂದ ಈ ಗ್ರಂಥವನ್ನು ಕನ್ನಡ ಭಾಷೆಯಲ್ಲಿ ಬರೆಯಬೇಕೆಂದು ಅನೇಕರು ಪ್ರಾರ್ಥಿಸಿದ್ದರಿಂದ ಈ ಗ್ರಂಥವನ್ನು ಕನ್ನಡ ಭಾಷೆಯಲ್ಲಿ ಬರೆಯಲಾಗಿದೆ. ಈ ಗ್ರಂಥವು ಸಿದ್ಧಾಂತ ಶಿಖಾಮಣಿ (ಮೂಲಮಾತ್ರ) ಚಿಕ್ಕಸೈಜು ಬೆಲೆ ೦ಗೆ ೪ ಆಣೆ ದೊಡ್ಡಸೈಜು ಬೆಲೆ ೦ಗೆ ೮ ಆಣೆ ಸಿದ್ಧಾಂತ ಶಿಖಾಮಣಿ (ಸಂಸ್ಕೃತ) ಚಿಕ್ಕಸೈಜು ಬೆಲೆ ೦ಗೆ ೪ ಆಣೆ ದೊಡ್ಡಸೈಜು ಬೆಲೆ ೦ಗೆ ೮ ಆಣೆ

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅಪ್ಪುತಲೆಲಿಗೆಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ೦೪ ಆಣೆ

ಶ್ರೀರೇಣು ಕಾಚಾರ್ಯರ ಲಿಂಗಸಂಬಂಧದ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದದ್ದು) ಸೈಜು ೧೪ × ೧೦ ಬೆಲೆ ೦೪ ಆಣೆ

ಸದ್ಗುರು ಪಿಟಕಾರ್ಯಮಹಾದಿರತಕ್ಕ ಏಪರು ಆಚಾರ್ಯರು ಒಂದರಲ್ಲಿರುವ ಇರುವ ಫೋಟೋ ಸೈಜು ೧೪ × ೧೦ ಬೆಲೆ ೦೪ ಆಣೆ

ಶ್ರೀ ಜಗದ್ಗುರು ಪಂಚಾಚಾರ್ಯರ ಸಂಯಮಮರ್ಸಿಗಳಿಗೆ ನಿನಿದ್ಯಾಂತವನ್ನು ಉಪದೇಶಿಸುವ ಫೋಟೋ ೦೪ ಆಣೆ

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೦೪ ಆಣೆ

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ ೦೪ ಆಣೆ

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ .. ೦೪ ಆಣೆ

ಶ್ರೀಕಾಶೀಕ್ಷೇತ್ರನಿವಾಸಿಯಾದ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಲಿಂಗಸ್ಥಾಪನೆಯ ಫೋಟೋ ೦೪ ಆಣೆ

ಶ್ರೀ ಕಾಶೀ ಜಗದ್ಗುರು ವಿಶ್ವಾರಾಧ್ಯಶಿವಾಚಾರ್ಯರುಮಪ ಸ್ವಾಮಿಗಳವರ ಫೋಟೋ ೦೪ ಆಣೆ

ಶ್ರೀಕಾ ಶೀಜಗದ್ಗುರುಗಳಿಗೆ ಶ್ರೀರಂಭಾಪುರಿ ಜಗದ್ಗುರುಗಳು ಕಿರೀಟಪ್ರದಾನಮಾಡುವ ಫೋಟೋ ೦೪ ಆಣೆ

ಶ್ರೀಪಾದಮಜ್ಜನಯಿಸಿ ಸಿಂಹಾಸನಾರೂಢರಾದ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦೪ ಆಣೆ

ಶ್ರೀಸಿದ್ಧಪ್ರಭಾವರ ಸೀತಾಕೀರ್ತಿ ಜಗದ್ಗುರು ಶಿವಾಸಂಪದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ ೦೪ ಆಣೆ

ಶ್ರೀಪಾದಮಜ್ಜನಯಿಸಿ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀಸಾಧಶಾಸ್ತ್ರಿಗಳವರು ಉಳಿಸುಕೊಂಡಿರುವ ಫೋಟೋ ೦೪ ಆಣೆ

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೦೪ ಆಣೆ

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೦೪ ಆಣೆ

ಶ್ರೀ ಜಗದ್ಗುರು ಉಜ್ಜಯಿನೀ ಸೀರಿನ ಸುಪ್ರಾಚೀನ ಅತ್ಯಂತ ಸುಂದರವಾದ ಫೋಟೋ ೦೪ ಆಣೆ

ಶ್ರೀ ಜಗದ್ಗುರು ಉಜ್ಜಯಿನೀ ಸೀರಿನ ಅತ್ಯಂತ ಪ್ರಾಚೀನ ಶಿಲ್ಪದ ಸುಂದರ ಫೋಟೋ ೦೪ ಆಣೆ

ಶ್ರೀ ಜಗದ್ಗುರು ಕೇದಾರನಿಂಬಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ ೦೪ ಆಣೆ

ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ .. ೦೪ ಆಣೆ

ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆಲೆನೆಲಿರ ರಂಭಾಪುರೀ ಜಗದ್ಗುರುಗಳ ಅದ್ಧೂರಿಯ ಪಲ್ಲಕ್ಕಿ ಮಹೋತ್ಸವದ ಫೋಟೋ ೦೪ ಆಣೆ

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೩ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೮ನೆಯ ಆವೃತ್ತಿ)	೩ ಜಿ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೩ ಆಣ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೩ನೆಯ ಆವೃತ್ತಿ)	೩ ಆಣ
ಬಸವಾದಿಪ್ರಮಥರ್ತ್ಪದರ್ಪಣ (೪ನೆಯ ಆವೃತ್ತಿ)	೩ ಆಣೆ
ಶ್ರೀರೇಣುಕಾಚಾರ್ಯರತಕ (೩ನೆಯ ಆವೃತ್ತಿ)	೩ ಆಣೆ
ಶ್ರೀಗುರುತತ್ತ್ವಪರಗಳು (೩ನೆಯ ಆವೃತ್ತಿ)	೩ ಆಣೆ
ಶ್ರೀರುದ್ರಮುನಿಶಿವಾಚಾರ್ಯರತಕ	೩ ಆಣೆ
ಶಿವಶಕ್ತಿವಿಲಾಸ	೩ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ ..	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ ..	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ) ..	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ ..	೪ ಆಣೆ
ಶೈವೋಪನಿಷತ್ಸಂಗ್ರಹ! (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕಾಚಾರ್ಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವವಿಶ್ಲೇಷಿಕರಣ (೩ನೆಯ ಆವೃತ್ತಿ)	೩ ಆಣೆ
ವೀರಶೈವಾಂಶ್ಕೇಷ್ಟಿ-ಶ್ರಾದ್ಧವಿಧಿ	೩ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತವಿನಾಶಕರ (೩ನೆಯ ಆವೃತ್ತಿ) ..	೮ ಆಣೆ
ಶಿವಾದ್ವೈತಪರಭಾಷಾ (ಸಂಸ್ಕೃತ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣನು (ತೆಲುಗು)	೮ ಆಣೆ
ಸಮ್ಯೋಧರತ್ನಾವಳಿ	೮ ಆಣೆ
ಸಿದ್ಧಾಂತಸಾರಾವಳಿ (ತ್ರಿಯೋವಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ತಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ತ್ರಯಾಣಾಮ. ೩ನೆಯ ಆವೃತ್ತಿ)	೧೫ ರೂ
ಸಿದ್ಧಾಂತಶಿಖಾಮಣಿಸಟ್ (ಕನ್ನಡ ಟೀಕಾಸಹಿತ)	೧ ರೂ.
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ.
ಶ್ರೀಕರಭಾಷ್ಯಂ (ಚಟಸೂತ್ರಿಕ)	೧೫ ರೂ.
ಸಚಿತ್ರ ರೇಣುಕವಿಜಯ (೩ನೆಯ ಆವೃತ್ತಿ)	೧೫ ರೂ
ವೀರಶೈವವರತ್ನ (೩ನೆಯ ಆವೃತ್ತಿ, ೪೦ ಬಹುವರ್ಣದ ಫೋಟೋಗಳಿರುವುದು)	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ೪ ಮಿನೀಸಪ್ಟದ್ದು)	೨ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ.
ಶಿವಾಗಮಸಂಗ್ರಹ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಸಂಗ್ರಹಿಸಿರುವುದು.)	೨ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೪ ರೂ.
A brief life-sketch of Pandit Sri Kashinatha Shastriji (*English*)	**4 As**
The Philosophical Aspect of Virasaivism (*English*) ..	**8 As**
Speeches by Pandit Shri Kashinatha Shastriji (*English*)	**12 As**
ಲಿಂಗಧಾರಣಚಂದ್ರಿಕಾ (ಸಂಸ್ಕೃತ)	**೩ ಆ.**
ವೀರಶೈವಧರ್ಮ (ಮರಾಠಿ) ..	**೧ ರೂ.**
ಮಹಾಚಾರ್ಯಚರಿತಾವಳಿ (ವೀರಶೈವಭಾಷಾ-ಸಂಸ್ಕೃತ)	**೧ ರೂ.**
ಸಿದ್ಧಾಂತಶಿಖಾಮಣಿ (ಮೂಲ) ...	**೮ ಆ.**
ಸಂಧಿವಿಚ್ಛೇದಚಂದ್ರಿಕಾ (ಸಂಸ್ಕೃತ)	**೩ ಆ.**

ವ್ಯವಸ್ಥೆಯರು—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು, ಸಯ್ಯಾಜೀರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ನೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಪ್ರಿ.ಪ್ರಿ.ಸಿ ಪ್ರಕಟಿಸಲ್ಪಟ್ಟಿತು

REGISTERED No M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಗ್ರಣೀಪ್ರಸೀದಂತು ॥ REGISTERED No M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಂಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಸರಿಲಸತ್ಪಂಚಾಕ್ಷರೀಮೋದಧರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕನಂ ॥

ಸ್ಥಳದವರಿಗೆ ೨ ರೂ. ೪ ಆಣೆ. ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೨೦] ಪಂಚಾಚಾರ್ಯಸ್ಯಭಾ, ಸೋಮವಾರ ತಾ॥ ೨೦ನೇ ಮೇ ೧೯೪೬ [ಸಂಚಿಕೆ ೩

ಶ್ರೀ ಜಗದ್ಗುರು ವಿಶ್ವಾರಾಮಾರಾಧ್ಯ ಶ್ರೀ ಜಗದ್ಗುರು ದಾರುಕಾಚಾರ್ಯ ಜಯಂತೀ ಮಹೋತ್ಸವಗಳು

ಬೆಂಗಳೂರು •

ವೀರಶೈವ ಮತಸ್ಥಾಪಕರಾದ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಂತೀ ಮಹೋತ್ಸವಗಳನ್ನು ಭರತ ಖಂಡದ ನಾನಾಸಿಗಳಾದ ವೀರಶೈವರೆಲ್ಲರೂ ಅತ್ಯುತ್ಸಾಹದಿಂದ ನೆರವೇರಿಸುವಂತೆ ಬೆಂಗಳೂರು ನಗರನಿವಾಸಿಗಳಾದ ವೀರಶೈವರೂ ಸಹ ಮಹಾವೈಭವದೊಡನೆ ನೆರವೇರಿಸುತ್ತಿರುವುದು ಸುಪ್ರಸಿದ್ಧವಾದ ಸಂಗತಿಯಾಗಿದೆ ವೈಶಾಖ ಶುದ್ಧ ೩ ಶುಕ್ರವಾರ ವಿಶ್ವೇರಾಮಾರಾಧ್ಯರ ರಜತಲಿಂಗೋದ್ಭವ ಮೂರ್ತಿಗಳಿಗೆ ವಿಶೇಷ ಸಹಸ್ರಬಿಲ್ವಾರ್ಚನೆಯಾಯಿತು ವೈಶಾಖ ಶುದ್ಧ ೫ ಸೋಮವಾರ ಶ್ರೀ ಜಗದ್ಗುರು ದಾರುಕಾಚಾರ್ಯರ ರಜತಲಿಂಗೋದ್ಭವ ಮೂರ್ತಿಗಳಿಗೆ ವಿಶೇಷರುದ್ರಾಭಿಷೇಕ ಸಹಸ್ರ ಬಿಲ್ವಾರ್ಚನೆಗಳು ನಡೆದವು ಸಾಯಂಕಾಲ ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಶ್ರೀ ಜಗದ್ಗುರು ರಂಭಾಪುರೀ ಸಂಸ್ಕೃತ ಪಾಠಶಾಲೆಯ ವಿದ್ವಾನ್ ದೊಡ್ಡ ಬಸ್ಸಾಪುರದ ಕೇತೇಶನಕಂಠೀರವ ಕವಭೂಷಣ ಇತ್ಯಾದಿ ಬಿರುದಾಂಕಿತರಾದ, ಶಿವಕಥಾಪಂಡಿತ ಶಿವದೇವಶಾಸ್ತ್ರೀ ಗಳವರಿಂದ ಮೃತ್ಯುಪರೀಕ್ಷೆ ಎಂಬ ಶಿವಕಥೆಯೂ, ಮರು ದಿನದ 'ಶರಭಲೀಲೆ' ಎಂಬ ಕಥೆಯೂ ನೆರವೇರಿದವು

ಬಿ ರೇವಣಸಿದ್ಧಯ್ಯ ವಿದ್ಯಾರ್ಥಿ,
ಮಹಂತಿನಮಠ

ಗರಗ

ಧಾರವಾಡ ತಾಲ್ಲೂಕು ಗರಗ ಗ್ರಾಮದಲ್ಲಿರುವ ವೀರ ಭದ್ರಸ್ವಾ ಬಳಗಾರ ಇವರ ಮನೆಯಲ್ಲಿ ವಾರ್ಷಿಕ ಪದ್ಧತಿಯಂತೆ ಶ್ರೀಜಗದ್ಗುರು ವಿಶ್ವೇರಾಮಾರಾಧ್ಯರ, ಶ್ರೀಜಗದ್ಗುರು ದಾರುಕಾಚಾರ್ಯರ ಜಯಂತೀ ಮಹೋತ್ಸವವು ಶ್ರೀವಿಶಾಲಶಂಕರಶಿವಾಚಾರ್ಯಸ್ವಾಮಿಗಳವರ ನೇತೃತ್ವದಲ್ಲಿ ಅತಿ ವಿಜೃಂಭಣೆಯಿಂದ ನೆರವೇರಿತು ಜಗದಾಚಾರ್ಯರ ರಜತಲಿಂಗೋದ್ಭವ ಮೂರ್ತಿಗಳಿಗೆ ಅಮರಯ್ಯ ಶೀಲವಂತಮಠ ದೊಡ್ಡಬಸವಯ್ಯ ಶೀಲವಂತಮಠ ರೌಡಕುಂದಿ ಇವರಿಂದ ರುದ್ರಾಭಿಷೇಕವೂ ಅಷ್ಟೋತ್ತರ ಶತ ಬಿಲ್ವಾರ್ಚನೆಗಳೂ ನಡೆದವು. ಸಾಯಂಕಾಲ ೫ ಗಂಟೆಗೆ ಮಳೆಮಠದಲ್ಲಿ ಸಭೆನೇರಿತು. ಆಗ್ಗೆ ಗರಗ ಗ್ರಾಮದ ಭಕ್ತಮಾಹೇಶ್ವರೂ ಆಗಮಿಸಿದ್ದರು. ಶ್ರೀ ಸ್ವಾಮಿಗಳು ಉಭಯ ಜಗದಾಚಾರ್ಯರ ಮಹತ್ವಗಳನ್ನು ಬೋಧಿಸಿ ಸಭ್ಯರನ್ನು ಧನ್ಯರನ್ನಾಗಿ ಮಾಡಿದರು. ಅನಂತರ ಮಹಾಮಂಗಲವಾಗಿ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಪ್ರತ್ಯಕ್ಷದರ್ಶಿ.

ಕಾಶೀಕ್ಷೇತ್ರ

ಕಾಶೀ ಶ್ರೀ ಜಗದ್ಗುರು ವಿಶ್ವಾರಾಧ್ಯ ಜ್ಞಾನಸಿಂಹಾಸನ ಮಹಾಸಾಮ್ರಾಜ್ಯದಲ್ಲಿ ಪಟ್ಟಾಭಿಷಿಕ್ತರಾಗಿರುವ ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತೀಮಹೋತ್ಸವಗಳೂ, ಶಿವೈಕ್ಯ ಶ್ರೀ ಜಗದ್ಗುರು ಸಂಚಾಕ್ಷರಶಿವಾಚಾರ್ಯ ಮಹಾಸ್ವಾಮಿಗಳವರ ದ್ವಿತೀಯ ವಾರ್ಷಿಕ ಪುಣ್ಯತಿಥಿ ದಿನಾಚರಣೆಯೂ ಅತ್ಯಂತ ವೈಭವದಿಂದ ನೆರವೇರಿದವು ವೈಶಾಖ ಶು॥ ಅಷ್ಟಮಿ-ತೃತೀಯಾ ದಿವಸ ಶ್ರೀ ಜಗದ್ಗುರು ವಿಶ್ವೇರಾಮಾರಾಧ್ಯರ ಲಿಂಗೋದ್ಭವ ಮೂರ್ತಿಗಳಿಗೆ ವಿಧ್ಯುಕ್ತವಾಗಿ ಮಹಾಪೂಜೆಯು ನೆರವೇರಿತ್ತಲ್ಲದೆ ಪದಭಿಕ್ಷೆಗೆ ವಿದ್ವತ್ಸಭಾಭವನದಲ್ಲಿ ಪಂಡಿತರ ಮಹತ್ವ ಪೂರ್ಣಭಾಷಣಗಳಾದವು

ಮರುದಿನ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯ ಮಹಾಸ್ವಾಮಿಗಳವರ ಸನ್ನಾಧಿನ್ಯದಲ್ಲಿ ನೇಲೆ ಸ್ಥಾಪಿತವಾಗಿರುವ ವಿಶ್ವಾರಾಧ್ಯ ಲಿಂಗೋದ್ಭವ ಮೂರ್ತಿಗೆ ವಿಶೇಷ ಏಕಾದಶರುದ್ರಾಭಿಷೇಕ, ಮಹಾಗಣಸಂತರ್ಪಣ ಹರಗುರುಭಜನ, ಸಭಾ ಮಂತಾದ ಪುಣ್ಯಕಾರ್ಯಗಳಿಂದ ಪುಣ್ಯತಿಥಿಯು ಸಾಂಗವಾಗಿ ಜರುಗಿತು. ಈದು ಸಭೆಗೆ ಅನೇಕ ಯಾತ್ರಿಕ ಸಜ್ಜನರು ಬಂದಿದ್ದರು ವಿದ್ವತ್ತಿಂದ ಪದಸ್ಥರೆನ್ನಲೂ ಶಿವೈಕ್ಯ ಶ್ರೀ ಜಗದ್ಗುರುಗಳವರ ಉಪಾತ್ಮವಾದ ಜೀವನಚರಿತ್ರೆಯ ಬಗ್ಗೆ ಮಾತನಾಡಿ ಶ್ರದ್ಧಾಂಜಲಿಗಳನ್ನು ಸಮರ್ಪಿಸಿದರು

ವೈಶಾಖ ಶು॥ ಪಂಚಮಿಯಂದಿನ ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತ್ಯುತ್ಸವವು ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು ಅಂದು ಶ್ರೀ ಸಿದ್ಧೇಶ್ವರಸ್ವಾಮಿಗಳು ವಿದ್ವಾಭೀಕ್ಷೆ ಮಹಾಪೂಜೆಗಳೂ ಗಣಕಾರಾಧನೆಯೂ ನಡೆದು ವಿದ್ವಾಂಸರ ಹೃದಯಂಗಮ ವ್ಯಾಖ್ಯಾನಗಳೂ ಗಾಯನಭಜನೆಗಳೂ ಉತ್ಸಾಹದಿಂದ ಜರುಗಿದವು.

ಪ್ರತ್ಯಕ್ಷದರ್ಶಿ

ರೌಡಕುಂದಿ

ರಾಯಚೂರು ಡಿ॥ ರೌಡಕುಂದಿ ಬೃಹನ್ಮಠದಲ್ಲಿ ಶ್ರೀ ಜಗದ್ಗುರುಗಳ ಜಯಂತಿಯನ್ನು ಮೊಹರ್ರಿಯವರೆಗಿಂದ ನೆರವೇರಿಸಲಾಯಿತು ತಾ॥ ೪-೫-೪೬ರಿಂದ ತಾ॥ ೬-೫-೪೬ ಸೋಮವಾರದವರೆಗೆ ಪ್ರಾತಃಕಾಲ ೪ ಘಂಟೆಯಿಂದ ೧೦ ಘಂಟೆ ಪರ್ಯಂತ ಶ್ರೀ ಜಗದಾಚಾರ್ಯರ ಧ್ವಜವಂದನೆಗಳು ಮತಾಧಿಷ್ಠೇವತನಾದ ಶ್ರೀ ಜಗದ್ಗುರು ಮರುಲಸಿದ್ಧೇಶ್ವರಸ್ವಾಮಿಗೂ ಗ್ರಾಮದೇವತೆಗಳಿಗೂ ವಿಧ್ಯುಕ್ತ ಏಕಾದಶರುದ್ರಾಭಿಷೇಕಾದಿಗಳೂ ಭೂದಾನಕಾರಾಧನೆಯೂ ಜರುಗಿ ಸರ್ವರೂ ಕೃಪ್ತಿ ಹೊಂದಿದರು ಮಧ್ಯಾಹ್ನ ೪ ಘಂಟೆಗೆ ಸಭೆಯು ಕೂಡಿತು ನೂರಾರುಜನ ಶ್ರೀ ಜಗದಾಚಾರ್ಯರ ಪಂಚ ಮಣಿದ ಜಯಧ್ವಜಗಳನ್ನು ಹಿಡಿದುಕೊಂಡು ಸಾಲಾಗಿ ನಿಂತುಕೊಂಡಿದ್ದರು ಸಭಾಸ್ಥಾರೂಢದಲ್ಲಿ ತೋಪುಗಳು ಹಾರಿಸಲ್ಪಟ್ಟವು. ಕೂಡಲೆ ಊರಿನ ದಪ್ಪಗಳ ಪ್ರದರ್ಶನದಲ್ಲಿ ಚೆನ್ನಾಗಿ ನೇಯಿಸಿದ ದನಗಳ ಮಾಲೀಕರಿಗೆ ಯೋಗ್ಯ ಬಹುಮಾನಗಳು ಗ್ರಾಮಾಧಿಕಾರಿಗಳಿಂದ ಕೊಡಲ್ಪಟ್ಟವು ಅನಂತರ ಯುವಕಕವಿಗಳಿಂದವರೆ ಶಕ್ತಿಪ್ರದರ್ಶನಗಳು ಆಂದರೆ ಕುಸ್ತಿಯಾಡುವುದು, ಗುಂಡುಗಳನ್ನು ಎತ್ತುವದು, ಹಾರಿಗಳನ್ನು ನುಣಿಸುವದು, ಇವೇ ಮೊದಲಾದ ಸಾಹಸಕಾರ್ಯಗಳು ಜರುಗಿದವು ಅನಂತರ ಹಿರೇಮಠಾಧಿಪತಿಗಳಾದ ಶ್ರೀ ಶಿವಯೋಗಿವಾಚಾರ್ಯಸ್ವಾಮಿಗಳವರು "ಗ್ರಾಮೋದ್ಧಾರ ಎಂಬ ವಿಷಯವಾಗಿ ಭಾಷಣ ಮಾಡಿ ಸರ್ವರನ್ನು ಆನಂದನೀರಿಸಿದರು ಬಳಿಕ ಊಟಾ ಕಾರಯುಕ್ತವಾದ ರಥವನ್ನು ಶ್ರೀ ಜಗದಾಚಾರ್ಯರ ಭಾವಚಿತ್ರವನ್ನಿಟ್ಟು ೧ ಜೊತೆ ಎತ್ತುಗಳನ್ನು ಕಟ್ಟಿ ಮೆರವಣಿಗೆ ಹೊರಡಿಸಲಾಯಿತು ಹೀಗೆ ಮಹಾಸಂಭ್ರಮದಿಂದ ಹೊರಟ ಮಹೋತ್ಸವವು ಮುಖ್ಯ ಮುಖ್ಯ ರಸ್ತೆಗಳಲ್ಲಿ ಹಾಯ್ದು ರಾತ್ರಿ ೧೧ ಘಂಟೆಗೆ ಬೃಹನ್ಮಠದ ಮಹಾದ್ವಾರದ ಮುಂಭಾಗಕ್ಕೆ ಒಂದಿತು ಕೂಡಲೇ ತೋಪುಗಳನ್ನು ಪುನ: ಹಾರಿಸಲಾಯಿತು ಶಭಸೂಚಯದಲ್ಲಿ ಗ್ರಾಮದ ಮಾಲೀಕಾಪಟೆಲರಾದ ಶ್ರೀಮಾನ್ ವಾನ ಶರೂರಿ ಸನದಗೌಡರು ೪ ಎಕರೆ ಉತ್ತಮವಾದ ಭೂಮಿಯನ್ನು ಶ್ರೀಗುರುವರ ಹಿರೇಮಠದ ಪೂರ್ವಪಟ್ಟಾಧಿಕಾರಿ ಸ್ವಾಮಿಗಳವರ ಗದ್ದುಗೆಗಳ ವಿಶಾರಾಧನೆಗಾಗಿ ದಾನ ಮಾಡಿ ಗುರುಕೃಪೆಗೆ ಪಾತ್ರರಾದರು ರೌಡಕುಂದಿಯ ಸಮಸ್ತ ಸಜ್ಜನರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನಿತ್ತು ಕಾಪಾಡಲೆಂದು ಪ್ರಾರ್ಥಿಸುತ್ತೇನೆ

ಕೆ ಗಾದಿಲಿಂಗಪ್ಪ

ಮಳವ ದೊಡ್ಡಿಮಠ

ಶ್ರೀ ಜಗದ್ಗುರು ದಾರುಕಾರ್ಯ ಶಾಖಾನುವರ್ತಿ ಮದ್ದೂರು ತಾ॥ ಶ್ರೀ ಹರಿಹರಕೂಡಲಸಂಗಮ ಶಿವ ಕ್ಷೇತ್ರ ಮರದ ದೊಡ್ಡಿ ಮಠದಲ್ಲಿ ವೈಶಾಖ ಶು॥ ೪ ಭಾನುವಾರ ಬೆಳಿಗ್ಗೆ ದಾರುಕಾಚಾರ್ಯ ಮಂದಿರದಲ್ಲಿ ಲಿಂಗೋದ್ಭವಮೂರ್ತಿಗೆ ಏಕಾದಶರುದ್ರಾಭಿಷೇಕ ದಾರು ಕಾಷ್ಠೋತ್ಪತ್ತಿನಾಮಾವಳಿ ಪೂಜಾಹೋಮಹಾರಪೂಜಾದಿಗಳು ನಡೆದವು ಬಳಿಕ ಮಹಾಗಣಾರಾಧನೆಯು ನಡೆಯಿತು. ಸ್ಥಳಪರಸ್ಥಳದ ಭಕ್ತಮಾಹೇಶ್ವರರು ವಿಶೇಷ ಜನರು ಸೇರಿದ್ದರು. ೫ ಘಂಟೆಯಿಂದ ೬ ಘಂಟೆಯ ವರೆಗೆ ಮಳವ ದೊಡ್ಡಿಮಠದ ಶ್ರೀ ಸದಾಶಿವಸ್ವಾಮಿಗಳಿಂದ ವೀರಶೈವಮತದ ವಿಷಯವಾಗಿ ಉಪನ್ಯಾಸವು ನಡೆಯಿತು. ಮತ್ತು ೬-೭ ಘಂಟೆಯವರೆಗೆ ಮಡೇನಳ್ಳಿ ಗ್ರಾಮದ ಶ್ರೀ ಪಂಚಾಚಾರ್ಯ ಭಜನಾಸಂಘದವರ ತಿವಜನೆ ಕೇರ್ತನೆಗಳು ನಡೆದು ಸಾಯಂಕಾಲ ಹೂವಿನ ಅನಂತರ ಪ್ರಸಾದವಿನೋಗವಾಗಿ ಸಭಾಕಾರ್ಯವು ಮುಗಿಯಿತು. ತಾರೀಖು ೬-೫-೪೬ನೇ ಸೋಮವಾರ ಬೆಳಿಗ್ಗಿನಿಂದ ಮಡೇನಳ್ಳಿ ಭಜನಾಸಂಘದವರಿಂದ ತಿವಿ ಭಜನೆ ಕೇರ್ತನೆಗಳು ನಡೆದು ಸಾಯಂಕಾಲ ಹೂವಿನ ಪಲ್ಲಕ್ಕಿಯಲ್ಲಿ ಶ್ರೀ ಜಗದಾಚಾರ್ಯರ ಉತ್ಸವವು ಮಳವ

•, [೨ನೆಯ ಪುಟವನ್ನು ನೋಡಿ]

ಚಂದಾದಾರರಲ್ಲಿ ವಿಜ್ಞಾಪನೆ

ಈ ಪತ್ರಿಕೆಯು ಜನವರಿ ೧೯೪೬ರಿಂದ ಪ್ರತಿ ಸೋಮವಾರ ಬೆಳಿಗ್ಗೆ ೧೦ ಗಂಟೆಗೆ ಪ್ರಕಟವಾಗುವಂತೆ ಏರ್ಪಾಡು ಮಾಡಲಾಗಿದೆ. ಆದರೆ ಕಾಗದ ಸಿಗುವುದರಲ್ಲಿ ಆಗುತ್ತಿರುವ ಅಡಚಣೆಯಿಂದ ಈ ಏರ್ಪಾಡು ಸರಿಯಾಗಿ ನಡೆಯುತ್ತಿಲ್ಲ. ಆದ್ದರಿಂದ ಪತ್ರಿಕೆಯು ಸೋಮವಾರ ಬೆಳಿಗ್ಗೆ ೧೦ ಗಂಟೆಗೆ ಸರಿಯಾಗಿ ಪ್ರಕಟವಾಗುವುದು ಸಾಧ್ಯವಿಲ್ಲದಿರುವುದರಿಂದ ಚಂದಾದಾರರಿಗೆ ಕಷ್ಟವಾಗುತ್ತಿರುವುದನ್ನು ಕಂಡು ಪತ್ರಿಕೆಯನ್ನು ಮಂಗಳವಾರ ಬೆಳಿಗ್ಗೆ ೧೦ ಗಂಟೆಗೆ ಪ್ರಕಟಿಸಲು ಏರ್ಪಾಡು ಮಾಡಲಾಗಿದೆ. ಚಂದಾದಾರರು ಇದನ್ನು ಗಮನಿಸಿ ಸಹಕರಿಸಬೇಕಾಗಿ ಕೋರಲಾಗಿದೆ.

—ವ್ಯವಸ್ಥಾಪಕರು

ಬ್ರಿಟಿಷ್ ಮಂತ್ರಿಮಂಡಲಿಯ ನೂತನಯೋಜನೆ



ಲಾರ್ಡ್ ಪೆಥಿಕ್ ಲಾರೆನ್ಸ್‌ರವರು
(ಇಂಡಿಯಾ ಸಕ್ರೆಟರಿ)

ಬ್ರಿಟಿಷ್ ದೇಶವು ಬಾರತವರ್ಷಕ್ಕೆ ೭೦೦೦ ಮೈಲಿ ದೂರದಲ್ಲಿದ್ದ ಅಟ್ಲಾಂಟಿಕ್ ಸಾಗರದಲ್ಲಿ ಇದು ಒಂದು ಸಣ್ಣ ದ್ವೀಪ. ವಿಸ್ತೀರ್ಣದಲ್ಲಿ ಮೈಸೂರು ಸಂಸ್ಥಾನದ ಮೂರರಷ್ಟಿದೆ. ಪ್ರಜಾಸಂಖ್ಯೆ ನಾಲ್ಕೂವರೆ ಕೋಟಿ. ಹಿಂದೂಸ್ಥಾನದ ಒಬ್ಬ ಜನಸಂಖ್ಯೆ ೧೧ ಕೋಟಿ. ಈ ಆಖಂಡ ಹಿಂದೂಸ್ಥಾನವನ್ನು ಸಣ್ಣ ಜನಾಂಗವಾದ ಬ್ರಿಟನ್ನು ಸುಮಾರು ಎರಡು ನೂರು ವರ್ಷಗಳಿಂದಲೂ ಆಳಿತು. ಮೊದಲು ಬ್ರಿಟಿಷರು ಇಲ್ಲಿ ವ್ಯಾಪಾರಕ್ಕಾಗಿ ಬಂದು ಕ್ರಮೇಣ ರಾಜ್ಯಕಟ್ಟಿದರು.

ಈಗ್ಗೆ ಅರ್ಧಶತಮಾನದ ಹಿಂದೆ ಭಾರತೀಯರು ಸ್ವಾತಂತ್ರ್ಯಕ್ಕಾಗಿ ಚಳವಳಿಯನ್ನು ಪ್ರಾರಂಭಿಸಿದರು. ಈ ಚಳವಳಿಯ ಫಲವಾಗಿ ಬ್ರಿಟಿಷ್ ಸರಕಾರವು ಈಗ್ಗೆ ಒಂದು ತಿಂಗಳ ಹಿಂದೆ ಒಂದು ನಿರ್ಣಯವನ್ನು ಕಳುಹಿಸಿತು. ಈ ನಿರ್ಣಯವು ನಿಶ್ಚಯವಾದ ಮನಸ್ಸಿನಿಂದ ಹಿಂದೂಸ್ಥಾನಕ್ಕೆ ಕೆಂಚತ್ವಾದರೂ ಒಳ್ಳೆಯದು ಮಾಡಬೇಕೆಂಬ ನಿರ್ಧಾರದಿಂದ ಈ ದೇಶಕ್ಕೆ ಬಂದಿತು ಇದರಲ್ಲಿ ಇಂಡಿಯಾದ ಕಾರ್ಯದರ್ಶಿಗಳಾದ ಲಾರ್ಡ್ ಪೆಥಿಕ್ ಲಾರೆನ್ಸ್, ಸರ್ ಸ್ಟಾಫರ್ಡ್ ಕ್ರಿಪ್ಸ್ ಮತ್ತು ಲಾರ್ಡ್ ಅಲೆಕ್ಸಾಂಡರ್ ಈ ಮೂವರು ಇದ್ದರು.

ನಿಯೋಗದವರು ಕಾಂಗ್ರೆಸ್ ಮತ್ತು ಲೀಗು ಒಮ್ಮತಕ್ಕೆ ಬರುವಂತೆ ಸಂಧಾನಗಳ ಮೇಲೆ ಸಂಧಾನ ನಡೆಸಿದರು. ಸಿಮ್ಲಾದಲ್ಲಿ ಸಂಧಾನ ಮುರಿದು ಬಿದ್ದದ್ದು ತುಂಬಾ ನಿರಾಶೆಯನ್ನು ಹುಟ್ಟಿಸಿತು. ಆದರೆ ಈ ನಿರಾಶೆಯಲ್ಲಿ ಒಂದು ಆಶೆಯ ಕಿರಣ ಕಾಣುತ್ತಿತ್ತು.

೧೬ ೫–೪೬ನೇ ಗುರುವಾರ ರಾತ್ರಿ ೮ ಗಂಟೆಗೆ ನಿಯೋಗದವರು ಒಂದು ಹೇಳಿಕೆಯನ್ನು ಹೊರಡಿಸಿದರು. ಇದಕ್ಕೆ ಭುಂಜೆ ನಿಯೋಗದ ಸದಸ್ಯರಿಗೂ ಗಾಂಧಿಯವರಿಗೂ ಭೇಟಿ ನಡೆಯಿತು. ಪಂಡಿತ್ ನೆಹರೂ ಮತ್ತು ಆಜಾದ್‌ರವರೂ ಸದಸ್ಯರನ್ನು ಕಂಡು ಮಾತಾಡಿ ಒಂದರ ಪ್ರಗತಿಯ ನಿರ್ಣಯಕ್ಕೆ ಬರಲಾಗಿದೆ ಎಂದು ಹೇಳಿದರು. ಇದಕ್ಕೆ ಮುಂಚೆ ಜಿನ್ನಾರವರು ಮುಸ್ಲಿಂಲೀಗಿನ ಸದಸ್ಯರನ್ನು ಕಂಡು ಮಾತಾಡಿದರು. ಸಿಖ್ ಮುಂದಾಳುಗಳಾದ ತಾರಾಸಿಂಗ್ ಮತ್ತು ಬಲದೇವಸಿಂಗ್ ರವರೂ ಸದಸ್ಯರುಗಳನ್ನು ಮಾತನಾಡಿದರು. ಸಂಸ್ಥಾನಿಕ ವಿಚಾರ ಪರಿಶೀಲನೆಗಾಗಿ ಚಾನ್ಸಲರ್ ನವಾಬ್ ಜುಲ್ಫಿಕರ್ ಅಲಿಖಾನ್ ಈ ಸಮಾಲೋಚನೆಗಳಲ್ಲಿ ಭಾಗವಹಿಸಿದ್ದರು.

ರಾತ್ರಿ ೮.೩೦ ಗಂಟೆಗೆ ನಿಯೋಗದ ಮುಂದಾಳುಗಳಾದ ಲಾರ್ಡ್ ಪೆಥಿಕ್ ಲಾರೆನ್ಸ್‌ರವರು ಅಖಿಲ ಭಾರತ ರೇಡಿಯೋಮೂಲಕ ಭಾಷಣ ಮಾಡಿದರು. ಬ್ರಿಟಿಷ್ ಮಂತ್ರಿಮಂಡಲಿಗಳಾದ ಇಟ್ಟಿಯವರು ಅದೇ ಸಮಯದಲ್ಲಿ ಲಂಡನ್ನಿನ ಪಾರ್ಲಿಮೆಂಟ್ ಸಭೆಯಲ್ಲಿ ಒಂದು ಹೇಳಿಕೆಯನ್ನು ಹೊಟ್ಟರು.

ಪೆಥಿಕ್ ಲಾರೆನ್ಸ್‌ರನರ ಹೇಳಿಕೆಯ ಸಾರಾಂಶ

ಈ ಭಾರತ ಸಾರಿಗಾದ ಸಿಮ್ಲಾಪಲ್ಲಿ ಮುಸ್ಲಿಂ ಲೀಗ್ ಪಕ್ಷ ಕಾಂಗ್ರೆಸ್ ಮುಂದಾಳುಗಳೊಡನೆ ಚರ್ಚೆ ನಡೆಸಲಾಯಿತು. ಎರಡೆ ಪಕ್ಷಕ್ಕೂ ಸಮ್ಮತವಾದ ಸರಕಾರ ವನ್ನು ಸ್ಥಾಪಿಸಲು ಸತತ ಪ್ರಯತ್ನ ನಡೆಸಿದೆವು ಕೊನೆಗೂ ತಮ್ಮ ಭಾವನೆಗಳಿಲ್ಲಿ ಅಮದರಿಂದ ನಿಯೋಗದವರಾದ ನಾವೇ ಸೂತ್ರ ನಿರ್ಣಯಿಸಿದ್ದನ್ನು ತಾವುಕ ಬೇಕಾಯಿತು.

ಮುಸ್ಲಿಂ ಲೀಗಿಗೆ ಪಕ್ಷ ಪಡೆದ ಇಮಾಮಂಥ ರಾಜ್ಯಾಂಗ ವನ್ನು ರಚಿಸುವುದು ಅಗತ್ಯ ಒದರೆ ಮುಸ್ಲಿಂ ಲೀಗಿನ ವಾದದಂತೆ ಪಾಕೀಸ್ತಾನವನ್ನು ಒಪ್ಪಲಾಗುವುದಿಲ್ಲ ದೇಶ ವನ್ನು ಮತಗಳ ಇಚ್ಛಾನುಸಾರ ವಿಂಗಡಿಸಿದರೆ ಅದರ ರಕ್ಷಣೆ ಸುತ್ತು ಹಿಂಸಾಚಾರವನ್ನು ಆಮದರಿಂದ ಇಡಾಡಿಯಾ ಯೂನಿಯನ್ ಎಂಬ ಕೇಂದ್ರ ಸರ್ಕಾರವನ್ನು ರಚಿಸಬೇಕಾಯಿತು.

1 ಅರ್ಧಕೃಷ್ಯಿಯಾದ ನತ್ತ ಪ್ರಸಂಚದ ಈಗಿರುವ ಸ್ಥಿತಿಯ ಲ್ಲಿ ರಕ್ಷಣೆಯು ಪ್ರಮುಖವಾಗಿ ಹಿಂದುಸ್ಥಾನದ ನನ್ನು ಒಡೆದು ಪಾಕೀಸ್ತಾನ ಸ್ಥಾಪಿಸಲು ಸಾಧ್ಯವಿಲ್ಲ ಆದರೆ ಧರ್ಮ ಮತ್ತು ಸಂಸ್ಕೃತಿಯ ರಕ್ಷಣೆಗೆ ರಾಜ್ಯಾಂಗ ರಚನೆಯಲ್ಲಿ ತಿವಕಾರವಿದೆ ಹಿಂದೂಸ್ಥಾನ ಅಖಂಡವಾಗಿ ಉಳಿಯಬೇಕು

2 ಆಖಂಡ ಹಿಂದೂಸ್ಥಾನಕ್ಕೆ ಒಂದು ಕೇಂದ್ರ ಸರ್ಕಾರವಿರಬೇಕು ರಕ್ಷಣೆ, ಆರ್ಥಿಕ, ಸಂಚಾರ, ಪರದೇಶ ಗಳ ಸಂಬಂದ ಇವು ಆ ಕೇಂದ್ರ ಸರಕಾರದ ಆಡಳಿತದಲ್ಲಿ ರಬೇಕು ಇವುಗಳನ್ನು ಬಿಟ್ಟು ಮಿಕ್ಕೆಲ್ಲ ವಿಷಯಗಳಲ್ಲೂ ಪ್ರಾಂತೀಯ ಸರಕಾರಗಳು ಸ್ವತಂತ್ರವಾಗಿರತಕ್ಕದ್ದು ಪ್ರಾಂತಗಳು ಬೇಕಾದರೆ ಒಂದೂದು ಗುಂಪಾಗಿ ಕೇಂದ್ರ ಸಮಿತಿಗೆ ಸಾರದ ವಿಷಯಗಳಲ್ಲಲ್ಲಿ ಸಾಮಾನ್ಯವಾಗಿ ಅನು ಸರಿಸಬೇಕಾದ ನೀತಿಯನ್ನು ನಿರ್ಧರಿಸಿಕೊಳ್ಳಲು ಅವಕಾಶ ವಿರತಕ್ಕದ್ದು

3 ಕೂಡಲೆ ಕೇಂದ್ರದಲ್ಲಿ ಜನರ ನಂಬಿಕೆಯನ್ನು ಗಳಿಸಿರುವ ದೊಡ್ಡ ರಾಜಕೀಯಪಕ್ಷಗಳ ಪ್ರತಿನಿಧಿ ಮಂತ್ರಿ ಗಳಿಂದ ಕೂಡಿದ ತಾತ್ಕಾಲಿಕ ಸರಕಾರ ನಿರ್ಮಾಣಂತಾಗಿ ಬೇಕು ಈ ಸರಕಾರದ ಎಲ್ಲಾ ಇಲಾಖೆಗಳ ಆಡಳಿತವೂ ಭಾರತಮಂತ್ರಿಗಳ ಪಿಡಿತದಲ್ಲೇ ಇರುವುವು

4 ಮುಂದಿನ ರಾಜ್ಯಾಂಗ ರಚನೆಯನ್ನು ರಚಿಸಲು ಒಂದು ರಾಜ್ಯಾಂಗ ಸಭೆ ಏರ್ಪಾಡಾಗುವುದು ಆ ಸಭೆಯಲ್ಲಿ ಎಲ್ಲಾ ಪ್ರಾಂತಗಳಿಗೂ ಮತ್ತು ದೇಶೀಯ ಸಂಸ್ಥಾನ ಗಳ ಪ್ರತಿನಿಧಿಗಳಿರುವರು. ಈ ಪ್ರತಿನಿಧಿಗಳನ್ನು ಹತ್ತು ಲಕ್ಷ ಪ್ರಜೆಗೆ ಒಬ್ಬರಂತೆ ಆರಿಸಿ ಕಳುಹಿಸಬೇಕು

5. ಇನ್ನುಮುಂದೆ ಬ್ರಿಟಿಷ್ ಸಾರ್ವಭೌಮರಿಗೂ ದೇಶೀಯ ಸಂಸ್ಥಾನಗಳಿಗೂ ಇದ್ದ ಸಂಬಂಧವಿರುವುದಿಲ್ಲ.

6 ರಾಜ್ಯಾಂಗಸಭೆಯು ಒಟ್ಟಿಗೆ ಸೇರಿ ನಿರ್ಧಾರಕ್ಕೆ ಬರುವ ಮೊದಲು ಆದರಲ್ಲಿರುವ ಮೂರು ಗುಂಪುಗಳು ತಮತಮಗೆ ಬೇಕಾದ ರಾಜ್ಯಾಂಗವನ್ನು ಚರ್ಚಿಸಲು ಅವಕಾಶವಿದೆ. ಈ ಮೂರು ಗುಂಪುಗಳಲ್ಲಿ ಮದರಾಸು, ಒರಿಸ್ಸ, ಮಧ್ಯಪ್ರಾಂತ, ಬಿಹಾರ, ಸಂಯುಕ್ತಪ್ರಾಂತ, ಬೊಂಬಾಯಿ ಒಂದು ಗುಂಪು, ಅಸ್ಸಾಂ, ಬಂಗಾಳ, ಒಂದು ಗುಂಪು, ನಾಯವ್ಯಪ್ರಾಂತ, ಸಿಂಧ್, ಪಂಜಾಬು ಒಂದು ಗುಂಪು

ಈ ಸಲಹೆಗಳು ಭಾರತಕ್ಕೆ ಸಂಪೂರ್ಣ ಸ್ವಾತಂತ್ರ್ಯ ಪಡೆಯಲು ಸಹಾಯವಾಗುವುವು ಭಾರತ ಬ್ರಿಟಿಷ್ ಕಾಮನ್‌ವೆಲ್ತ್‌ನಲ್ಲಿದ್ದರೇ ಸಂತೋಷ ಹಾಗಿಲ್ಲದೆ ಹೊರಗೆ ಇರುವುದಾದರೂ ಸಂತೋಷ ಅದು ಭಾರತಕ್ಕೆ ಬಿಟ್ಟದ್ದು. ಎಂದು ಮಿ|| ಪೆಥಿಕ್ ಲಾರೆನ್ಸ್‌ರವರು ತಿಳಿಸಿದ್ದಾರೆ.

ನಿಯೋಗದ ಶಿಫಾರ್ಸಿಗೆ ನಿಯೋಗಿಯವರ ಸ್ವಾಗತ

ಇಂಡಿಯಾದ ಫೆಡರಲ್ ಯೂನಿಯನ್ ಯೋಜನೆಯನ್ನು ನ್ಯೂಯಾರ್ಕ್ ನಗರದಲ್ಲಿರುವ ಸಂಯುಕ್ತ ರಾಷ್ಟ್ರಗಳ ಮಾನವ ಹಕ್ಕುಬಾಧ್ಯತೆಗಳ ನಿಯೋಗದ ಭಾರತ ಪ್ರತಿನಿಧಿಗಳಾದ ಶ್ರೀ ಕೆ. ನಿ ನಿಯೋಗಿಯವರು ಸ್ವಾಗತಿಸಿದ್ದಾರೆ ಭಾರತದ ಸ್ವಾತಂತ್ರ್ಯಕ್ಕೆ ಈ ಯೋಜನೆಯು ಸಿಜವಾದ ಹೆಜ್ಜೆಯೆಂದು ಹೇಳಿ ಮುಂದುವರಿಯುತ್ತ ಮಿ|| ಜಿನ್ನಾರವರೂ ಮತ್ತು ಮುಸ್ಲಿಂಲೀಗಿನವರೂ ಯಾವ ರೀತಿ ನಡೆದುಕೊಳ್ಳುತ್ತಾರೆಂಬುದನ್ನು ನೋಡಬೇಕಾಗಿದೆ. ಫೆಡರಲ್ ಯೂನಿಯನ್ನಿಗೆ ನ್ಯೂಸ್ಲಿಂ ಪ್ರಾಂತ್ಯಗಳ ಬಗ್ಗೆ ಹೇರಳವಾದ ಅಧಿಕಾರವಿದೆ ಅವರೆ ಅವರು 'ಪೂರ್ಣಪಾಕೀಸ್ತಾನ' ತತ್ವಕ್ಕೆ ಒಂಟಿ ಬಾರದು "ಬ್ರಿಟಿಷರು ಭಾರತಕ್ಕೆ ಸ್ವಾತಂತ್ರ್ಯ ಕೊಡಲು ಕೈತಪ್ಪಿಸಲ್ಪಡಬಾರದಿದ್ದಾರೆಂಬುದು ಕಂಡುಬಂದಿದೆ ಬ್ರಿಟಿಷರ ಈ ಯೋಜನೆ ಫಲಿಸಲು ಮುಸ್ಲಿಮರಿಗೆ ಹೇರಳವಾದ ಸೌಲಭ್ಯಗಳನ್ನು ಕೊಡಬೇಕೆಂದೂ ಮಿ|| ಜಿನ್ನಾರವರಿಗೆ ಪ್ರಧಾನಿಪಟ್ಟ ಸಹ ಕಟ್ಟಬೇಕು' ಎಂದು ನಿಯೋಗಿಯವರು ತಿಳಿಸಿದರು.

ಸ್ವೀಕಾರ

ಧಾರವಾಡ ತಾ|| ಗರಗ ಗ್ರಾಮದಲ್ಲಿರುವ ಮುನ್ಸು ಯ್ಯನ ಮಠದ ಹಾ|| ವೀರಭದ್ರಯ್ಯನವರ ಸಹೋದರಿ ಚಿ ಶಂಕರಯ್ಯಸ್ವಾಮಿಗೆ ಬೈಲಹೊಂಗಲದಲ್ಲಿರುವ ಬಾಳಿ ಕುಂದರಿ ಹಿರೇಮಠದ ಸಟಿದಯ್ಯನವರ ಸಹೋದರಿ ಚಿ|| ಸೌ|| ಪಾರ್ವತೀದೇವಿಯನ್ನು ತಂದು ಶಿರೇಸಿಜದ ವಿವಾಹಸಮಯದಲ್ಲಿ ವರನ ಕಡೆಯವರು ಸಮರ್ಪಿಸಿದ 2 ರೂ. ಮತ್ತು ಜಗದಾಂಬಾರ್ಯರ ಜಯಂತೀ ಸಮಯದಲ್ಲಿ ಮಿ|| ರಾ|| ಬಳೆಗಾರ ಮಹಾದೇವಪ್ಪನವರು ಸಮರ್ಪಿಸಿದ 1 ರೂ ಒಟ್ಟು 3 ರೂ ಗಳು ಶ್ರೀ ಶಿವಶಂಕರ ಶಿವಾಚಾರ್ಯಸ್ವಾಮಿಗಳ ದ್ವಾರಾ ತಲ್ಪಿರುತ್ತವೆ.

ನಿಜಂ ಇಲಾಖಾ ಅಫಜಲಪುರ ಗ್ರಾಮದಲ್ಲಿರುವ ಬೃಹನ್ಮಠದಲ್ಲಿ ನೂತನ ಪಟ್ಟಾಧಿಕಾರಮಹೋತ್ಸವನ್ನು ನೆರವೇರಿದ ಸಮಯದಲ್ಲಿ ಪ್ರಭಾವೋಷಣಕ್ಕೋಸ್ಕರ ಸಮರ್ಪಿಸಿದ 2 ರೂ.ಗಳು ವೇ|| ವಿರೂಪಾಕ್ಷಶರ್ಮಾ ಅರಾಧ್ಯಮಠ ದಾನಗಳಿಗೆ ಇವರ ದ್ವಾರಾ ತಲ್ಪಿರುತ್ತವೆ.

ಬೊಂಬಾಯಿ ನಗರದಲ್ಲಿರುವ ಶ್ರೀಮಂತ ಈಶ್ವರಪ್ಪ ಪಾವರ್‌ವಾಲಾ ಇವರಿಗೆ ಪ್ರಾಪ್ತವಾಗಿದ್ದ ಜೈಪಾಯಿಡ್ ಜ್ವರ ಗುಣವಾಗಿ ಆರೋಗ್ಯವಾದ ಸಂತೋಷಕ್ಕಾಗಿ ಪ್ರಭಾವೋಷಣಕ್ಕಾಗಿ ಸಮರ್ಪಿಸಿದ 2 ರೂ.ಗಳು ಸಂ|| ಶ್ರೀಶೈಲಜಾಧಶಾಸ್ತ್ರಿಗಳ ದ್ವಾರಾ ತಲ್ಪಿರುತ್ತವೆ.

ಮದ್ದೂರು ತಾ|| ಮರವ ದೊಡ್ಡಿಮರವಪಲ್ಲಿ ನೆರೆನೇರಿದ ಶ್ರೀ ಜಗದ್ಗುರು ಜಾರುಕಾಚಾರ್ಯರ ಜಯಂತೀ ಮಹೋತ್ಸವದ ಸಮಯದಲ್ಲಿ ಸದರಿ ಮರಾಧಿಕಾರಿಗಳು ಪ್ರಭಾವೋಷಣಕ್ಕಾಗಿ 1 ರೂಪಾಯಿಯನ್ನು ಸಮರ್ಪಿಸಿ ಕಳಿಸಿರುತ್ತಾರೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಶಿಕ್ಷಣಚಿತ್ರಗಳ ಸಿನಿಮಾ

ಮೈಸೂರು ನಗರದ ವಯಸ್ಕರ ಶಿಕ್ಷಣ ಸಮಿತಿಯವರು ತಾ।। ೧೦-೫-೪೬ ನೇ ಶುಕ್ರವಾರ ಬೆಳಿಗ್ಗೆ ರಣಜಿತ್ ಸಿನಿಮಾ ಮಂದಿರದಲ್ಲಿ ಶಿಕ್ಷಣ ಚಿತ್ರಗಳ ಪ್ರದರ್ಶನವನ್ನು ಏರ್ಪಡಿಸಿದ್ದರು. ನಗರದ ಎಲ್ಲ ವಯಸ್ಕರ ತರಗತಿಗಳ ವಿದ್ಯಾರ್ಥಿಗಳಿಗೋಸ್ಕರ ಇದನ್ನು ಏರ್ಪಡಿಸಿತ್ತು. ಸಮಾರಂಭಕ್ಕೆ ಶ್ರೀಮನ್ಮಹಾರಾಜರವರ ಹುಜೂರ್ ಸೆಕ್ರೆಟರಿಯವರಾದ ಶ್ರೀ ಟಿ. ರಾಮಯ್ಯನವರು ಅಧ್ಯಕ್ಷತೆ ವಹಿಸಿದ್ದರು

ನಮ್ಮ ದೇಶದ ಶಿಲ್ಪಕಲಾಸಂಪತ್ತು, ಸಂಗೀತ, ನಾಟ್ಯ, ಹಸ್ತಕೌಶಲಗಳು, ಗ್ರಾಮಜೀವನ ಮೊದಲಾದ ಬಗೆ ಬಗೆ ಚಿತ್ರಗಳನ್ನು ತೋರಿಸಿದರು.

ಅಧ್ಯಕ್ಷರ ಭಾಷಣ

ಇಂದು ವಯಸ್ಕರ ಶಿಕ್ಷಣಚಿತ್ರಪ್ರದರ್ಶನಸಮಾರಂಭದಲ್ಲಿ ಅಧ್ಯಕ್ಷತೆ ವಹಿಸುವ ಗೌರವವನ್ನು ಮಾಡಿದ್ದಕ್ಕಾಗಿ ಮೈಸೂರು ನಗರದ ವಯಸ್ಕರ ಶಿಕ್ಷಣಸಮಿತಿಯ ಕಾರ್ಯದರ್ಶಿಗಳಾದ ಶ್ರೀ।। ಶ್ರೀನಿವಾಸಮೂರ್ತಿಗಳಿಗೆ ನಾನು ಕೃತಜ್ಞನಾಗಿದ್ದೇನೆ ಈ ದಿನದ ಸಿನಿಮಾ ಒಂದು ಹೊಸ ರೀತಿಯದು. ದಿನವೂ ನಾವು ನೋಡುವಂಥದಲ್ಲ. ಸಾಮಾನ್ಯವಾದ ಸಿನಿಮಾ ಚಿತ್ರ ಮುಖ್ಯವಾಗಿ ಮನೋರಂಜನೆಗಾಗಿ ತಯಾರಾದುದು ಅದರಲ್ಲಿ ಒಂದು ಪುರಾಣದ ಕಥೆಯೋ ಚರಿತ್ರೆಯ ಹಿಂದು ಸನ್ನಿವೇಶವೋ ಇರುತ್ತದೆ ಇಲ್ಲವೇ ಸಾಮಾಜಿಕ ಚಿತ್ರವಿದ್ದು ವಾಸ್ತವಾಂಶಕ್ಕಿಂತ ರಂಗಸ್ಥಳದ ಆಕರ್ಷಣೆಗೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಡುವಂತಹದಾಗಿರುತ್ತದೆ. ಅದರ ಬೆಲೆ ಸ್ಥಿರವಾದುದಲ್ಲ.

ಆದರೆ ಈದಿನ ನೀವು ನೋಡುತ್ತಿರುವ ಚಿತ್ರದ ಉದ್ದೇಶವೇ ಬೇರೆ; ರೀತಿಯೂ ಬೇರೆ. ಅದರ ಉದ್ದೇಶ ಮನೋರಂಜನೆಯಲ್ಲ; ಜ್ಞಾನಪ್ರಸಾರ. ಬಹುಶಃ ದಿನವೂ ನೋಡುವ ಚಿತ್ರಗಳಷ್ಟು ಆಕರ್ಷಣೀಯವಾಗಿರಲಾರದು. ಆದರೆ ಹೆಚ್ಚು ಅರ್ಥವತ್ತಾಗಿರುತ್ತದೆ. ವಿರಾಮವಾಗಿ ಒಂದು ಒಳ್ಳೆಯ ಸಂಗೀತವನ್ನು ಕೇಳುವುದೋ ಅಥವಾ ಆಕರ್ಷಣೀಯವಾದ ಹೊಸ ಹೊಸ ಉಡುಪುಗಳನ್ನು ಧರಿಸಿ ಮನೋಹರವಾಗಿರುವ ಪ್ರಕೃತಿಯ ವಾತಾವರಣದಲ್ಲಿ ನಲಿದಾಡುವ ಗಂಡು ಹೆಣ್ಣುಗಳ ಕಥೆಯನ್ನು ನೋಡಬೇಕೆನ್ನುವವರಿಗೆ ಈ ಚಿತ್ರವಲ್ಲ. ಇದು ಹಳ್ಳಿಯ ಜನಕ್ಕೋಸ್ಕರ. ಅವರ ಬದುಕು ಹೇಗೆ ತುಂಬು ಜೀವನವಾಗಬೇಕು? ತಮ್ಮ ಸಂಪಾದನೆ ಹೇಗೆ ಹೆಚ್ಚಾಗಬೇಕು, ಅವರ ಪೂರ್ವಿಕರ ಚರಿತ್ರೆಯೇನು? ಜೀವನದಲ್ಲಿ ಅವರ ಗುರಿಯೇನು? ಎಂಬುದನ್ನು ತಿಳಿಸುವುದೇ ಈ ಚಿತ್ರದ ಉದ್ದೇಶ.

ಎಲ್ಲಿ ವಿದ್ಯೆಯೂ ಅಕ್ಷರಜ್ಞಾನವೂ ಬಹಳ ಹಿಂದಿದೆಯೋ ಅಂತಹ ದೇಶಗಳಲ್ಲಿ ಹಿಂದಾದ ನಮ್ಮ ದೇಶದಲ್ಲಿ ಇವುಗಳ ಅಗತ್ಯ ಬಹಳ ಹೆಚ್ಚಾಗಿದೆ. ಎಲ್ಲ ನಾಗರಿಕ ಜೀವನಕ್ಕೂ ದೇಶದ ಅಭ್ಯುದಯಕ್ಕೂ ವಿದ್ಯೆ ಆಧಾರವೆಂದು ನಾನು ಹೇಳಬೇಕಾಗಿಲ್ಲ. ಪಶ್ಚಿಮ ದೇಶಗಳಲ್ಲಿ ವಿದ್ಯಾ ಸಂಸ್ಥೆಗಳು ಶತಮಾನಗಳಿಂದ ಸಂಪ್ಯೆಯಲ್ಲೂ ಗುಣದಲ್ಲೂ ಬೆಳೆದುಕೊಂಡು ಬಂದಿವೆ. ಹುಟ್ಟಿದ ಪ್ರತಿ ನಿಮಿಗೆ ಪೂರ್ಣ ಬೆಳವಣಿಗೆಗೆ ಸಾಕಾಗುವಷ್ಟು ಅವಕಾಶಗಳಿವೆ ಅಲ್ಲದೆ ಒತ್ತಾಯವಾಗಿ ಕೆಲವು ವರ್ಷಗಳ ಕಾಲ ಶಿಕ್ಷಣ ಶಾಲೆಗೆ ಹೋಗಲೇ ಬೇಕೆಂಬ ಕಾನೂನಿದೆ ಅಂತಹ ದೇಶಗಳಲ್ಲಿ ಬಹಳ ಈ ರೀತಿಯ ವಿದ್ಯಾಪ್ರಚಾರಕ್ಕೆ ಅವಶ್ಯಕತೆ ಇದ್ದಿರಲಾರದು. ಆದರೆ ನಮ್ಮಲ್ಲಿ ಅಕ್ಷರತೆ ತೀರ ಕಡಿಮೆಯಿದೆ; ಶಾಲೆಗಳ ಸಂಖ್ಯೆ ಸಾಕಾದಷ್ಟು ಇಲ್ಲ; ಹಾಗೆ ಒತ್ತಾಯದ ಪ್ರಾಥಮಿಕ ವಿದ್ಯಾಭ್ಯಾಸವಿಲ್ಲ ಆದ್ದರಿಂದ ದೇಶದ ತುಂಬ, ಮುಖ್ಯವಾಗಿ ಗ್ರಾಮಗಳಲ್ಲಿ, ಅಜ್ಞಾನವು ತಾಂಡವವಾಡುತ್ತಿದೆ.

ನಮಗೆ ಸ್ವರಾಜ್ಯ ಬರುತ್ತಿರುವಾಗ ಇಂತಹ ಸ್ಥಿತಿ ಇರುವುದು ಬಹಳ ತೋಚನೀಯ ಪ್ರತಿ ಮನುಷ್ಯನಲ್ಲಿಯೂ ರಾಷ್ಟ್ರಭಾವನೆ ಎಲ್ಲಿಯವರೆಗೆ ಹುಟ್ಟುವುದಿಲ್ಲವೋ ಅಲ್ಲಿಯವರೆಗೆ ಪ್ರಜಾಪ್ರಭುತ್ವ ಹಾಸ್ಯಾಸ್ಪದ ಎಂಬುದು ನೆನಪಿನಲ್ಲಿಡಬೇಕು. ಶಿಕ್ಷಣ ಶಾಲೆಗಳ ವಿದ್ಯಾಭ್ಯಾಸವನ್ನೇ ನಾವು ನುಡಿದರೆ, ಸರಿಯಾದ ವಾತಾವರಣ ಏರ್ಪಡಬೇಕಾದರೆ ಶತಮಾನಗಳು ಬೇಕಾದೀತು. ಗ್ರಾಮಾಂತರದಲ್ಲಿ ಇರುವ ಆನಕ್ಷರಸ್ಥರಾದ ವಯಸ್ಕರಲ್ಲಿ ವಿದ್ಯಾಪ್ರಸಾರದ ಕಾರ್ಯವು ಭರದಿಂದ ಸಾಗಬೇಕಾದರೆ ಮತ್ತು ಅವರಲ್ಲಿ ರಾಷ್ಟ್ರೀಯ ಭಾವನೆಯೂ ತಿರುವೇಕೆಯೂ ಉಂಟಾಗಬೇಕಾದರೆ ಈಗ ನಾವು ಕೈಕೊಂಡಿರುವ ವಯಸ್ಕರ ಶಿಕ್ಷಣ ಯೋಜನೆಯೇ ಸರಿ. ಆದರೆ ಇದು ಇನ್ನೂ ಹೆಚ್ಚು ತೀಕ್ಷ್ಣವಾಗಿ ನಡೆಯಬೇಕು.

ವಿದ್ಯೆಯ ಮೊದಲನೆಯ ಹೆಜ್ಜೆ ಅಕ್ಷರ ಜ್ಞಾನ. ಈ ಹೆಜ್ಜೆಯನ್ನಿಡುವುದರಲ್ಲಿ ಮೊದಲನೆಯವರು ಎಂಬ ಕೀರ್ತಿ ೧೯೩೭ ರಲ್ಲಿ ಬ್ರಿಟಿಷ್ ಪ್ರಾಂತಗಳನ್ನು ರಚಿಸಿಯಾದ ಕಾಂಗ್ರೆಸ್ ಮಂತ್ರಿಮಂಡಲಗಳಿಗೆ ಸೇರಬೇಕಾದುದು ಆಗ ಬೊಂಬಾಯಿಯಲ್ಲಿ ದೊಡ್ಡ ಚಳವಳಿ ನಡೆಯಿತು ಅದು ಮೈಸೂರಿನಲ್ಲಿರುವ ನಮ್ಮನ್ನು ಈ ವಿಷಯದಲ್ಲಿ ಯೋಚನಾ ಪರರನ್ನಾಗಿ ಮಾಡಿತು ಈ ಕಾರ್ಯದಲ್ಲಿ ಪ್ರಯೋಗ ಮಾಡಿದ ನೊತ್ತನೊದಲಿಗರಲ್ಲಿ ನಾನೆರಿಬ್ಬನೆಂದರೆ ನಿನಗಾಶ್ಚರ್ಯವಾಗುವುದು. ಸರ್ಕಾರವು ಈ ಯೋಜನೆಯನ್ನು ಕೈಗೊಳ್ಳುವುದಕ್ಕೆ ಬಹಳ ಮುಂಚೆ ಈ ನಿಜಾರದಲ್ಲಿ ಶಿಕ್ಷಣ ಶಾಸ್ತ್ರಜ್ಞರು ಅನೇಕ ಪದ್ಧತಿಗಳನ್ನು ಮುಂದಿಡುತ್ತಿದ್ದಾಗ, ನಯಸ್ಥನಿಗೆ ವಿದ್ಯೆ ಕಲಿಸುವುದು ಸಾಧ್ಯವೇ? ಎಂಬ ಸಂಶಯ ಜನರಲ್ಲಿದ್ದಾಗ ಕೋಲಾರ ಮತ್ತು ಚನ್ನರಾಯಪಟ್ಟಣದ ಕರ್ನಾಟಕ ಸಂಘಗಳು ಈ ಸಂಬಂಧದಲ್ಲಿ ಒಂದು ಪ್ರಯೋಗವನ್ನು ನಡೆಸಿದವು. ಚನ್ನರಾಯಪಟ್ಟಣದ ಕಾರ್ಯದೊಂದಿಗೆ ನನಗೆ ಹತ್ತಿರದ ಸಂಬಂಧವಿದೆ. ಅಲ್ಲಿಯ ಫಲಿತಾಂಶ ನಮಗೆ ಆಶ್ಚರ್ಯವನ್ನುಂಟುಮಾಡುವಷ್ಟು ಫಲದಾಯಕವಾಗಿತ್ತು.

ಈಗ ವಯಸ್ಕರ ಶಿಕ್ಷಣ ಸಮಿತಿಯವರು ರಚಿಸಿರುವಂಥ, ಅಕ್ಷರ ಜ್ಞಾನವನ್ನು ಸ್ಥಿರಪಡಿಸುವ ಯೋಜನೆಯಲ್ಲಿದೆ, ಇವು ಹೆಚ್ಚು ಫಲದಾಯಕವಲ್ಲ ಎಂಬುದೇನೋ ನಿಜ. ಆದರೆ ಹಣದ ಅಭಾವದಿಂದ ನಾವು ಇದನ್ನು ಆಗ ಯೋಚಿಸಲಾಗಲಿಲ್ಲ. ಮುಂದೆ ಮಹಾರಾಜಾ ಕಾಲೇಜಿನ ವಿದ್ಯಾರ್ಥಿಗಳು ಇದನ್ನು ಜನತಾ ಚಳುವಳಿಯಾಗಿ ಮಾರ್ಪಡಿಸಿ ಯೋಜನೆಗೆ ಒಂದು ಹೊಸ ರೂಪವನ್ನು ಕೊಟ್ಟರು ಸರ್ಕಾರಕ್ಕೂ ಇದರ ಅನಿವಾರ್ಯತೆ ಮನವರಿಕೆಯಾಯಿತು ಅದರ ಫಲವಾಗಿ ಅಕ್ಷರ ಪ್ರಚಾರ ಸಮಿತಿ ಸ್ಥಾಪಿತವಾಯಿತು. ಈ ಸಮಿತಿಯ ಕಾರ್ಯಕ್ಷೇತ್ರವು ಸರಿಯಾದ ನೂರ್ಗಾರದಲ್ಲಿ ವಿಸ್ತಾರವಾಗುತ್ತಾ ಅದು ಜನತಾ ಶಿಕ್ಷಣ ಸಮಿತಿಯಾಯಿತು ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಯ ಕಾರ್ಯದರ್ಶಿಯವರು ನನಗೆ. ಕೊಟ್ಟಿರುವ ವರದಿಗಳನ್ನು ನೋಡಿ ಇಷ್ಟು ಹೇಳಬಲ್ಲೆನು — ಸಮಿತಿ ಬಹಳ ಚೆನ್ನಾಗಿ ಕೆಲಸಮಾಡಿದೆ. ಸಮಿತಿಯು ಸಾವಿರಾರು ವಯಸ್ಕರ ತರಗತಿಗಳನ್ನು ನಡೆಸಿದೆ ಕಲಿತ ಅಕ್ಷರ ಜ್ಞಾನವನ್ನು ಸ್ಥಿರಪಡಿಸಲು ತಕ್ಕ ಯೋಜನೆಯನ್ನು ಮಾಡಿದೆ ಪುಸ್ತಕ ಭಂಡಾರಗಳನ್ನು ಸ್ಥಾಪಿಸಿದೆ. ಹೊಸದಾಗಿ ಅಕ್ಷರ ಕಲಿತವರು ಓದಲು ತಕ್ಕ ಪುಟ್ಟ ಪುಸ್ತಕಗಳನ್ನು ತಯಾರಿಸಿದೆ ಮತ್ತು ಎಷ್ಟೋ ರೀತಿಗಳಲ್ಲಿ ಪ್ರಚಾರ ಕಾರ್ಯವನ್ನು ನಡೆಸಿದೆ ಈ ಪ್ರಚಾರ ಕಾರ್ಯದಲ್ಲಿ ಸಿನಿಮಾ ಬಹಳ ಅತ್ಯುತ್ತಮವಾದ ಮಾರ್ಗ ಎಂದು ನಾನು ಹೇಳಬೇಕಾಗಿಲ್ಲ

ಬ್ರಿಟಿಷ್ ಪ್ರಾಂತಗಳು ನಮಗೆ ದಾರಿತೋರಿದವು ಎಂದು ನಾನು ಹೇಳಿದೆ. ಆದರೆ ಈಗ ನುಂದಾಳುಗಳಾಗಿರುವವರು ನಾವು ಎಂದು ಹೇಳಲು ನನಗೆ ಬಹಳ ಸಂತೋಷ. ಏಕೆಂದರೆ ನಮಗೆ ನಮ್ಮ ಮಹಾಪ್ರಭುಗಳ ಸರ್ಕಾರದ ಅವಿಚ್ಛಿನ್ನವಾದ ಆಶ್ರಿಕೆ ದೊರೆತಿದೆ. ಬ್ರಿಟಿಷ್ ಪ್ರಾಂತಗಳಲ್ಲಿ ಆರಂಭವಾದದ್ದು ತಕ್ಕ ಸಹಕಾರ ಮತ್ತು ಬೆಂಬಲವಿಲ್ಲದೆ ಬೆಳೆಯಲಿಲ್ಲ. ಅದರೆ ನಮ್ಮ ಯೋಜನೆ ಶ್ರೀಮನ್ಮಹಾರಾಜರವರ ಸರ್ಕಾರದ ಪ್ರೋತ್ಸಾಹ ಮತ್ತು ಬೆಂಬಲದಿಂದ ಬಹಳ ಮೊಡ್ಡದಾಗಿ ಬೆಳೆಯಿತು. ಇಷ್ಟು ಕೆಲಸಮಾಡಿರುವುದು ನುಂದೆ ಮಾಡಬೇಕಾಗಿರುವ ಕೆಲಸದ ದೃಷ್ಟಿಯಿಂದ ಸಾಕಾಗಿಲ್ಲವೆನಿಸಿದರೂ ಚೆನ್ನಾಗಿ ಆರಂಭ ಮಾಡಿದ್ದೇನೆ ಎನ್ನುವ ಹೆಮ್ಮೆಯಿದೆ. ಸರ್ಕಾರವು ಗ್ರಾಮಾಂತರದಲ್ಲಿ ನಡೆಯುವ ಯುದ್ಧಾನಂತರದ ಪುನರ್ನಿರ್ಮಾಣ ಯೋಜನೆಗೋಸ್ಕರ ಬೇಕಾದಷ್ಟು ಹಣವನ್ನು ಖರ್ಚುಮಾಡಲು ಸಿದ್ಧವಿದೆ ಆದ್ದರಿಂದ ಇದರ ಅಂಗವಾಗಿ ಸಮಿತಿಯ ಕೆಲಸವು ಹೆಚ್ಚುವುದರಲ್ಲಿ ಹಣದ ಸಂಕಯವೂ ಇಲ್ಲ.

ಕೊನೆಯದಾಗಿ ನನ್ನ ಶ್ರೀಮನ್ಮಹಾರಾಜರವರು ದೇಶದ ಈ ಎಲ್ಲಾ ಅಭ್ಯುದಯಕ್ಕೂ ಮುಖ್ಯ ಕಾರಣರಾಗಿದ್ದಾರೆ. ಅವರಿಗೆ ಶ್ರೀ ಚಾಮುಂಡೇಶ್ವರೀ ದೇವಿಯು ಎಲ್ಲ ಸುಖಸಂತೋಷಗಳನ್ನೂ ದಯಪಾಲಿಸಲೆಂದು ಪ್ರಾರ್ಥಿಸುತ್ತೇನೆ

ಮೈಸೂರಿನಲ್ಲಿ ೧೫೦ ಮೈಲಿ ರಸ್ತೆಗಳು

ಯುದ್ಧಾನಂತರದ ಯೋಜನೆಯ ಅಂಗವಾಗಿ ಮೈಸೂರು ಸರ್ಕಾರದವರು ೧೫೦೦ ಮೈಲಿಗಳ ರಸ್ತೆ ತಯಾರಿಕೆಗಾಗಿ ಒಂದು ಯೋಜನೆ ಸಿದ್ಧಗೊಳಿಸಿದ್ದಾರೆ. ಇದಕ್ಕೆ ೪॥ ಕೋಟಿ ರೂಪಾಯಿಗಳು ವೆಚ್ಚವಾಗುವುದು ಮತ್ತು ಈ ಕೆಲಸ ಪೂರೈಸಲು ೫ ವರ್ಷಗಳು ಹಿಡಿಯುತ್ತದೆ ೧೫೦೦ ಮೈಲಿ ಹೊಸ ರಸ್ತೆಗಳು, ೬೪ ಸೇತುವೆಗಳು, ೩೦೦ ಮೈಲಿ ಟ್ರಂಕ್ ರಸ್ತೆಗಳಿಗೆ ಸಿಮೆಂಟ್ ಕಾಂಕ್ರೀಟ್ ಮತ್ತು ೩೦೦ ಮೈಲಿ ರಸ್ತೆಗೆ ಅಸಾಫಾಲ್ಟ್ ಹಾಕಲಾಗುವುದು

(೧ನೆಯ ಪುಟದಿಂದ ಮುಂದುವರಿದುದು)

ದೊಡ್ಡಿ ಮತ್ತು ಮಡೇನಳ್ಳಿ ಗ್ರಾಮಗಳಲ್ಲಿ ಬಹು ವಿದ್ವಂಭಗೆಯಿಂದ ನಡೆಯಿತು ಉತ್ಸವಕ್ಕೆ ಮಂಡ್ಯ ಡಿ॥ ಡೆಪ್ಯುಟೆಕಮಿಷನರ್ ಸಾಹೇಬರವರು ಅಮಲ್ದಾರ್‌ರವರೂ ರವಿನ್ಯೂ ಇನ್‌ಸ್ಪೆಕ್ಟರ್‌ರೂ ಆಗಮಿಸಿದ್ದರಿಂದ ಉತ್ಸವಕ್ಕೆ ಒಳ್ಳೆ ಶೋಭೆಯುಂಟಾಗಿತ್ತು

ಡೆಪ್ಯುಟಿಕಮಿಷನರ್ ಸಾಹೇಬರವರು ಕುಟುಂಬ ಸಮೇತ ಶ್ರೀಮಠಕ್ಕೆ ಬಂದು ಗುರುಕಾರ್ಯವನ್ನು ನೆರವೇರಿಸಿ ಮರುದಿನವೆ ಪ್ರಯಾಣ ಬೆಳೆಸಿದರು ಉತ್ಸವ ಕ್ಕಾಗಿ ೪-೫ ಸಹಸ್ರ ಜನರು ಸೇರಿದ್ದರು ಉತ್ಸವವು ವರ್ಣನಾತೀತವಾಗಿತ್ತು

ಸೀರಾಭಿವಾಸಿ ಹೆಚ್ ಎಸ್ ರಾಜಮೂರ್ತಿ

ಪಟ್ಟಾಭಿಷೇಕಮಹೋತ್ಸವ, ಅಫಜಲಪುರ

ನಿಜಾಂ ಇಲಾಖಾ ಬಸೀರಾಬಾದ ಜಿಲ್ಲಾ, ಅಫಜಲ ಪುರಗ್ರಾಮದಲ್ಲಿರುವ ಗುರುವರ್ಗದ ಮರಕ್ಕೆ ಬಿಜಾಪುರ ಡಿ॥ ಗಲಗಲಿಗ್ರಾಮದ ವೀರಭಿಕ್ಷಾವೃತ್ತಿಮಠದ ಶ್ರೀ ಶಾಂತವೀರಸ್ವಾಮಿಯವರಿಗೆ, ಇದೇ ವೈಶಾಖ ಶು॥ ೩ ಶನಿವಾರದಿನ ಪಟ್ಟಾಭಿಷೇಕಮಹೋತ್ಸವವು ಬಹಳ ವೈಭವದಿಂದ ನೆರವೇರಿತು ಈ ಮಹೋತ್ಸವಕ್ಕಾಗಿ ಜೇವರಗಿ, ಸಿಂದಗಿ ವೈಂಡಂಗೆರಿ ಜಂಬಗಿ ಕಡಪಟ್ಟಿ ನಾಗರಾಣಾ, ಅಲಮೇಲ ಮೊದಲಾದ ಗ್ರಾಮಗಳ ಪಟ್ಟು ಪರಂಧಿಕಾರಿಗಳು ಆಗಮಿಸಿದ್ದರು ಪಟ್ಟಾಧಿಕಾರ ಕಾರ್ಯವು ಅಲಮೇಲ ಶ್ರೀಗಳವರ ಅಧ್ಯಕ್ಷತೆಯಲ್ಲಿ ವೇ॥ ಪಂ॥ ಮಣೂರು ಮಲ್ಲಿಕಾರ್ಜುನಶಾಸ್ತ್ರಿಗಳು ಸೊಲ್ಲಾಪುರ ಇವರ ಪೌರೋಹಿತ್ಯದಿಂದ ವಿಧ್ಯುಕ್ತವಾಗಿ ನೆರವೇರಿತು ಆ ದಿವಸ ಸಾಯಂಕಾಲ ೬ ಗಂಟೆಗೆ ನೂತ ನಾದಿಕಾರಿಗಳ ಪಲ್ಲಕ್ಕಿ ಮಹೋತ್ಸವವು, ಶ್ರೀಜಗದಾ ಚಾರ್ಯರ ಜಯಘೋಷದಿಂದಲೂ, ನಾನಾ ವಿಧವಾದ ವಾದ್ಯವೈಭವದಿಂದಲೂ ಒಹು ಒಟ್ಟಿಗಾ ದೂಡನೆ ನರ ನೇರಿತು ನೂತನಾದಿಕಾರಿಗಳು ಶಾಂತಸ್ವಭಾವದವರೂ ವಿದ್ವಾಂಸರೂ ಹಿತರೂ ಆಗಿರುವರು ಈ ಅಧಿಕಾರವನ್ನು ಮಾಡಿಸಿಕೊಡಬಾರದೆಂದು ಒಬ್ಬ ವಿರಕ್ತನು ಒಬ್ಬ ಕಪ್ಪಸಟ್ಟನು ಅವರೂ ಜಗದಾಚಾರ್ಯರ ಅನುಗ್ರಹದಿಂದ ಆತನ ಮರುದ್ದೇಶವು ನರವೇರಲಿಲ್ಲ ಶ್ರೀಮಾ ಬಾಂ ಸಾಹೇಬ ದೇಶಮುಖ ಆಣ್ಣಾರಾವ ದೇಶಮುಖ ಬಾಬಾ ಸಾಹೇಬ ದೇಶಮುಖ ಕಲ್ಲೂರು ಸಂಗ್ರಾಮರಾವ ಪಾಟೀಲ ಅಫಜಲಪುರ ತಿವಠಂಕರರಾವ ಗಣಾಚಾರಿ ಸಾಹೇಬ್ ಪಾಟೀಲ ಅಫಜಲಪುರ ಜಾಂದಪೀಬ ವತೀಲರು ತಫಜಲಪುರ ಇವರೆಲ್ಲರೂ ಬಹುಶ್ರಮ ವಹಿಸಿ ಈ ಕಾರ್ಯವನ್ನು ಸರವೇರಿಸಿದರು ಈ ಮಹೋತ್ಸವ ರೆಲ್ಲರಿಗೂ ಶ್ರೀಜಗದಾಚಾರ್ಯರು ಆಯುರಾರೋಗ್ಯ ಭಾಗ್ಯಾದಿಗಳನ್ನೆಯಲೆಂದು ಪ್ರಾರ್ಥಿಸುವ

ವಿರೂಪಾಕ್ಷಶರ್ಮ ಅರಾಧ್ಯನರ
ದಾವಣಗೆರೆ

ಸತ್ಕಂಕರ ಪೂಜಾ ಸಮಾರಂಭ ಬೊಂಬಾಯಿ

ಬೊಂಬಾಯಿ ವಿಲೇಜ್ ರೋಡ್ ಪರಿಸರಾಡಿ ಯಲ್ಲಿರುವ ಶ್ರೀಮಂತ ಈಶ್ವರಪ್ಪ ಚನ್ನಬಸಪ್ಪ ಪಾವರ್‌ವಾಲಾ ಇವರಿಗೆ ಟೈಫಾಯಿಡ್ ಜ್ವರವು ಬಂದು ಬಹಳ ಕಷ್ಟಕ್ಕೀಡಾಗಿದ್ದರು ಬದುಕುವ ಸಂಭವವೇ ಇದ್ದಿಲ್ಲ ಇಂಥ ಸಮಯದಲ್ಲಿ ಬೆಳಗಾಂ ಸಿಟಿಯಲ್ಲಿರುವ ನೇ॥ ಪಂಡಿತ ಶ್ರೀಕೃಷ್ಣ ಥಳಶಾಸ್ತ್ರಿಗಳವರಿಗೆ ಟೆಲಿಗ್ರಾಂ ಮಾಡಿ ಅವರನ್ನು ಕರೆಯಿಸಿಕೊಂಡು ಸತ್ಕಂಕರ ಪೂಜೆ ಯನ್ನು ಈ ತಿಂಗಳು 9 ನೆಯ ತಾರೀಖಿನ ದಿವಸ ಪ್ರಾರಂಭಿಸಿದರು ಈ ಪೂಜಾ ಸಮಯಕ್ಕೆ ಅವರ ಬಂಧುಮಿತ್ರರುಗಳಾದಿಯಾಗಿ ಸಾವಿರಾರು ಜನರು ಕೂಡು ತ್ತಿದ್ದರು ಪಂಡಿತರು ಸತ್ಕಂಕರ ನುಡಿಸಿಯನ್ನೂ ಶ್ರೀ ಜಗದ್ಗುರು ಪಂಚಾಚಾರ್ಯರ ಮಹಿಮೆಗಳನ್ನು ತಮ್ಮ ಅಮೃತವಾಣಿಯಿಂದ ಹೇಳಿ, ಸರ್ವರನ್ನೂ ಸಂತೋಷಪ ಡಿಸಿದರು ಈಪೂಜಾಪ್ರಭಾವದಿಂದ ಮೃತ್ಯುಮುಖರಾ ಗಿದ್ದ ಶ್ರೀಮಂತ ಈಶ್ವರಪ್ಪನವರಿಗೆ ಗುಣವಾಯಿತು ಈ ಸಂತೋಷಕ್ಕಾಗಿ ಸದರಿ ಶ್ರೀಮಂತರು ಸದರಿ ಪಂಡಿತ ರಿಗೂ ಅವರ ಧರ್ಮ ಪತ್ನಿಯವರಿಗೂ ಒಂದು ಸಾವಿರ ರೂಪಾಯಿಗಳನ್ನು ಸಮರ್ಪಿಸಿದರು ಆ ಸಮಯದಲ್ಲಿ ಶ್ರೀಮಂತರ ಮಂದಿರವೆಲ್ಲವೂ ಶ್ರೀಜಗದ್ಗುರು ಪಂಚಾಚಾ ರ್ಯರ ಜಯಧ್ವನಿಯಿಂದ ಪ್ರತಿಧ್ವನಿತವಾಗಿತ್ತು ಶ್ರೀ ಜಗದಾಚಾರ್ಯರು ಶ್ರೀಮಂತ ಈಶ್ವರಪ್ಪನವರಿಗೆ ಇನ್ನೂ ಹಚ್ಚಾದ ಆರೋಗ್ಯವನ್ನೀಯಲೆಂದು ಆಶಿಸುವ

ಗಂಗಾರಾಮು ಮೊಕದ್ದಮು
ಪಟೀಲವಾಡಿ, ಬೊಂಬಾಯಿ

ಬೆಂಗಳೂರು ಅರಸೀಕೆರೆಗೆ ಹೊಸ ನಮೂನೆ ರೇಲ್ವೆ ಸ್ಪೇಷ್

ಬೆಂಗಳೂರು ಸಿಟಿ ಮತ್ತು ಅರಸೀಕೆರೆ ರೇಲ್ವೆ ಸೆಕ್ಷನ್ ಗಳನ್ನು ಹೊಸನಮೂನೆಯಲ್ಲಿ ೩೦ ಲಕ್ಷ ರೂಪಾಯಿ ಅಂದಾಜಿನಲ್ಲಿ ಕಟ್ಟಬೇಕೆಂದು ರೇಲ್ವೆ ಸಮಿತಿಯವರು ಶಿಪಾರ್ಸ್ ಮಾಡಿದ್ದಾರೆ ಬೆಂಗಳೂರು ಮತ್ತು ನೈಸೂರು ಮನೆ ಎಲೆಕ್ಟ್ರಿಕ್ ರೇಲ್ವೆ ಹಾಕಲು ಪೂರ್ಣ ಭಾವಿ ಸಿದ್ಧ ತೆಗಳಿಗೆ ೩ ಲಕ್ಷ ರೂಪಾಯಿಗಳನ್ನು ಸಿಪಾರಸು ಮಾಡಿ ದ್ದಾರೆ ಎಲೆಕ್ಟ್ರಿಕ್ ರೇಲ್ವೆ ಎಜಿಗಳು ಬಂದಮೇಲೆ ಎಲೆ ಕ್ಟ್ರಿಕ್‌ರೈಲ್ವೆ ಹಾಕುವ ಕೆಲಸ ಕೈಕೊಳ್ಳಲಾಗುವುದು

ಸರ್ವೋತ್ತಮವಾದ ಮತಗ್ರಂಥಗಳು

ಸೋತ್ರಸೂತ್ರಪಟ (೩ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶಕ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೨ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿಶಿವತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯರಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯರಶತಕ	೨ ಆಣೆ
ಶಿವಕಶ್ಮಿವಿಲಾಸ	೨ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಚಪಿಂಡಿತಕಾರಾಧ್ಯರ ಕಾಲನಿರ್ಣಯ	೪ ಆಣೆ
ಕೈವೋಪನಿಷತ್ಸಂಗ್ರಹ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂಶ್ಕೀಸ್ಯ-ಶಾಶ್ವದ್ಯವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಪಾಸ್ತ್ರ. ಚಿತ್ರಪಟಗಳು)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಒಸವಧ್ಯಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವದೃಷ್ಟತರಂಭಾಷಾ (ಸಂಸ್ಕೃತ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಗಳು (೨ಲ ೧)	೮ ಆಣೆ
ಸಮ್ಯಗ್ವರತ್ನಾವಳಿ	೮ ಆಣೆ
